بِسْمِ اللهِ الرَّحْمٰنِ الرَّحِيْمِ    نَحْمَدُهٗ وَنُصَلِّيْ عَلٰى رَسُوْلِهِ الْكَرِيْمِ    وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

# ಕನ್ನಡ ಬದರ್ ವಾರ ಪತ್ರಿಕೆ
# WEEKLY BADAR QADIAN KANNADA

ವರ್ಷ: 03

ಸಂಚಿಕೆ: 22

ವಾರ್ಷಿಕ ಶುಲ್ಕ ರೂ.575/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

02 ಜೂನ್ 2022, 02 ಇಹ್ಸಾನ್ 1401 ಹಿಜರಿ ಶಮ್ಸಿ,
01 ಧ಼ಿಲ್ ಖಅ್‌ದಃ 1443 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ۔

## ಅಲ್ಲಾಹನ ಉಪದೇಶ

وَاَنْذِرْ بِهِ الَّذِيْنَ يَخَافُوْنَ اَنْ يُّحْشَرُوْٓا
اِلٰى رَبِّهِمْ لَيْسَ لَهُمْ مِّنْ دُوْنِهٖ وَلِيٌّ
وَّلَا شَفِيْعٌ لَّعَلَّهُمْ يَتَّقُوْنَ

(ಅಲ್ ಅನ್‌ಆಮ್ : 52)

ಅಂದರೆ: ತಮ್ಮ ಪ್ರಭುವಿನ ಸನ್ನಿಧಿಯಲ್ಲಿ ಒಂದುಗೂಡಿಸಲ್ಪಡಲಿದ್ದೇವೆಂದೂ ತಮಗೆ ಅವನ ಹೊರತು ರಕ್ಷಕನಾಗಿ ಅಥವಾ ಶಿಫಾರಸು ಸ್ವೀಕರಿಸುವವನಾಗಿ ಯಾರೂ ಇಲ್ಲವೆಂದೂ ಭಯಪಡುವವರಿಗೆ, ಇದರ (ಈ ಖುರ್‌ಆನ್) ಮೂಲಕ ಮುನ್ನೆಚ್ಚರಿಕೆ ನೀಡು- ಅವರು ಭಯಭಕ್ತಿಯುಳ್ಳವರಾಗಲಿಕ್ಕೋಸ್ಕರ.

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ಹಝ್ರತ್ ಸಅದ್ ಬಿನ್ ರಬಿ(ರ) ಅವರ ಆತ್ಮ ತ್ಯಾಗದ ಮನೋಭಾವ.

**(2048)** ಹಝ್ರತ್ ಅಬ್ದುಲ್ ರಹಮಾನ್ ಬಿನ್ ಔಫ್(ರ) ಹೇಳುತ್ತಾರೆ: ನಾವು ಮದೀನಕ್ಕೆ ಬಂದಾಗ ರಸೂಲುಲ್ಲಾಹ್(ಸ) ಅವರು ನನ್ನನ್ನು ಮತ್ತು ಸಅದ್(ರ) ಬಿನ್ ರಬಿಯನ್ನು ಸಹೋದರರನ್ನಾಗಿ ಮಾಡಿದರು, ನಂತರ ಸಅದ್ ಬಿನ್ ರಬಿ(ರ) ಹೇಳಿದರು: ನಾನು ಅನ್ಸಾರ್‌ಗಳಲ್ಲಿ ಬಹಳ ಶ್ರೀಮಂತನಾಗಿದ್ದೇನೆ. ಆದುದರಿಂದ ನಾನು ಅರ್ಧದಷ್ಟು ಸಂಪತ್ತನ್ನು ನಿಮಗೆ (ಅಬ್ದುರ್ರಹ್ಮಾನ್ ಬಿನ್ ಔಫ್(ರ)) ಕೊಡುತ್ತೇನೆ ಮತ್ತು ನನ್ನ ಇಬ್ಬರು ಹೆಂಡತಿಯರಲ್ಲಿ ಯಾರನ್ನು ನೀವು ಇಷ್ಟಪಡುತ್ತೀರಿ ನಾನು ಅವಳನ್ನು ನಿಮಗಾಗಿ ಬಿಟ್ಟುಬಿಡುತ್ತೇನೆ. ಅವಳ ಇದ್ದತ್(ಮುಸ್ಲಿಮ್ ಮಹಿಳೆಗೆ ಮರುವಿವಾಹ ಆಗಬಾರದ ಅವಧಿ) ಮುಗಿದ ಮೇಲೆ ನೀವು ಅವಳನ್ನು ಮದುವೆಯಾಗಬೇಕು. ವರದಿಗಾರರು (ಇದನ್ನು ಕೇಳಿದ) ಹೇಳಿದರು: ಹಝ್ರತ್ ಅಬ್ದುಲ್ ರಹಮಾನ್(ರ) ಅವರಿಗೆ ಹೇಳಿದರು: ನನಗೆ ಇದರ ಅಗತ್ಯವಿಲ್ಲ, ವ್ಯಾಪಾರ ನಡೆಯುವ ಯಾವುದೇ ಮಾರುಕಟ್ಟೆ ಇದೆಯೇ? ಆಗ ಅವರು ಉತ್ತರಿಸಿದರು ಖಯನಖಾನ ಮಾರುಕಟ್ಟೆ ಇದೆ ಎಂದರು. ಇದನ್ನು ತಿಳಿದ ಹಝ್ರತ್ ಅಬ್ದುಲ್ ರಹಮಾನ್ ಅವರು ಮುಂಜಾನೆಯೇ ಅಲ್ಲಿಗೆ ಹೋಗಿ ಪನ್ನೀರ್ ಮತ್ತು ತುಪ್ಪವನ್ನು ತಂದರು. ವರದಿಗಾರರು ಹೇಳುತ್ತಾರೆ: ಆಗ ಅದೇ ರೀತಿ ಅವರು ಪ್ರತಿದಿನ ಬೆಳಿಗ್ಗೆ ಮಾರುಕಟ್ಟೆಗೆ ಹೋಗುತ್ತಿದ್ದರು. ಕೆಲವು ದಿವಸಗಳ ನಂತರ, ಹಝ್ರತ್ ಅಬ್ದುಲ್ ರಹಮಾನ್(ರ) ಬಂದರು ಮತ್ತು ಅವರ ಮೇಲೆ ಝಾಫ್ರಾನ್‌ನ (ಕುಂಕುಮ ಕೇಸರಿಯು) ಬಣ್ಣದ ಚಿಹ್ನೆ ಇತ್ತು, ಆಗ ರಸೂಲುಲ್ಲಾಹ್(ಸ) ಹೇಳಿದರು: ನೀವು ಮದುವೆಯಾಗಿದ್ದೀರಾ? ಹೌದು ಎಂದು ಅವರು ಉತ್ತರಿಸಿದರು. ಅದಕ್ಕೆ ಅವರು(ಸ) ಕೇಳಿದರು: ಯಾರೊಂದಿಗೆ? ಅವರು ಹೇಳಿದರು: ಅನ್ಸಾರ್ ಮಹಿಳೆಯೊಬ್ಬರನ್ನು. ಅವರು ಕೇಳಿದರು: ವರದಕ್ಷಿಣೆ ಎಷ್ಟು ನೀಡಿದ್ದೀರಿ? ಅದಕ್ಕೆ ಅವರು ಹೇಳಿದರು: ಒಂದು ಬೀಜದ ಸಮನಾದ ಚಿನ್ನ (ಎಂದು ಹೇಳಿದರು). ಪ್ರವಾದಿ(ಸ) ಅವರಿಗೆ ಹೇಳಿದರು: ವಲೀಮ (ವಿವಾಹದ ನಂತರ ಗಂಡಿನಕಡೆಯಿಂದ ಏರ್ಪಡಿಸುವ ಔತನಕೂಟ) ಮಾಡಿರಿ ಅದು ಮೇಕೆಯಾದರೂ ಸರಿ.

**(ಸಾಹಿಹ್ ಬುಖಾರಿ, ಸಂಪುಟ 4, ಕಿತಾಬುಲ್ ಬುಯೂ, 2008 ಖಾದಿಯಾನ್)**

**ಅಲ್ಲಾಹನ ಪ್ರವಾದಿಗಳನ್ನು ಮತ್ತು ಅವರ ಪ್ರಿಯ ದಾಸರನ್ನು ಪೀಡಿಸುವುದು ಅಥವಾ ವಿರೋಧಿಸುವುದು ಎಂದೂ ಒಳ್ಳೆಯ ಫಲ ನೀಡುವುದಿಲ್ಲ.**
**ಯಾವ ವ್ಯಕ್ತಿ ಅವರನ್ನು ಪೀಡಿಸಿಯೂ ತಾನು ಸುಖವಾಗಿರಬಹುದು ಎಂದು ಭಾವಿಸುತ್ತಾನೋ ಅವನು ಬಹಳ ದೊಡ್ಡ ತಪ್ಪು ಮಾಡುತ್ತಿದ್ದಾನೆ ಮತ್ತು ತನ್ನ ಆತ್ಮವನ್ನು ವಂಚಿಸುತ್ತಿದ್ದಾನೆ.**

### ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ಇದು ತತ್ವ ಸಹಜ ಮಾತಾಗಿದೆ. ಒಬ್ಬ ವ್ಯಕ್ತಿ ಒಬ್ಬನನ್ನು ಪ್ರೀತಿಸುತ್ತಿದ್ದಾನೆ, ತನ್ನ ಸಂತಾನವನ್ನು ಪ್ರೀತಿಸುವ ರೀತಿಯಲ್ಲಿ ಪ್ರೀತಿಸುತ್ತಾನೆ. ಅಂತಹವರ ಬಗ್ಗೆ ವ್ಯಕ್ತಿಯೊಬ್ಬ ಪದೇ ಪದೇ ಅವರು ಸತ್ತು ಹೋಗಲಿ ಅಥವಾ ಅದೇ ರೀತಿಯ ಮನನೋಯಿಸುವ ಮಾತನಾಡಿದರೆ ಮತ್ತು ಪೀಡಿಸಿದರೆ ಆ ವ್ಯಕ್ತಿ ಹೇಗೆ ತಾನೇ ಸಂತುಷ್ಟನಾಗುವನು? ಮತ್ತು ತಂದೆಯ ಆ ಮಕ್ಕಳನ್ನು ಶಾಪ ಹಾಕುತ್ತಿದ್ದಾನೆ ಅಥವಾ ದು:ಖ ನೀಡುವ ಮಾತುಗಳನ್ನು ಅವರ ಬಗ್ಗೆ ಹೇಳುತ್ತಿದ್ದರೆ ಆ ವ್ಯಕ್ತಿ ಅವನೊಂದಿಗೆ ಹೇಗೆ ಪ್ರೀತಿ ಇರಲು ಸಾಧ್ಯ? ಅದೇ ರೀತಿ ಅಲ್ಲಾಹನ ಸಜ್ಜನ ಪುರುಷರು (ಪ್ರಿಯ ದಾಸರು) ಸಹ ಅವನ ದೃಷ್ಟಿಯಲ್ಲಿ ಮಕ್ಕಳ ರೀತಿಯಲ್ಲಿ ಇರುತ್ತವೆ. ಏಕೆಂದರೆ ಅವರುಗಳು ಶಾರೀರಿಕ ಸುಖವನ್ನು ತ್ಯಜಿಸಿ ಅಲ್ಲಾಹನ ಅನುಗ್ರಹದ ಮಡಿಲಿನಲ್ಲಿ ಬೆಳವಣಿಗೆ ಪಡೆಯುತ್ತಿದ್ದಾರೆ. ಅವನು ಅವರ ರಕ್ಷಕ, ಪಾಲಕ ಮತ್ತು ಅವರಿಗೋಸ್ಕರ ಹೆಮ್ಮೆಪಡುವವನಾಗಿದ್ದಾನೆ. ಅಂತಹ ವ್ಯಕ್ತಿ ಒಬ್ಬರಿಗೆ (ಅವನು ಎಂತಹದೇ ನಮಾಝ್, ಉಪವಾಸ ನಿರ್ವಹಿಸುವವನಾಗಲಿ) ವಿರೋಧಿಸಿದರೆ ಮತ್ತು ಅವರಿಗೆ ದು:ಖ ನೀಡಲು ಪಣತೊಟ್ಟರೆ ಅಲ್ಲಾಹನ ಕ್ರೋಧ ಉಲ್ಬಣಿಸುತ್ತದೆ ಮತ್ತು ವಿರೋಧ ಮಾಡುವವರ ಮೇಲೆ ಅವನ ಪ್ರಕೋಪ ಜಾಹೀರಾಗುತ್ತದೆ. ಏಕೆಂದರೆ ಅವರು ಅವನ ಪ್ರಿಯನಾದವನೊಬ್ಬನಿಗೆ ದು:ಖ ನೀಡಬಯಸಿದ್ದಾನೆ. ಆಗ ಅವನಿಗೆ ನಮಾಝ್ ಆಗಲಿ ಉಪವಾಸ ಆಗಲಿ ಕೆಲಸಕ್ಕೆ ಬರುವುದಿಲ್ಲ. ಏಕೆಂದರೆ ನಮಾಝ್ ಉಪವಾಸ ಅವನನ್ನು ಸಂತೋಷಪಡಿಸುವ ಉದ್ದೇಶವಾಗಿತ್ತು. ಆದರೆ ಅವರು ಇನ್ನೊಂದು ರೀತಿಯಲ್ಲಿ ಅವನ ಅಸಂತುಷ್ಟಿಗೆ ಕಾರಣರಾಗಿದ್ದಾರೆ. ಅಂತಹವರಿಗೆ ಹೇಗೆ ಅವನ ಸಾಮಿಪ್ಯ ಪ್ರೀತಿ ಸಿಗಲು ಸಾಧ್ಯ? ಅವನ ಕ್ರೋಧ ದೂರ ಆಗುವವರೆಗೆ ಅದು ಸಾಧ್ಯವಿಲ್ಲ. ಆ ಮೂರ್ಖ ಈ ರಹಸ್ಯವನ್ನು ತಿಳಿದಿರುವುದಿಲ್ಲ. ಬದಲು ತನ್ನ ನಮಾಝ್ ಉಪವಾಸದ ಮೇಲೆಯೇ ಗರ್ವ ಹೊಂದಿರುತ್ತಾನೆ. ಅದರ ಪರಿಣಾಮವಾಗಿ ಅಲ್ಲಾಹನ ಪ್ರಕೋಪ ದಿನೇ ದಿನೇ ಹೆಚ್ಚುತ್ತಾ ಹೋಗುತ್ತದೆ. ಅಲ್ಲಾಹನ ಸಾಮಿಪ್ಯಗೊಳಿಸುವ ಬದಲಿಗೆ ಅವನಿಂದ ದೂರವಾಗ ತೊಡಗುತ್ತಾನೆ. ಎಲ್ಲಿಯವರೆಗೆಂದರೆ ಅವರು ಅವನ ಆಸ್ಥಾನದಿಂದ ಧಿಕ್ಕರಿಸಲ್ಪಡುತ್ತಾರೆ.

ಅದೇ ರೀತಿ ಒಬ್ಬ ವ್ಯಕ್ತಿ ಸಂಪೂರ್ಣ ಶರಣ ಸ್ಥಿತಿಯಲ್ಲಿದ್ದಾನೆ ಮತ್ತು ಅವನ ಆಸ್ಥಾನ ಮೇಲೆ ಬಿದ್ದಿರುತ್ತಾನೆ. ಅವನ ಲಾಲನೆ ಪಾಲನೆ ಪಡೆಯುತ್ತಿದ್ದಾನೆ. ಅಲ್ಲಾಹನ ಅನುಗ್ರಹ ಅವನನ್ನು ಆವರಿಸಿಕೊಂಡಿದೆ. ಎಲ್ಲಿಯವರೆಗೆ ಅಂದರೆ ಅವನ ಮಾತುಗಳು ಅಲ್ಲಾಹನ ಮಾತುಗಳಾಗಿರುತ್ತವೆ. ಅವನಿಗೆ ಮಿತ್ರನಾದವನು ಅಲ್ಲಾಹನ ಮಿತ್ರ ಮತ್ತು ಅವನಿಗೆ ಶತ್ರು ಆದವನು ಅಲ್ಲಾಹನ ಶತ್ರು ಆಗಿ ಬಿಡುತ್ತಾನೆ. ಹಾಗೆ ಅಲ್ಲಾಹನ ಶತ್ರುವಾಗಿದ್ದುಕೊಂಡು ಯಾವ ವ್ಯಕ್ತಿಗೆ ಆಗಲಿ ಪರಿಪೂರ್ಣ ಸತ್ಯವಿಶ್ವಾಸಿಯಾಗಲು ಸಾಧ್ಯವೇ? ಆಗ ಅವನ ವಿಶ್ವಾಸ ಕಸಿಯಲ್ಪಡುತ್ತದೆ. ಮತ್ತು ಅವನ ಕ್ರೋಧಕ್ಕೆ ಒಳಪಡುವವರಲ್ಲಿ ಸೇರುತ್ತಾನೆ. ಅಲ್ಲಾಹನ ಪ್ರವಾದಿಗಳಿಗೆ ಮತ್ತು ಅವನ ಪ್ರಿಯ ದಾಸರನ್ನು ಪೀಡಿಸುವುದು ಅಥಾ ವಿರೋಧಿಸುವುದು ಎಂದೂ ಒಳ್ಳೆಯ ಫಲ ನೀಡುವುದಿಲ್ಲ. ಯಾವ ವ್ಯಕ್ತಿ ಅವರನ್ನು ಪೀಡಿಸಿಯೂ ನಾನು ಸುಖವಾಗಿರಬಹುದೆಂದು ಭಾವಿಸುತ್ತಾನೋ ಅವನು ಬಹಳ ದೊಡ್ಡ ತಪ್ಪು ಮಾಡುತ್ತಿದ್ದಾನೆ ಮತ್ತು ತನ್ನ ಆತ್ಮವನ್ನು ವಂಚಿಸುತ್ತಿದ್ದಾನೆ.

**(ಮಲ್ಫೂಝಾತ್ ಸಂಪುಟ-1, ಪುಟ 314 ಮುದ್ರಣ 2018 ಖಾದಿಯಾನ್)**

**ಹೆಣ್ಣು ಮಕ್ಕಳನ್ನು ಕೆಟ್ಟವರು ಎಂದು ಭಾವಿಸುವವರ ಕೃತ್ಯವು ತುಂಬಾ ಕೆಟ್ಟದ್ದಾಗಿದೆ**
**ಹೆಣ್ಣು ಮಕ್ಕಳಿಲ್ಲದಿದ್ದರೆ ಅವರು ಹೇಗೆ ಹುಟ್ಟುತ್ತಾರೆ? ಮತ್ತು ಭವಿಷ್ಯದಲ್ಲಿ ಹೆಣ್ಣುಮಕ್ಕಳಿಲ್ಲದಿದ್ದರೆ ಅವರ ಪುತ್ರರ ಸಂತನವು ಹೇಗೆ ಮುಂದುವರಿಯುತ್ತದೆ?**
**ಮೊದಲಿನಿಂದಲೂ ಮಹಿಳೆಯರ ಹಕ್ಕುಗಳನ್ನು ರಕ್ಷಿಸುವ ಗ್ರಂಥ ಯಾವುದು? ಇದು ಪವಿತ್ರ ಖುರ್‌ಆನ್ ಮಾತ್ರ ಆಗಿದೆ**

ಸಯ್ಯದ್‌ನಾ ಹಝ್ರತ್ ಮುಸ್ಲಿಹ್ ಮೌಊದ್(ರ) ಸೂರಃ ಅನ್ನಹಲ್ ವಚನ 60 **ಯತವಾರಾ ಮಿನಲ್ ಖೌಮಿ ಮಿನ್ ಸೂಇ ಮಾ ಬುಶ್ಶಿರ ಬಿಹೀ, ಅಯುಮ್ಸಿಕುಹೂ ಅಲಾ ಹೂನಿನ್ ಅಮ್ ಯದುಸ್ಸುಹೀ ಫಿತ್ತುರಾಬ್, ಅಲಾ ಸಾಅ ಮಾ**

*(ಪುಟ ಸಂಖ್ಯೆ-09 ರಲ್ಲಿ ಮುಂದುವರಿಸಲಾಗಿದೆ)*

لَآ اِلٰهَ اِلَّا اللّٰهُ مُحَمَّدٌ رَّسُوْلُ اللّٰهِ

## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**
ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرٌّ مَا فِي الْعَالَمِ ✿ شَرَّ السُّمُوْمِ عَدَاوَةُ الصُّلَحَاءِ

**ಅಲ್ಲಾಹನ ಹೆಸರಿನಲ್ಲಿ ಸುಳ್ಳು ಹೇಳುವವರಿಗೆ 23 ವರ್ಷಗಳ ಕಾಲಾವಕಾಶ ದೊರೆಯಲು ಸಾಧ್ಯವೇ ಇಲ್ಲ.**
**ಹಾಫಿಝ್ ಮುಹಮ್ಮದ್ ಯೂಸೂಫ್ ಜಿಲ್ಲಾಧಿಕಾರಿ ನೆಹರ್ ಅವರಿಗೆ ಅವರ ದಾವೆಯ ಪ್ರಕಾರ, ಅದು ತದ್ವಿರುದ್ಧವಾಗಿ ಸಾಬೀತುಗೊಳಿಸಿದರೆ ಅವರಿಗೆ ಒಂದು ನೂರು ರೂಪಾಯಿಗಳ ಬಹುಮಾನ**

ಸಯ್ಯಿದ್‌ನಾ ಹಝ್ರತ್ ಅಖ್‌ದಸ್ ಮಸೀಹ್ ಮೌಊದ್(ಅ) ಅವರ ಈ ವೈಭವಯುತ ಬಹುಮಾನದ ಪಂಥಾಹ್ವಾನ ನಾವು ಅವರ ಗ್ರಂಥ "ಝುಮೀಮ ತೊಹಫ ಗೋಲ್ಡವಿಯಾ ರೂಹಾನಿ ಖಝಾಯಿನ್ ಸಂಪುಟ 17 ರಿಂದ ಪ್ರಸ್ತುತಪಡಿಸುತ್ತಿದ್ದೇವೆ. ಈ ಪಂಥಾಹ್ವಾನ ವಿಶೇಷವಾಗಿ ಹಾಫಿಝ್ ಮುಹಮ್ಮದ್ ಯೂಸೂಫ್ ಜಿಲ್ಲಾದಿಕಾರಿ ನೆಹರ್ ಅವರಿಗೆ ನೀಡಿದ್ದಾಗಿದೆ. ಅವರ ಜೊತೆಯಲ್ಲೆ ಭಾರತದ ಎಲ್ಲಾ ಉಲಮಾಗಳಿಗೂ ಉತ್ತರ ನೀಡಲು ಆಹ್ವಾನಿಸಿದ್ದಾರೆ. ಅಲ್ಲಾಹು ಸೂರ: ಅಲ್-ಹಾಖದಲ್ಲಿ ಹಝ್ರತ್ ರಸೂಲುಲ್ಲಾಹ್(ಸ) ಸತ್ಯತೆಯ ಪರವಾಗಿ ಈ ಸಾಕ್ಷ್ಯವನ್ನು ನೀಡುತ್ತಾನೆ. ಒಂದು ವೇಳೆ ಈ ನಬಿ ಸುಳ್ಳು ಹೇಳುವವರಾದರೆ ನುಬುವತ್ತಿನ ಸುಳ್ಳು ದಾವೆ ಹೂಡುವವನಾದರೆ ನಾವು ಅವನನ್ನು ನಾಶಗೊಳಿಸುತ್ತೇವೆ. ಅದರಿಂದ ಸ್ಪಷ್ಟವಾಗಿ ತಿಳಿದುಬರುವುದೇನೆಂದರೆ ಅವನು ಸುಳ್ಳುಗಾರನಲ್ಲದ ಕಾರಣ ಅಲ್ಲಾಹನು ಅವರಿಗೆ ಅವರ ಗುರಿ ಸಾಧಿಸುವವರಿಗೆ ಕಾಲಾವಕಾಶ ನೀಡಿರುತ್ತಾನೆ.

ನುಬುವತ್ತಿನ ಮಿಥ್ಯವಾದಿಯೊಬ್ಬನಿಗೆ ಯಾವ ನೆಲದಲ್ಲೂ ಅಷ್ಟೊಂದು ಕಾಲಾವಕಾಶ ನೀಡುವುದಿಲ್ಲ. ಇಲ್ಲವಾದಲ್ಲಿ ಸತ್ಯ ಹಾಗೂ ಮಿಥ್ಯವಂತರ ಮಾನದಂಡವೇ ಅನುಮಾನಕ್ಕೆ ಒಳಗಾಗುವುದು. ಈ ನೆಲೆಯಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ತನ್ನ ಸತ್ಯತೆ ಪ್ರಸ್ತುತಪಡಿಸಿದಾಗ ಹಾಫೀಝ್ ಮುಹಮ್ಮದ್ ಯೂಸೂಫ್ ಜಿಲ್ಲಾದಿಕಾರಿ ನೆಹರ್ ಅವರು ಸಯ್ಯಿದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಕೆಲ ಸಹಾಬರ ಸಮಕ್ಷಮದಲ್ಲಿ ಈ ವಾದ ಮಾಡಿದನು. ಸುಳ್ಳುವಾದಿಯಾದ ಪ್ರವಾದಿ ಒಬ್ಬನಿಗೆ ಅವನ ದಾವೆಯ ನಂತರ ಅಷ್ಟು ಅವಧಿ ಏಕೆ ಅದಕ್ಕಿಂತ ಹೆಚ್ಚಿನ ಕಾಲಾವಕಾಶ ದೊರೆಯುತ್ತದೆ ಮತ್ತು ನಾನು ಅದರ ಉದಾಹರಣೆಯುನ್ನು ಕೊಡಬಲ್ಲೆನು ಎಂದು ಸಾರಿದನು. ಹಾಗೆ ಮುಹಮ್ಮದ್ ಯೂಸೂಫ್ ಸಾಹಿಬ್ ದೃಷ್ಟಿಯಲ್ಲಿ ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ನೀಡಿದಂತಹ ಈ ಬಗ್ಗೆಯ ಮಾನದಂಡ ಸುಳ್ಳೆಂದಾಯಿತು. ನವೂಝುಬಿಲ್ಲಾಹ್, ಆಗ ಸಯ್ಯಿದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹಾಫೀಝ್ ಮುಹಮ್ಮದ್ ಯೂಸೂಫ್ ಸಾಹಿಬರಿಗೆ ಪಂಥಾಹ್ವಾನ ನೀಡಿದರು. ಅವರು ಅದರ ಉದಾಹರಣೆ ಪ್ರಸ್ತುತಪಡಿಸಿದರೆ ಅವರಿಗೆ ಐದು ನೂರು ರೂಪಾಯಿಗಳ ಬಹುಮಾನ ನೀಡಲಾಗುವುದು. ಈ ಬಗ್ಗೆ ನಾವು ಸಯ್ಯಿದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಕೆಲ ವೈಭವಯುತ ಅಧ್ಯಾಪನೆಗಳು ಮತ್ತು ಸಾಕ್ಷ್ಯಗಳು ಹಿಂದಿನ ಸಂಚಿಕೆಗಳಲ್ಲಿ ಪ್ರಸ್ತುತಪಡಿಸಿರುತ್ತೇವೆ. ಇನ್ನಷ್ಟು ಅವರ ಅಧ್ಯಾಪನೆಗಳು ಮತ್ತು ಸಾಕ್ಷ್ಯಗಳು ಹಾಗೂ ಅವರ ಕಡೆಗಳಿಂದ ನೀಡಲ್ಪಟ್ಟ ಬಹುಮಾನದ ಪಂಥಾಹ್ವಾನ ನಾವು ಈ ಸಂಚಿಕೆಯಲ್ಲಿ ಪ್ರಸ್ತುತಪಡಿಸುವೆವು.

**ಮಸೀಹ್ ಮೌಊದ್(ಅ) ರವರನ್ನು ಸುಳ್ಳುಗಾರನೆಂದು ಯಾರೆಲ್ಲ ಸಾಬೀತು ಮಾಡಲು ಹೊರಟರೋ ಯಾರೆಲಾ ಅವರ(ಅ) ಮರಣಕ್ಕಾಗಿ ದುಆ ಮಾಡಿದರೋ ಅವರು ಮರಣ ಹೊಂದಿದರು. ಹೀಗಿರುವಾಗ ಗಮನಿಸಿ ನೋಡಿ ಯಾರು ಸತ್ಯವಂತರು ಮತ್ತು ಯಾರು ಸುಲ್ಲುಗಾರರು!!**

ಸಯ್ಯಿದ್‌ನಾ ಹಝ್ರತ್ ಮಸೀಹ್ ಮೌವೂದ್(ಅ) ನುಡಿದರು. ನಿಜವಾಗಿ ಜನರು ಯಾವುದೇ ರೀತಿಯಲ್ಲಿ ನನ್ನನ್ನು ಲೌತಖವ್ವಲ ವಚನದೆಡೆಯಲ್ಲಿ ತರಬಯಸುತ್ತಿದ್ದರು. ಅದಕ್ಕಾಗಿರುವ ಯಾವ ಹೆಜ್ಜೆಗೂ ಹಿನ್ನಡೆ ತೋರಿಸಲಿಲ್ಲ. ಕೆಲ ಮೌಲ್ವಿಗಳು ಹತ್ಯೆಯ ಫತ್ವ ನೀಡಿದರು. ಕೆಲ ಮೌಲ್ವಿಗಳು ಸುಳ್ಳು ಹತ್ಯೆಯ ಮೊಕದ್ದಮೆಗಳಲ್ಲಿ ಸಿಲುಕಿಸಲು ನನ್ನ ಮೇಲೆ ಸುಳ್ಳು ಸಾಕ್ಷ್ಯಗಳನ್ನು ವಹಿಸಿದರು. ಕೆಲ ಮೌಲ್ವಿಗಳು ನನ್ನ ಮರಣದ ಕುರಿತು ಸುಳ್ಳು ಭವಿಷ್ಯವಾಣಿ ಮಾಡಿದರು. ಕೆಲ ಮಸೀದಿಗಳಲ್ಲಿ ನನ್ನ ಮರಣಕ್ಕಾಗಿ ಪ್ರಾರ್ಥಿಸಿದರು, ಕೆಲವರು (ಉದಾಹರಣೆಗೆ ಮೌಲ್ವಿ ಗುಲಂ ದಸ್ತಗೀರ್ ಖಸೋರಿ) ತನ್ನ ಗ್ರಂಥದಲ್ಲಿ ಮತ್ತು ಮತ್ತು ಮೌಲ್ವಿ ಆಲಿಗಢ ನನ್ನ ಬಗ್ಗೆ ಸ್ಪಷ್ಟವಾದ ಆದೇಶ ಹೊರಡಿಸಿದರು. ತಾವು ಸುಳ್ಳುಗಾರನಾದರೆ ನಮಗಿಂತ ಮೊದಲು ಸಾಯುವನು. ಅವಶ್ಯವಾಗಿ ನಮಗಿಂತ ಮೊದಲು ಸಾಯುವನು. ಏಕೆಂದರೆ ಅವನು ಸುಳ್ಳುಗಾರನಾಗಿದ್ದಾನೆ. ಆದರೆ ಅವರು ಆ ಗ್ರಂಥಗಳನ್ನು ಲೋಕದಲ್ಲಿ ಬರೆದು ಪ್ರಕಟಿಸಿದ ಕಲವೆ ಸಮಯದಲ್ಲಿ ಅವರೇ ಮರಣ ಹೊಂದಿದರು. ಹೀಗೆ ಅವರ ಮರಣವೇ ತೀರ್ಪು ನೀಡಿದಂತಾಯಿತು. ಸುಲ್ಲುಗಾರರು ಯಾರೆಂದು, ಆದರೂ ಸಹ ಈ ಜನರು ಪಾಠ ಕಲಿಯುವುದಿಲ್ಲ. ಹಾಗೆ ಅದೊಂದು ಮಹೋನ್ನತವಾದ ಪವಾಡ ಅಲ್ಲವೇ? ಮುಹಿಯುದ್ದೀನ್ ಲಖೋಕೆಯ ನನ್ನ ಮರಣದ ದಿವ್ಯವಾಣಿ ಪ್ರಕಟಪಡಿಸಿದನು. ಆದರೆ ಸ್ವಯಂ ಅವನೇ ಮರಣ ಹೊಂದಿದನು. ಮೌಲ್ವಿ ಇಸ್ಮಾಯಿಲ್ ಅವರು ಪ್ರಕಟಿಸಿದರು. ಅವರು ಮರಣ ಹೊಂದಿದರು. ಮೌಲ್ವಿ ಗುಲಾಂ ದಸ್ತಗೀರ್ ಅವರು ತನ್ನ ಮರಣಕ್ಕಿಂತ ಮುಂಚೆ ನನ್ನ ಮರಣ ಪ್ರಕಟಿಸಿದರು. ಅವರು ಮರಣ ಹೊಂದಿದರು. ಪಾದರಿ ಹಮೀದುಲ್ಲಾಹ್ ಪೆಶಾವರಿ ನನ್ನ ಮರಣಕ್ಕೆ ಹತ್ತು ತಿಂಗಳುಗಳ ಅವಧಿ ನಿಗಧಿ ಮಾಡಿದನು. ಅವನು ಮರಣ ಹೊಂದಿದನು. ಲೇಖರಾಮ ನನ್ನ ಮರಣದ ಕುರಿತು ಮೂರು ವರ್ಷಗಳ ಕಾಲಾವಧಿಯ ಭವಿಷ್ಯವಾಣಿ ನುಡಿದನು. ಅವನೂ ಮರಣ ಹೊಂದಿದನು. ಇವೆಲ್ಲ ಆಗಲು ಕಾರಣ ಅಲ್ಲಾಹನು ಎಲ್ಲ ರೀತಿಯಿಂದಲೂ ತನ್ನ ದೃಷ್ಟಾಂತಗಳನ್ನು ಪೂರ್ಣಗೊಳಿಸ ಬಯಸಿದನು.

**ನಾನು ಸುಳ್ಳುಗಾರನಾಗಿರುತ್ತಿದ್ದರೆ ಸ್ವಯಂ ಅಲ್ಲಾಹನು ನನ್ನನ್ನು ನಾಶಗೊಳಿಸುತ್ತಿದ್ದನು. ಜನರು ಪ್ರಯತ್ನಪಡುವ ಅಗತ್ಯವಿರಲಿಲ್ಲ ಯಾರೆಲ್ಲ ನನ್ನ ಮರಣ ಬಯಸಿದ್ದರೋ ಅವರೇ ಮರಣಕ್ಕೆ ತುತ್ತಾದರು.**

ಸಯ್ಯಿದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ನುಡಿದರು.

ನನ್ನ ಬಗ್ಗೆ ನನ್ನ ಸಮುದಾಯ ತೋರಿದ ಅನುಕಂಪ ಸ್ಪಷ್ಟವಿದೆ. ಇತರ ಸಮುದಾಯಗಳ ದ್ವೇಷವಂತೂ ಒಂದು ಸಹಜಕ್ರಿಯೇಯೇ ಆಗಿದೆ. ಆ ಜನರು ನನ್ನನ್ನು ಕೊಲ್ಲಲು ಯಾವೆಲ್ಲ ಪ್ರಯತ್ನ ಕೈಗೊಳ್ಳಲಿಲ್ಲ? ಯಾವುದೆಲ್ಲ ಉಪದ್ರವ ನೀಡುವ ಯೋಚನೆಗಳನ್ನೂ ರೂಪಿಸಿಲ್ಲ? ಅದನ್ನು ಅಂತಿಮಘಟ್ಟಕ್ಕೆ ತಲುಪಿಸಿದ್ದಾರೆ. ಶಾಪಹಾಕುವುದರಲ್ಲಿ ಹಿಂದುಳಿದಿದ್ದಾರೆಯೇ? ಅಥವಾ ಹತ್ಯೆಯ ಫತ್ವಗಳನ್ನು ಹೊರಡಿಸುವುದರಲ್ಲಿ ಹಿಂದುಳಿದಿದ್ದಾರೆಯೇ ಯಾವ ಯಾವ ರೀತಿಯ ಕಷ್ಟಗಳನ್ನು ಅಪಹಸ್ಯಗಳನ್ನು ಕೈಗೊಳ್ಳಲಿಲ್ಲ, ಅಷ್ಟಾದರು ಯಾವ ಕೈ ನನ್ನನ್ನು ರಕ್ಷಿಸಲು ಮುಂದಾಗಿದೆ, ನಾನು ಸುಳ್ಳುಗಾರನಾಗುತ್ತಿದ್ದರೆ ಅಲ್ಲಾಹನೇ ಸ್ವಯಂ ನನ್ನನ್ನು ನಾಶಗೊಳಿಸುವ ಮಾರ್ಗ ಸುಗಮಗೊಳಿಸುತ್ತಿದ್ದನು. ಹಂತ ಹಂತವಾಗಿ ಜನರು ಸಾಮಗ್ರಿಗಳನ್ನು ಹುಡುಕುವ ಅವಶ್ಯಕತೆ ಇರಲಿಲ್ಲ. ಸುಳ್ಳುಗಾರನ ಅದೇ ಲಕ್ಷಣಗಳಾಗಿವೆಯೇ ಪವಿತ್ರ ಖುರ್‌ಆನ್ ಸಹ ಅವನ ಸಾಕ್ಷಿ ನುಡಿಯುತ್ತದೆ. ದೈವಿಕ ದೃಷ್ಟಾಂತಗಳು ಅವನ ಪರವಾಗಿದೆ, ಬುದ್ಧಿಯು ಸಹ ಸನ್ನತಿ ಹೊಂದಿದೆ, ಅವನ ಮರಣ ಬಯಸುವವರೇ ಮರಣ ಹೊಂದುತ್ತ ಹೋಗಿದ್ದಾರೆ. ನನಗೆ ಭರವಸೆ ಇಡಲು ಸಾಧ್ಯವಿಲ್ಲ. ನಬಿ(ಸ) ರವರ ಕಾಲದ ನಂತರ ಅಲ್ಲಾಹನ ದಾಸನೊಬ್ಬನಿಗೆ, ಸತ್ಯವಂತನೊಬ್ಬನ ವಿರೋಧಿಗಳಿಗೆ ಇಂತಹ ಸ್ಪಷ್ಟವಾದ ಮತ್ತು ದಿಟವಾದ ರೀತಿಯಲ್ಲಿ ಉತ್ತರ ತಲುಪಿದೆ. ಅವರುಗಳು ನನ್ನ ಗೌರವಕ್ಕೆ ಧಕ್ಕೆ ತರಲು ಪ್ರಯತ್ನಿಸಿದರು ಆದರೆ ಅವರೇ ಅಪಮಾನಿತರಾದರು. ಈ ವ್ಯಕ್ತಿಯು ಸತ್ಯತೆಯು ಪ್ರಮಾಣವೇನೆಂದರೆ, ಅವನು ನಮಗಿಂತ ಮುಂಚೆ ಸಾಯುವನು ಎಂದು ಆಕ್ರಮಣಗೈದು ವಾದಿಸಿದರು. ಪರಿಣಾಮವಾಗಿ ಅವರೇ ಮರಣ ಹೊಂದಿದರು. (ಝುಮೀಮಿ ತೊಹ್‌ಫ, ಗೋಲಡ್‌ವಿಯ, ರೂಹಾನಿ ಖಝಾಈನ್, ಸಂಪುಟ-17, ಪುಟ-44-46)

**ನಾನು ಯಥಾರ್ಥ ಮಾಲಿಕನ ಕೈಯಿಂದ ನೆಟ್ಟ ಮರವಾಗಿದ್ದೇನೆ.**

ಹಝ್ರತ್ ಮಸೀಹ್ ಮೌಊದ್(ಅ) ನುಡಿದರು.

ನಾನು ಎಷ್ಟೆ ಹಿಂದೆ ಸರಿಯಲು ಬಯಸಿದರು. ಅಷ್ಟೇ ಅಲ್ಲಾಹನು ನನಗೆ ಮುಂದೆ ಎಳೆದು ತರುತ್ತಾನೆ. ನನ್ನ ಮೇಲೆ ಅವನು ನಾನು ನಿನ್ನ ಜೊತೆಯಲ್ಲಿದ್ದೇನೆ. ನನ್ನ ದೈವಿಕ ಸೈನ್ಯ ನಿನ್ನ ಜೊತೆಯಲ್ಲಿವೆ ಎಂಬ ಭರವಸೆ ನೀಡುವ ಯಾವುದೋ ಒಂದು ರಾತ್ರಿ ತಪ್ಪಿ ಹೋಗುವುದಿಲ್ಲ. ಪವಿತ್ರ ಹೃದಯವುಳ್ಳ ಜನರಿದ್ದಾರೆ. ಅವರು ಮರಣ ಹೊಂದಿದ ಮೇಲೆ ಅಲ್ಲಾಹನನ್ನು ಕಾಣಬಹುದು. ಆದರೆ ನಾನು ಅವನ ಮುಖದ ಮೇಲೆ ಆಣೆ ಮಾಡಿ ಹೇಳುವೆನು. ಈಗಲೂ ನಾನು ಅವನನ್ನು ನೋಡುತ್ತಿದ್ದೇನೆ. ಲೋಕವು ನನ್ನನ್ನು ಗುರುತಿಸುತ್ತಿಲ್ಲ. ಆದರೆ ನನ್ನನ್ನು ಕಳುಹಿಸಿದವನಾದ ಅವನು ನನ್ನನ್ನು ಅರಿತಿದ್ದಾನೆ. ಇದು ಆ ಜನರ ಭ್ರಮೆ ಆಗಿದೆ ಮತ್ತು

*(ಪುಟ 10 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ನಮಾಝ್‌ನ ತಿರುಳು ಮತ್ತು ಆತ್ಮವು ಅದರಲ್ಲಿ ಆನಂದ ಮತ್ತು ಪ್ರಶಾಂತತೆಯನ್ನು ಹೊಂದಿರುವ ದುಆ ಆಗಿದೆ.**

**ಪವಿತ್ರ ಮಾಸ ರಮಝಾನ್‌ನಲ್ಲಿ ಮಾಡಿದ ಉತ್ತಮ ಕಾರ್ಯಗಳನ್ನು ವರ್ಷವಿಡೀ ಮುಂದುವರಿಸಲು ಸಲಹೆ**

**ಕರ್ಮಪರವಾದ ಪ್ರಗತಿಗಾಗಿಯೂ ಕೇಳಬೇಕು. ಇದು ಕರ್ಮಪರವಾದ ಅಭಿವೃದ್ಧಿಗಾಗಿ ಅವಶ್ಯ. ಆದ್ದರಿಂದ ಧರ್ಮಕ್ಕೆ ಲೌಕಿಕತೆಯ ಮೇಲೆ ಆದ್ಯತೆ ನೀಡಲು ವಿಶ್ವಾಸ ಆವಶ್ಯವಾದ ರೀತಿಯಲ್ಲೇ ಜ್ಞಾನಪರವಾದ ಮತ್ತು ಕರ್ಮಪರವಾದ ಅಭಿವೃದ್ಧಿ ಅವಶ್ಯ. ಅದಕ್ಕಾಗಿ ಪ್ರಯತ್ನ ಕೂಡ ಮಾಡಬೇಕಾಗಿದೆ.**

**ಇದು ನಮ್ಮ ಕ್ರಮವಾಗಿದೆ: ನಮಾಝಿನ ನಿರ್ವಹಣೆಯ ಕಡೆಗೆ ನಿರಂತರ ಗಮನ ಕೊಡುವುದು, ಅವುಗಳನ್ನು ಸುಂದರವಾಗಿ ನಿರ್ವಹಿಸುವ ಕಡೆ ಗಮನ ಹರಿಸುವುದು, ಪವಿತ್ರ ಖುರ್‌ಆನ್‌ನ ಪಠಣವನ್ನು ಅರ್ಥಮಾಡಿಕೊಳ್ಳುವುದು ಮತ್ತು ಅದರ ಆಜ್ಞೆಗಳನ್ನು ಪಾಲಿಸುವುದು, ಪರಸ್ಪರ ಗೌರವಿಸುವುದು ಮತ್ತು ತೌಹೀದ್ ಅನ್ನು ಸ್ಥಾಪಿಸುವುದು. ವಾಸ್ತವವಾಗಿ ನಿಜವಾದ ವಿಶ್ವಾಸಿಯ ಪ್ರತಿಯೊಂದು ಕ್ರಿಯೆ ಮತ್ತು ಕಾರ್ಯವು ತೌಹೀದ್ ಸ್ಥಾಪನೆಗಾಗಿರಬೇಕು**

**ಪ್ರಪಂಚದ ಸಾಮಾನ್ಯ ಪರಿಸ್ಥಿತಿಗಾಗಿ, ಅಸೀರಾನೆ ರಾಹೆ ಮೌಲ (ಸೆರೆಯಲ್ಲಿರುವ ಅಹ್ಮದಿಯರಿಗಾಗಿ) ಮತ್ತು ಪಾಕಿಸ್ತಾನದಲ್ಲಿ ಹಾಗೂ ಲೋಕದ ಇತರ ದೇಶಗಳಲ್ಲಿ ಅಹ್ಮದಿಯರು ಕಠಿಣ ವಿರೋಧದ ಅವಸ್ಥೆಯನ್ನು ಅನುಭವಿಸುತ್ತಿದ್ದಾರೆ ಅವರಿಗಾಗಿ ದುಆವಿನ ಕೋರಿಕೆ.**

**ಸನ್ಮಾನ್ಯ ಅಬ್ದುಲ್ ಬಾಕಿ ಅರ್ಷದ್ ಸಾಹಿಬ್‌ರವರ ಸದ್ಗುಣಗಳ ಪ್ರಸ್ತಾವನೆ ಹಾಗೂ ನಮಾಝೆ ಜನಾಝ ಗ್ಹಾಯಿಬ್ ನಿರ್ವಹಣೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **29-04-2022** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ - بِسْمِ اللّٰهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔

اِيَّاكَ نَعْبُدُ وَاِيَّاكَ نَسْتَعِيْنُ۔ اِهْدِنَا الصِّرَاطَ الْمُسْتَقِيْمَ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

ರಮಝ಼ಾನ್ ಬಂತು ಮತ್ತು ಇದರಿಂದ ಪ್ರಯೋಜನ ಪಡೆಯಲು ಪ್ರಯತ್ನಿಸುವವರ ಮೇಲೆ ಅನುಗ್ರಹಗಳನ್ನು ಹರಡುತ್ತಾ ಅದು ದಾಟಿಹೋಯಿತು. ಒಬ್ಬ ಬುದ್ಧಿವಂತ ಮತ್ತು ನೈಜ ಸತ್ಯವಿಶ್ವಾಸಿ ಸದಾ ನೆನಪಿಡಬೇಕಾದ ಸಂಗತಿಯೇನೆಂದರೆ, ರಮಝ಼ಾನ್ ಕೊನೆಗೊಳ್ಳುವುದರಿಂದ ನಾವು ನಮ್ಮ ಅನೇಕ ಜವಾಬ್ದಾರಿಗಳಿಂದ ಮತ್ತು ಕರ್ತವ್ಯಗಳಿಂದ ಸ್ವತಂತ್ರರಾಗುವುದಿಲ್ಲ. ಬದಲಾಗಿ ಈ ಕಡ್ಡಾಯ ಕರ್ತವ್ಯಗಳನ್ನು ಮತ್ತು ಉತ್ತರದಾಯಿತ್ವಗಳನ್ನು ಸರಿಯಾಗಿ ನೆರವೇರಿಸುವ ತರಬೇತಿಯನ್ನು ಕೊಟ್ಟು ರಮಝ಼ಾನ್ ಹೋಯಿತು.

ಈ ಕರ್ತವ್ಯಗಳನ್ನು ಈಡೇರಿಸುವ ಮತ್ತು ಸ್ಥಿರವಾಗಿ ನಿರ್ವಹಿಸುವ ವಿಧಾನವನ್ನು ಕಲಿಸಲು ಮತ್ತು ಅವುಗಳಲ್ಲಿ ಅಭಿವೃದ್ಧಿಯ ಹಂತಗಳೇನು ಎಂದು ಪರಿಚಯಿಸಲು ರಮಝ಼ಾನ್ ಬಂದಿತ್ತು ಮತ್ತು ಕಲಿಸುತ್ತಾ ತನ್ನ ಮುಕ್ತಾಯಕ್ಕೆ ಬಂದಿದೆ. ನಿಸ್ಸಂಶಯವಾಗಿಯೂ ಕಡ್ಡಾಯ ಉಪವಾಸಗಳ ತಿಂಗಳು ಕೊನೆಗೊಳ್ಳುತ್ತಿದೆ. ಆದರೆ ಇತರ ಕಡ್ಡಾಯ ಸಂಗತಿಗಳನ್ನು ಈಡೇರಿಸುವುದರ ಮಟ್ಟಗಳನ್ನು ಉನ್ನತವಾಗಿರಿಸಲು ಮತ್ತು ಅವುಗಳಲ್ಲಿ ಅಭಿವೃದ್ಧಿಹೊಂದುತ್ತಾ ಹೋಗುವ ಸಮಯ ಶುರುವಾಗಿದೆ. ರಮಝ಼ಾನಿನ ನಂತರ ನಾವು ನಮ್ಮ ಕರ್ತವ್ಯಗಳನ್ನು ಮತ್ತು ಹಕ್ಕುಗಳನ್ನು ಈಡೇರಿಸುವುದರ ಮಟ್ಟಗಳನ್ನು ಹೇಗೆ ನೆಲೆನಿಲ್ಲಿಸುವುದು ಎಂಬುವುದನ್ನು ಮರೆತುಬಿಟ್ಟರೆ, ನಾವು ನಮ್ಮ ರಮಝ಼ಾನನ್ನು ಹಝ಼್ರತ್ ಪೈಗಂಬರ್(ಸ) ನಿರ್ದೇಶಿಸಿದ ರೀತಿಯಲ್ಲಿ ಕಳೆದಿಲ್ಲವೆಂದಾಯಿತು. ಹಝ಼್ರತ್ ಪೈಗಂಬರ್(ಸ) ಹೀಗೆ ಹೇಳಿದ್ದಾಗಿ ಒಂದು ಹದೀಸಿನಲ್ಲಿ ಬಂದಿದೆ: ಐದು ಹೊತ್ತಿನ ನಮಾಝ಼್‌ಗಳು, ಒಂದು ಜುಮಾದಿಂದ ಮತ್ತೊಂದು ಜುಮಾ, ಒಂದು ರಮಝ಼ಾನಿನಿಂದ ಮತ್ತೊಂದು ರಮಝ಼ಾನ್. ಇವೆಲ್ಲವೂ ಅವುಗಳ ನಡುವೆ ಮಾಡಲಾಗುವ ಪಾಪಗಳಿಗೆ ಪ್ರಾಯಶ್ಚಿತ್ತವಾಗುವುವು. ಮಹಾಪಾಪಗಳನ್ನು ಹೊರತುಪಡಿಸಿ. (ಸಹೀಹ್ ಮುಸ್ಲಿಮ್, ಕಿತಾಬುತ್ತಹಾರ, ಹದೀಸ್-552)

ಮನುಷ್ಯನು ತನ್ನ ಸಣ್ಣ ಸಣ್ಣ ಪಾಪಗಳನ್ನು ಮತ್ತು ತಪ್ಪುಗಳನ್ನು ಗುರುತಿಸಿಕೊಂಡು ಅವುಗಳಿಂದ ರಕ್ಷಣೆ ಪಡೆಯಲು ಪ್ರಯತ್ನಿಸದಿದ್ದರೆ ಮತ್ತು ತಪ್ಪುಗಳನ್ನು ಮಾಡಿದರೆ ಅಲ್ಲಾಹನಲ್ಲಿ ಪಶ್ಚಾತ್ತಾಪ ಮತ್ತು ಕ್ಷಮೆಯಾಚನೆ ಮಾಡುವುದಿಲ್ಲವಾದರೆ, ಸಣ್ಣ ಸಣ್ಣ ತಪ್ಪುಗಳೇ ಮಹಾಪಾಪಗಳಾಗಿ ಬಿಡುತ್ತವೆ ಎಂಬುದನ್ನು ಸರಿಯಾಗಿ ತಿಳಿದುಕೊಳ್ಳಬೇಕು.

ಆದ್ದರಿಂದ ಇಲ್ಲಿ ತಾತ್ಪರ್ಯವೇನೆಂದರೆ, ಈ ತಪ್ಪುಗಳಿಂದ ರಕ್ಷಣೆ ಪಡೆಯಲು ಮನುಷ್ಯನು ಸದಾ ಅಲ್ಲಾಹನ ಮೇಲಿನ ಭಯವನ್ನು ಹೃದಯದಲ್ಲಿ ಇರಿಸಿಕೊಂಡು ಪಶ್ಚಾತ್ತಾಪ ಮಾಡುತ್ತಿರಬೇಕು. ಒಟ್ಟಿನಲ್ಲಿ ನಾವು ಒಂದು ರಮಝ಼ಾನಿನಿಂದ ಮತ್ತೊಂದು ರಮಝ಼ಾನ್ ತನಕ ಒಳಿತುಗಳನ್ನು ಮಾಡುತ್ತಾ, ನಮ್ಮ ಕರ್ತವ್ಯಗಳನ್ನು ಈಡೇರಿಸುತ್ತಾ, ಆರಾಧನೆಗಳ ಮತ್ತು ಜನರ ಹಕ್ಕುಗಳನ್ನು ಈಡೇರಿಸುತ್ತಾ ವರ್ಷದ ಇತರ ತಿಂಗಳುಗಳನ್ನು ಕಳೆಯುವುದಿಲ್ಲವಾದರೆ, ನಾವು ರಮಝ಼ಾನಿನಿಂದ ಸಂಪೂರ್ಣವಾದ ಪ್ರಯೋಜನವನ್ನು ಪಡದಿಲ್ಲವೆಂದಾಯಿತು. ನಮ್ಮ ಸೌಭಾಗ್ಯವೇನೆಂದರೆ, ಪ್ರತಿಯೊಂದು ಸಂಗತಿಗಳ ಬಗ್ಗೆ ಬಹಳ ಸ್ಪಷ್ಟವಾಗಿ ಹಝ಼್ರತ್ ಮಸೀಹ್ ಮೌಊದ್(ಅ) ನಮಗೆ ಮಾರ್ಗದರ್ಶನ ನೀಡಿರುವರು ಎಂದಾಗಿದೆ. ನಮ್ಮ ಆರಾಧನೆಗಳಿಗೆ ಸಂಬಂಧಿಸಿದ ಬಾಧ್ಯತೆಗಳನ್ನು ಮತ್ತು ಜನರಿಗೆ ನೀಡಬೇಕಾದ ಹಕ್ಕುಗಳನ್ನು ಈಡೇರಿಸಲು ಹಝ಼್ರತ್ ಮಸೀಹ್ ಮೌಊದ್(ಅ) ಪದೇ ಪದೇ ನಿರಂತರವಾಗಿ ಉಪದೇಶಿಸಿರುವರು. ನಮ್ಮ ಜೀವಿತವನ್ನು ಸಾಗಿಸಲು ನಮಗೆ ಒಂದು ಮಾರ್ಗಸೂಚಿಯನ್ನು ಅವರು ನೀಡಿರುವರು. ನಾವು ಈ ಮಾರ್ಗಸೂಚಿಯನ್ನು ನಮ್ಮ ಜೀವನದ ಭಾಗವನ್ನಾಗಿ ಮಾಡುವವರಾದರೆ, ಅದರ ಪ್ರಕಾರ ನಮ್ಮ ಜೀವಿತಗಳನ್ನು ಸಾಗಿಸಲು ಪ್ರಯತ್ನಿಸುವುದಾದರೆ ಖಂಡಿತವಾಗಿಯೂ ನಾವು ಸದ್ಗುಣಗಳಲ್ಲಿ ಅಭಿವೃದ್ಧಿ ಹೊಂದುವ ಮಾರ್ಗಗಳಲ್ಲಿ, ಒಂದು ರಮಝ಼ಾನನ್ನು ಮತ್ತೊಂದು ರಮಝ಼ಾನಿನೊಂದಿಗೆ ಸೇರಿಸುವ ಮಾರ್ಗಗಳಲ್ಲಿ, ಆ ನಡುವೆ ಮಾಡುವ ತಪ್ಪುಗಳಿಂದ ಮತ್ತು ಪಾಪಗಳಿಂದ ರಕ್ಷಣೆ ಪಡೆಯುವ ಮಾರ್ಗಗಳಲ್ಲಿ, ಅಲ್ಲಾಹನು ಕ್ಷಮಿಸುವ ಮಾರ್ಗಗಳಲ್ಲಿ ನಡೆಯುವವರಾಗುವೆವು. ಅಲ್ಲಾಹನ ಅನುಗ್ರಹಗಳ ಸ್ಥಿರವಾದ ವಾರಸುದಾರರಾಗಬೇಕಾದರೆ, ಇಸ್ಲಾಮಿನ ನೈಜ ಬೋಧನೆಗಳ ಪ್ರಕಾರ ನಮ್ಮ ಜೀವನವನ್ನು ಸಾಗಿಸಬೇಕೆಂದು ಈ ಕಾಲಘಟ್ಟದಲ್ಲಿ ಹಝ಼್ರತ್ ಪೈಗಂಬರ್(ಸ)ರ ಸತ್ಯಸಂಧರಾದ ದಾಸರಾದ ಹಝ಼್ರತ್ ಮಸೀಹ್ ಮೌಊದ್(ಅ) ನಮ್ಮನ್ನು ಪದೇ ಪದೇ ಉಪದೇಶಿಸುತ್ತಿರುವರು ಮತ್ತು ಸ್ಪಷ್ಟವಾಗಿ ತಿಳಿಸುತ್ತಿರುವರು.

ಹಝ್ರತ್ ಮಸೀಹ್ ಮೌಊದ್(ಅ)ರ ಉಪದೇಶಗಳಿಂದ ಕೆಲವು ಉಪದೇಶಗಳನ್ನು ನಾನೀಗ ಮುಂದಿರಿಸುವೆನು.

ರಮಝಾನಿನಲ್ಲಿ ಆರಾಧನೆ ಕಡೆಗೆ ನಮಗೆ ಗಮನವಿರುತ್ತದೆ. ಕಡ್ಡಾಯ ನಮಾಝ್‌ಗಳನ್ನು ಮತ್ತು ಐಚ್ಛಿಕ ನಮಾಝ್‌ಗಳನ್ನು ವಿಶೇಷ ಶ್ರದ್ಧೆಯಿಂದ ಈಡೇರಿಸಲು ನಾವು ಪ್ರಯತ್ನಿಸುತ್ತೇವೆ. ಆದರೆ ನಮಾಝ್ ಎಂಬುದು ಯಾವುದೇ ವಿಶೇಷ ತಿಂಗಳು ಮತ್ತು ವಿಶೇಷ ಸಮಯಕ್ಕೆ ಸೀಮಿತವಾಗಿರುವ ಸಂಗತಿಯಲ್ಲ. ಬದಲಾಗಿ ದಿನಾಲೂ ಐದು ಹೊತ್ತಿನ ನಮಾಝ್‌ಗಳನ್ನು ಅದಕ್ಕೆ ನಗದಿ ಮಾಡಲಾದ ಸಮಯದಲ್ಲಿ ವರ್ಷದ 12 ತಿಂಗಳಗಳಲ್ಲೂ ಅನುಷ್ಠಿಸುವುದು ಅವಶ್ಯ. ಹಝ್ರತ್ ಪೈಗಂಬರ್(ಸ) ಈ ಕುರಿತು ಪದೇ ಪದೇ ಸತ್ಯವಿಶ್ವಾಸಿಗಳ ಗಮನಸೆಳೆದಿರುವರು. ಹಝ್ರತ್ ಪೈಗಂಬರ್(ಸ) ಒಮ್ಮೆ ಹೀಗೆ ಹೇಳಿದರು: ನಮಾಝನ್ನು ಬಿಟ್ಟುಬಿಡುವುದರಿಂದ ಒಬ್ಬ ವ್ಯಕ್ತಿಯು ಸತ್ಯನಷೇಧ ಮತ್ತು ಶಿರ್ಕಿಗೆ ಸಮೀಪನಾಗುತ್ತಾನೆ. (ಸಹೀಹ್ ಮುಸ್ಲಿಮ್, ಕಿತಾಬುಲ್ ಈಮಾನ್, ಹದೀಸ್–247)

ಹಝ್ರತ್ ಪೈಗಂಬರ್(ಸ) ಮತ್ತೊಮ್ಮೆ ಹೀಗೆ ಹೇಳಿದರು: ಖಿಯಾಮತ್ತಿನ ದಿನದಂದು ಮೊತ್ತಮೊದಲು ದಾಸನಂದ ನಮಾಝಿನ ಲೆಕ್ಕ ತೆಗೆಯಲಾಗುವುದು. ಈ ಲೆಕ್ಕ ಸರಿಯಾದರೆ, ಅವನು ವಿಜಯ ಮತ್ತು ಮುಕ್ತಿಯನ್ನು ಗಳಿಸುವನು. ಇದಾಗಿದೆ ನಮಾಝಿನ ಪ್ರಾಮುಖ್ಯತೆ. (ಸುನನ್ ಅತ್ತಿರ್ಮಿಧಿ, ಅಬ್ವಾಬುಸ್ಸಲಾತ್, ಹದೀಸ್–413)

ನಮಾಝ್ ಎಂಬುದು ಯಾವುದೇ ವಿಶಿಷ್ಟ ತಿಂಗಳಲ್ಲಿ ಮಾತ್ರ ಮಾಡಬೇಕಾದ ಆರಾಧನೆಯಲ್ಲ. ಬದಲಾಗಿ ದಿನದ ಐದು ನಮಾಝ್‌ಗಳ ಕಡೆಗೆ ಗಮನಸೆಳೆಯಲಾಗಿದೆ. ನಮಾಝ್‌ಗಳ ಪ್ರಾಮುಖ್ಯತೆ ಬಗ್ಗೆ ಹಝ್ರತ್ ಮಸೀಹ್ ಮೌಊದ್(ಅ) ನಮ್ಮನ್ನು ಪದೇ ಪದೇ ಉಪದೇಶಿಸಿರುವರು. ನಮಾಝ್ ಏನು, ಅದನ್ನು ಹೇಗೆ ಅನುಷ್ಠಿಸಬೇಕು ಮತ್ತು ಹೇಗೆ ನಮಾಝಿನಿಂದ ಆನಂದ ಪಡೆಯಬಹುದು ಎಂಬುದನ್ನು ಸ್ಪಷ್ಟವಾಗಿ ತಿಳಿಸಿಕೊಟ್ಟಿರುವರು. ಆ ಆನಂದವನ್ನು ಗಳಿಸಲು ಪ್ರಯತ್ನ ಕೂಡ ಮಾಡಬೇಕಾಗಿದೆ. ಅಲ್ಲಾಹನ ಪ್ರೀತಿಯನ್ನು ಹೆಚ್ಚಿಸುವಂತಹ ನಮಾಝ್ ಆಗಿರಬೇಕು. ಬದಲಾಗಿ ಯಾವುದಾದರೂ ಆವಶ್ಯಕತೆ ಬಂದರೆ, ಯಾವುದಾದರೂ ಲೌಕಿಕವಾದ ಸಮಸ್ಯೆ ಬಂದರೆ, ಮುಸಲ್ಲಾ ಬಿಚ್ಚಿ ಅಥವಾ ಮಸೀದಿಗೆ ಹೋಗಿ ಸ್ವಲ್ಪ ರೋದಿಸುವುದು, ಅಳುವುದು ಮತ್ತು ದುಆ ಮಾಡುವುದು ಮತ್ತು ಸಮಸ್ಯೆ ಬಗೆಹರಿದರೆ ಪುನಃ ಮರೆತು ಬಿಡುವುದು ಅಥವಾ ರಮಝಾನಿನಲ್ಲಿ ಮಾತ್ರ ನಮಾಝ್‌ಗಳ ಕಡೆಗೆ ಗಮನಹರಿಸುವುದು ಅನಂತರ ಪುನಃ ಮರೆತು ಬಿಡುವುದು ಅಥವಾ ಅದರ ಕುರಿತು ಇರಬೇಕಾದ ಗಮನವಿರದೇ ಇರುವುದು ಸರಿಯಲ್ಲ. ಹಾಗಾಗಿದೆ ಎಂದಾದರೆ, ಮತ್ತೆ ಅಂತಹ ನಮಾಝ್‌ಗಳು, ಜುಮಾಗಳು ಮತ್ತು ಉಪವಾಸಗಳಿಂದ ಪಾಪಗಳು ಕ್ಷಮಿಸಲ್ಪಡಲಾರವು. ನಮಾಝ್ ಏನು ಎಂಬುದನ್ನು ಸ್ಪಷ್ಟಪಡಿಸುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ:

ನಮಾಝ್ ಎಂದರೇನು? ಅದೊಂದು ವಿಶಿಷ್ಟ ಪ್ರಾರ್ಥನೆಯಾಗಿದೆ. ಆದರೆ ಜನರು ಅದನ್ನು ಸರಕಾರದ ತೆರಿಗೆ ಎಂದು ಭಾವಿಸುತ್ತಾರೆ. ಒತ್ತಾಯಪೂರ್ವಕವಾಗಿ ಅನುಷ್ಠಿಸಬೇಕಾಗಿದೆ ಎಂದು ಭಾವಿಸುತ್ತಾರೆ. ಅಲ್ಲಾಹನಿಗೆ ಇಂತಹವುಗಳ ಆವಶ್ಯಕತೆ ಏನಿದೆ ಎಂದು ಈ ಅವಿವೇಕಿಗಳು ಚಿಂತಿಸುವುದಿಲ್ಲ. ಅಲ್ಲಾಹನು ಯಾವುದೇ ಆವಶ್ಯಕತೆ ಇಲ್ಲದವನೂ ನಿರಾವಲಂಬಿಯೂ ಆಗಿರುವಾಗ ಮನುಷ್ಯನು ದುಆ, ತಸ್‌ಬೀಹ್, ತಹ್‌ಲೀಲ್‌ಗಳಲ್ಲಿ ಮಗ್ನನಾಗಿರಬೇಕೆಂಬ ಆವಶ್ಯಕತೆ ಅಲ್ಲಾಹನಿಗಿಲ್ಲ. ಅವುಗಳನ್ನು ಮಾಡುವುದರಿಂದ ಮನುಷ್ಯನಿಗೆ ಸ್ವತಃ ಲಾಭ ದೊರಕುವುದು. ಅವನು ಆ ಮೂಲಕ ತನ್ನ ಉದ್ದೇಶ ಲಕ್ಷ್ಯವನ್ನು ತಲಪುತ್ತಾನೆ. ಇಂದಿನ ಕಾಲದಲ್ಲಿ ಆರಾಧನೆ, ತಖ್ವ ಮತ್ತು ಧಾರ್ಮಿಕತೆ ಬಗ್ಗೆ ಜನರಿಗೆ ಪ್ರೀತಿ ಇಲ್ಲ ಎಂದು ನೋಡುವಾಗ ನನಗೆ ಖೇದವಾಗುತ್ತದೆ. ಇದು ಪ್ರೇಮಕ್ಕೆ ಸಂಬಂಧಿಸಿದ ವಿಷಯಗಳಾಗಿವೆ. ದೇವಪ್ರೇಮವಿದ್ದರೆ ಈ ಕಡ್ಡಾಯ ಕರ್ಮಗಳು ಸರಿಯಾದ ರೀತಿಯಲ್ಲಿ ನಿರ್ವಹಿಸಲ್ಪಡುವುವು. ಇದರ ಕಾರಣ ಸಾಮಾನ್ಯವಾಗಿರುವ ವಿಷಕಾರಿ ಸಂಪ್ರದಾಯಗಳಾಗಿವೆ. ಇದೇ ಕಾರಣದಿಂದ ದೇವಾನುರಾಗ ಕಡಿಮೆಯಾಗುತ್ತಿದೆ. ಕೆಟ್ಟ ಸಂಪ್ರದಾಯಗಳಲ್ಲಿ ಜನರು ಹೆಚ್ಚಾಗಿ ಬಿದ್ದುಕೊಂಡಿರುವರು. ಆರಾಧನೆಯಿಂದ ಯಾವ ರಸಾನುಭೂತಿ ಸಿಗಬೇಕಾಗಿದೆಯೋ ಅದು ಸಿಗುವುದಿಲ್ಲ. ಅಲ್ಲಾಹನು ಯಾವುದಾದರೂ ರೀತಿಯ ರಸಾನುಭೂತಿಯನ್ನು ಇರಿಸದ ಯಾವ ವಸ್ತುವೂ ಲೋಕದಲ್ಲಿ ಇಲ್ಲ. ಒಬ್ಬ ರೋಗಿ ಅತ್ಯುತ್ತಮವಾದ ರುಚಿಯುಳ್ಳ ಆಹಾರ ಪದಾರ್ಥದ ರುಚಿಯನ್ನು ಕೂಡ ಅನುಭವಿಸಲಾರನು. ಅದನ್ನು ಕಹಿ ಅಥವಾ ಸಪ್ಪೆಯೆಂದು ಭಾವಿಸುತ್ತಾನೆ. ಮದ್ದನ್ನು ಸೇವಿಸಿ ಅಥವಾ ಕಾಯಿಲೆಯ ಕಾರಣದಿಂದ ಬಾಯಿ ಒಂದುತರ ಇರುತ್ತದೆ. ಯಾವುದೇ ವಸ್ತುವಿನ ರುಚಿಯನ್ನು ಅನುಭವಿಸಲು ಆತನಿಗೆ ಸಾಧ್ಯವಾಗುವುದಿಲ್ಲ. ಆಹಾರ ಸೇವಿಸುವುದನ್ನು ನಿರಾಕರಿಸುತ್ತಾನೆ. ಆಹಾರದಲ್ಲಿ ಕೊರತೆಯನ್ನು ಹುಡುಕಲು ತೊಡಗುತ್ತಾನೆ. ಅದೇ ರೀತಿಯಲ್ಲಿ ದೇವಾರಾಧನೆಯಲ್ಲಿ ಆನಂದ ಮತ್ತು ರುಚಿಯನ್ನು ಪಡೆಯದ ಜನರು ಕೂಡ ರೋಗಿಯ ತರಹವೇ ಆಗಿರುವರು. ಅವರು ತಮ್ಮ ರೋಗದ ಬಗ್ಗೆ ಚಿಂತಿಸಬೇಕಾಗಿದೆ. ಏಕೆಂದರೆ, ನಾನು ಈಗ ಹೇಳಿದಂತೆ ಅಲ್ಲಾಹನು ಯಾವುದಾದರೂ ರೀತಿಯ ಆನಂದವನ್ನು ಇರಿಸದ ಯಾವ ವಸ್ತುವೂ ಲೋಕದಲ್ಲಿ ಇಲ್ಲ. ಮನುಷ್ಯನನ್ನು ಸೃಷ್ಟಿಸಿರುವುದೇ ಆರಾಧನೆಗೋಸ್ಕರವೇ ಆಗಿರುವಾಗ, ಆರಾಧನೆಯಿಂದ ರಸಾನುಭೂತಿ ಸಿಗದಿರಲು ಕಾರಣವೇನು? ರುಚಿ ಮತ್ತು ಆನಂದವಿದೆ. ಇಲ್ಲವೆಂದಲ್ಲ. ಆದರೆ ಅದರಿಂದ ಆನಂದ ಪಡೆಯುವ ಯಾರಾದರೂ ಇರಬೇಕಲ್ಲವೇ? **ವಮಾ ಖಲಖ್‌ತುಲ್ ಜಿನ್ನ ವಲ್‌ಇನ್‌ಸ ಇಲ್ಲಾ ಲಿಯಅ್‌ಬುದೂನ್** ಎಂದು ಅಲ್ಲಾಹನು ಹೇಳುತ್ತಾನೆ. ಎಂದರೆ, ನನ್ನನ್ನು ಆರಾಧಿಸಲಿಕ್ಕೆ ಹೊರತು ನಾನು ಜಿನ್ನ್ ಮತ್ತು ಇನ್ಸ್ ವರ್ಗಗಳನ್ನು ಸೃಷ್ಟಿಸಲಿಲ್ಲ. ಮನುಷ್ಯನನ್ನು ಸೃಷ್ಟಿಸಿರುವುದೇ ಆರಾಧನೆಗಾಗಿ ಆಗಿರುವಾಗ, ಆರಾಧನೆಯಲ್ಲಿ ಅತ್ಯಂತ ಹೆಚ್ಚಿನ ಮಟ್ಟದ ರಸಾನುಭೂತಿ ಮತ್ತು ಆನಂದವು ಇರಲೇ ಬೇಕು. ಇದನ್ನು ನಾವು ನಮ್ಮ ಅನುಭವದಿಂದ ಮತ್ತು ನಾವು ದಿನನಿತ್ಯ ನೋಡುವ ಸಂಗತಿಗಳಿಂದ ಸುಲಭವಾಗಿ ತಿಳಿದುಕೊಳ್ಳಬಹುದಾಗಿದೆ. ಉದಾಹರಣೆಗೆ ನೋಡಿರಿ, ಧಾನ್ಯಗಳು ಮತ್ತು ತಿನ್ನುವ ಇತರ ವಸ್ತುಗಳನ್ನು ಮನುಷ್ಯರಿಗೋಸ್ಕರ ಸೃಷ್ಟಿಸಲ್ಪಟ್ಟಿವೆ. ಅವುಗಳಿಂದ ಮನುಷ್ಯನು ಒಂದು ರುಚಿಯನ್ನು ಪಡೆಯುವುದಿಲ್ಲವೇ? ಅವುಗಳ ರುಚಿ ಅನುಭವಿಸಲು ಮನುಷ್ಯನ ಬಾಯಿಯಲ್ಲಿ ನಾಲಗೆ ಇಲ್ಲವೇ? ಗಿಡಗಳಲ್ಲಿ, ಸ್ಥಾವರ ವಸ್ತುಗಳಲ್ಲಿ, ಜಾನುವಾರುಗಳಲ್ಲಿ ಅಥವಾ ಮನುಷ್ಯರಲ್ಲಿ ಇರುವ ಸೌಂದರ್ಯವನ್ನು ಕಂಡು ಆತ ಆನಂದಿಸುವುದಿಲ್ಲವೇ? ಹೃದಯಕ್ಕೆ ಆನಂದ ನೀಡುವ ಮತ್ತು ಮಧುರವಾದ ಸ್ವರಗಳನ್ನು ಆಲಿಸಿ ಆತನ ಕಿವಿಗಳು ಖುಶಿಪಡುವುದಿಲ್ಲವೇ? ಹೀಗಿರುವಾಗ ಆರಾಧನೆಯಲ್ಲಿ ಆನಂದವಿದೆ ಎಂದು ಸಾಬೀತುಪಡಿಸಲು ಬೇರೆ ಯಾವುದಾದರೂ ಪುರಾವೆಯ ಆವಶ್ಯಕತೆಯಿದೆಯೇ? ಪ್ರತಿಯೊಂದು ವಸ್ತುವಿನಿಂದ ಮನುಷ್ಯನು ಆನಂದವನ್ನು ಗಳಿಸುತ್ತಾನೆ ಎಂದಾದರೆ, ಆರಾಧನೆಯಲ್ಲಿ ಏಕಿಲ್ಲ? ಆದುದರಿಂದ ನೀವು ಚೆನ್ನಾಗಿ ಮನವರಿಕೆ ಮಾಡಿರಿ, ಆರಾಧನೆ ಸಹ ಒಂದು ಭಾರವಲ್ಲ. ಅದೊಂದು ಟ್ಯಾಕ್ಸ್ ಅಲ್ಲ. ಅದರಲ್ಲಿಯೂ ಒಂದು ರುಚಿ ಮತ್ತು ಆನಂದವಿದೆ. ಆರಾಧನೆಯಿಂದ ದೊರಕುವ ರಸಾನುಭೂತಿ ಮತ್ತು ಸಂತೋಷವು ಲೋಕದ ಎಲ್ಲ ರಸಾನುಭೂತಿಗಳಿಗಿಂತ ಮತ್ತು ಎಲ್ಲ ಇಂದ್ರಿಯಾನುಭೂತಿಗಳಿಗಿಂತ ಶ್ರೇಷ್ಠ ಮತ್ತು ಉನ್ನತ ಮಟ್ಟದ್ದಾಗಿದೆ. ಒಬ್ಬ ರೋಗಿ ಅತ್ಯುತ್ತಮವಾದ ರುಚಿಯುಳ್ಳ ಆಹಾರ ಪದಾರ್ಥಗಳ ರುಚಿಯನ್ನು ಕೂಡ ಅನುಭವಿಸಲಾರನು. ಅದೇ ರೀತಿ ದುರದೃಷ್ಟವಂತನಾದ ಮನುಷ್ಯನು ಆರಾಧನೆಯಿಂದ ರಸಾನುಭೂತಿ ಗಳಿಸುವುದಿಲ್ಲ. (ಮಲ್‌ಫೂಝಾತ್, ಸಂಪುಟ–1, ಪುಟ–160, 1984 ಆವೃತ್ತಿ)

ಆತನ ಸ್ಥಿತಿಯೂ ರೋಗಿಯದ್ದಾಗಿದೆ. ತನ್ನ ರೋಗದ ಚಿಕಿತ್ಸೆಯ ಬಗ್ಗೆ ಯೋಚಿಸಬೇಕು. ಆದ್ದರಿಂದ ಆನಂದವನ್ನು ಗಳಿಸಲು ಯಾವ ರೀತಿಯಲ್ಲಿ ಪರಿಶ್ರಮಿಸಬೇಕು ಎಂಬ ಅಂಶವನ್ನು ಅರಿಯುವ ಆವಶ್ಯಕತೆಯಿದೆ.

ಯಾವುದರ ಬಗ್ಗೆ ಮನುಷ್ಯನಿಗೆ ಗೊತ್ತೇ ಇಲ್ಲವೋ, ಯಾರ ಎಲ್ಲ ಇಂದ್ರಿಯಗಳು ನಿರ್ಜೀವವಾಗಿವೆಯೋ ಅಂಥವನಿಗೆ ಯಾವುದಾದರೂ ಅನುಗ್ರಹ ಮತ್ತು ಅದರ ರುಚಿಯಿಂದ ಪ್ರಯೋಜನ ಪಡೆಯಲು ಹೇಗೆ ಸಾಧ್ಯ? ಅದರ ರುಚಿಯನ್ನು ಅರಿಯಲು ಹೇಗೆ ಸಾಧ್ಯ? ಲೌಕಿಕತೆಯಲ್ಲಿ ಮನುಷ್ಯನು ಸಿಲುಕಿಕೊಂಡು ಆರಾಧನಾ ಇತ್ಯಾದಿಗಳ ಚಿಂತೆಯೇ ಇರದಿರುವಾಗ ಅವನು ರೋಗಿಯಂತಾಗಿದ್ದಾನೆ.

ಅದನ್ನು ಬಗೆಹರಿಸುವ ವಿಧಾನದ ಬಗ್ಗೆಯೂ ಹಝ್ರತ್ ಮಸೀಹ್ ಮೌಊದ್(ಅ) ಹೇಳಿರುವರು. ಅವರು ಹೇಳುತ್ತಾರೆ: ಜನರು ನಮಾಝಿನಲ್ಲಿ ಅಜಾಗರೂಕರೂ ಸೋಮಾರಿಗಳು ಏಕೆಂದರೆ, ಅಲ್ಲಾಹನು ನಮಾಝಿನಲ್ಲಿ ಇರಿಸಿರುವ ಆನಂದದ ಮತ್ತು ರುಚಿಯ ಬಗ್ಗೆ ಅವರಿಗೆ ಗೊತ್ತೇ ಇಲ್ಲ. ಅದರ ಅರಿವು ಇಲ್ಲವೆಂಬುದೇ ಅದರ ದೊಡ್ಡದಾದ ಕಾರಣವಾಗಿದೆ. ಪಟ್ಟಣಗಳಲ್ಲಿ ಮತ್ತು ಗ್ರಾಮಗಳಲ್ಲಿ ಇನ್ನೂ ಹೆಚ್ಚಿನ ಸೋಮಾರಿತನ ಮತ್ತು ಅಜಾಗ್ರತೆಯಿದೆ. ಶೇಕಡ 50ರಷ್ಟು ಜನರು ಕೂಡ ಸಂಪೂರ್ಣವಾದ ಉತ್ಸಾಹ ಮತ್ತು ನೈಜವಾದ ಪ್ರೇಮದಿಂದ ತನ್ನ ನೈಜವಾದ ಪ್ರಭುವಿನ ಮುಂದೆ ತಲೆ ಬಾಗುವುದಿಲ್ಲ. ಪುನಃ ಇದೇಕೆ ಎಂಬ ಸವಾಲು ಏಳುತ್ತದೆ. ಏಕೆ ತಲೆ ಬಾಗಿಸುವುದಿಲ್ಲ, ಏಕೆ ಆರಾಧನೆ ಮಾಡುವುದಿಲ್ಲ. ಏಕೆಂದರೆ ಅವರಿಗೆ ಈ ಸ್ವಾದದ ಅರಿವೇ ಇಲ್ಲ. ಅವರು ಎಂದಿಗೂ ಅದರ ರುಚಿಯನ್ನು ನೋಡಿಯೇ ಇಲ್ಲ. ನಾವು ನಮ್ಮ ಕೆಲಸಗಳಲ್ಲಿ ನಿರತರಾಗಿರುತ್ತೇವೆ. ಆಗ ಮುಅಧ್ಧಿನ್ ಅಧ್ಹಾನ್ ಕರೆ ನೀಡುತ್ತಾನೆ. ಆದರೆ ನಾವು ಮುಅಧ್ಧಿನನ ಬಾಂಗನ್ನು ಆಲಿಸಲೇ ಇಷ್ಟಪಡುವುದಿಲ್ಲ. ನಾವು ನಮ್ಮ ಕೆಲಸದಲ್ಲಿ

ನಿರತರಾಗಿರುವಾಗ ಅಧ್ಹಾನ್ ನೀಡಿ ಇದೆಂತಹ ಕಿರುಕುಳ ಕೊಡುತ್ತಿದ್ದಾನೆ. ಅಧ್ಹಾನಿನ ಶಬ್ದ ಕೇಳಿ ಅವರ ಹೃದಯ ನೋವು ಅನುಭವಿಸುತ್ತದೆ. ಕೆಲವರು ಹೀಗೆ ಹೇಳುತ್ತಾರೆ: ತೋರಿಕೆಗಾದರೂ ನಮಾಝ್ ನಿರ್ವಹಿಸಲು ಹೋಗಬೇಕಾಗುವುದು. ಅಂಗಡಿಯನ್ನು ಮುಚ್ಚಿಡಬೇಕಾಗುವುದು. ಇಂತಹ ಸ್ಥಿತಿ ದಯನೀಯವಾಗಿದೆ. ಕೆಲವರು ಇಲ್ಲಿಯೂ ಇರುವರು. ಅವರ ಅಂಗಡಿಗಳು ಮಸೀದಿಯ ಅಡಿಯಲ್ಲಿರುತ್ತವೆ. ಆದರೆ ಒಮ್ಮೆಯೂ ಮಸೀದಿಗೆ ಹೋಗಿ ನಿಂತುಕೊಳ್ಳುವುದು ಕೂಡ ಇಲ್ಲ. ಯಾವ ರೀತಿಯಲ್ಲಿ ಹಣ್ಣುಗಳು ಮತ್ತು ಇತರ ವಸ್ತುಗಳಲ್ಲಿ ವಿವಿಧ ತರದ ರುಚಿಗಳು ಇವೆಯೋ ಅದೇ ರೀತಿಯಲ್ಲಿ ನಮಾಝ್ ಮತ್ತು ಆರಾಧನೆಯ ರುಚಿಯನ್ನು ಕೂಡ ಅನುಭವಿಸುವಂತೆ ಮಾಡು ಎಂದು ಅಲ್ಲಾಹನೊಡನೆ ಅತ್ಯಂತ ನೋವು ಮತ್ತು ಆವೇಶದಿಂದ ದುಆ ಮಾಡಬೇಕು.

ಈ ದುಆವನ್ನು ಅಲ್ಲಾಹನಲ್ಲಿ ಮಾಡುವ ಆವಶ್ಯಕತೆಯಿದೆ. ಆಗಲೇ ಆನಂದ ಲಭಿಸುವುದು. ಮನುಷ್ಯನಿಗೆ ಒಂದು ಬಾರಿ ಅದರ ರುಚಿ ಲಭಿಸಿದರೆ, ಆ ರುಚಿಯ ಅರಿವಾಗುತ್ತದೆ. ಆಗ ಅದರ ಕಡೆಗೆ ಗಮನವೂ ಇರುತ್ತದೆ. ನೋಡಿರಿ, ಒಬ್ಬ ವ್ಯಕ್ತಿ ಸುಂದರವಾದ ಒಂದು ವಸ್ತುವನ್ನು ಆನಂದಿಸುತ್ತಾ ನೋಡುವುದಾದರೆ, ಅದು ಅವನಿಗೆ ಚೆನ್ನಾಗಿ ನೆನಪಿಲ್ಲಿರುತ್ತದೆ. ಅದೇ ರೀತಿಯಲ್ಲಿ ಒಂದು ವಿರೂಪವಾದ ವಸ್ತುವನ್ನು ಅಥವಾ ಅನಿಷ್ಟಕರವಾದ ರೂಪವನ್ನು ನೋಡುವುದಾದರೆ ಅದರ ಎಲ್ಲ ಸ್ಥಿತಿಯು ಪೂರ್ಣರೂಪದಲ್ಲಿ ಅವನ ನೆನಪಿಗೆ ಬರುತ್ತದೆ. ಆದರೆ ಅದರೊಂದಿಗೆ ಯಾವುದೇ ಸಂಬಂಧವಿಲ್ಲದಿದ್ದರೆ, ಏನೂ ನೆನಪಿಲ್ಲಿರುವುದಿಲ್ಲ. ಅದೇ ರೀತಿಯಲ್ಲಿ ನಮಾಝ್ ಮಾಡದವರ ಪ್ರಕಾರ ನಮಾಝ್ ಎಂಬುದು ಒಂದು ತೆರಿಗೆಯಾಗಿದೆ. ಅನಾವಶ್ಯಕವಾಗಿ ಬೆಳಿಗ್ಗೆ ಎದ್ದು, ಚಳಿಗಾಲದಲ್ಲಿ ವುಝೂ ಮಾಡಿಕೊಂಡು, ನೆಮ್ಮದಿಯ ನಿದ್ದೆಯನ್ನು ಬಿಟ್ಟು, ಅನೇಕ ವಿಧದ ಸೌಕರ್ಯಗಳನ್ನು ನಷ್ಟಮಾಡಿಕೊಂಡು ಅನುಷ್ಠಿಸಬೇಕಾಗುತ್ತದೆ. ಸತ್ಯದಲ್ಲಿ ಅವರು ಬೇಜಾರಿನಲ್ಲಿದ್ದಾನೆ. ನಮಾಝಿನಲ್ಲಿರುವ ಆನಂದ ಮತ್ತು ನೆಮ್ಮದಿಯನ್ನು ಅವನು ತಿಳಿಯುವುದೇ ಇಲ್ಲ. ಹೆಸರಿಗೆ ಅವನು ಮೂಮಿನ್ ಮತ್ತು ಮುಸ್ಲಿಮನಾಗಿರುತ್ತಾನೆ. ಆದರೆ ಸತ್ಯದಲ್ಲಿ ಅವನ ಹೃದಯದಲ್ಲಿ ಒಂದು ಬೇಜಾರಿನ ಸ್ಥಿತಿಯಿದೆ. ಅದನ್ನು ಅವನು ಅರಿಯುವುದಿಲ್ಲ. ನಮಾಝಿಗೆ ಹೋಲಿಸಿ ಅವನಿಗೆ ನಿದ್ದೆ ಮತ್ತು ಮಲಗುವುದರಲ್ಲಿ ಹೆಚ್ಚಿನ ಆನಂದ ಸಿಗುತ್ತದೆ. ಹೀಗಿರುವಾಗ ನಮಾಝಿನಲ್ಲಿ ಆನಂದ ಹೇಗೆ ಸಿಗುವುದು ಎಂದು ಅವನಿಗೆ ಗೊತ್ತೇ ಇರುವುದಿಲ್ಲ. ಒಬ್ಬ ಮದ್ಯಪಾನಿ ಅಥವಾ ಮಾದಕದ್ರವ್ಯ ಸೇವಿಸುವವನಗೆ ಆನಂದ ಲಭಿಸದಿರುವಾಗ, ಆತನಿಗೆ ಮಾದಕತೆ ಲಭಿಸುವ ತನಕ ಆತನು ಶರಾಬನ್ನು ಕುಡಿಯುತ್ತಲೇ ಹೋಗುತ್ತಾನೆ. ಬುದ್ಧಿವಂತ ಮತ್ತು ಶ್ರೇಷ್ಠ ವ್ಯಕ್ತಿಗಳು ಇದರಿಂದ ಒಂದು ಪಾಠವನ್ನು ಕಲಿಯಬಹುದಾಗಿದೆ. ಅದೇನೆಂದರೆ, ನಿಷ್ಠಾವಂತನಾದ ಸತ್ಯವಿಶ್ವಾಸಿಯಾಗಿದ್ದರೆ ನಮಾಝನ್ನು ಸ್ಥಿರವಾಗಿ ಅನುಷ್ಠಿಸಬೇಕು.

ನಮಾಝನ್ನು ಸ್ಥಿರಚಿತ್ತತೆಯಿಂದ ಅನುಷ್ಠಿಸುತ್ತಾ ಹೋಗಬೇಕು ಮತ್ತು ಆತನಿಗೆ ಆನಂದ ಲಭಿಸುವ ವರೆಗೂ ಅನುಷ್ಠಿಸುತ್ತಾ ಹೋಗಬೇಕು. ಮದ್ಯಪಾನಿಯ ಮನಸ್ಸಿನಲ್ಲಿ ಒಂದು ಆನಂದದ ಮತ್ತು ಮಾದಕತೆಯ ತೊರೆಯಿರುತ್ತದೆ. ಅದನ್ನು ಗಳಿಸುವುದು ಆತನ ಏಕ ಉದ್ದೇಶವಾಗಿರುತ್ತದೆ. ಅದೇ ರೀತಿಯಲ್ಲಿ ಮನಸ್ಸಿನಲ್ಲಿ ಮತ್ತು ತನ್ನ ಎಲ್ಲ ಶಕ್ತಿ – ಸಾಮರ್ಥ್ಯಗಳ ಗಮನವು ನಮಾಝಿನಲ್ಲಿ ಅದರ ಆನಂದ ಗಳಿಸುವುದು ಆಗಿರಬೇಕು. ದುಆ ಕೂಡ ಮಾಡಬೇಕು ಮತ್ತು ಪ್ರಯತ್ನ ಕೂಡ ಮಾಡಬೇಕು. ಅನಂತರ ನಿಷ್ಠೆ ಮತ್ತು ಉತ್ಸಾಹದೊಂದಿಗೆ, ಕನಿಷ್ಠಪಕ್ಷ ಕುಡುಕನ ಉದ್ವಿಗ್ನತೆ ಮತ್ತು ತಳಮಳದ ರೀತಿಯಲ್ಲೇ ಹೀಗೆ ದುಆ ಮಾಡಬೇಕು: ಅಲ್ಲಾಹ್, ನನಗೆ ಆ ರುಚಿಯನ್ನು ಅನುಭವಿಸುವಂತೆ ಮಾಡಿಕೊಂಡು ಆ ಆನಂದವನ್ನು ನೀಡು. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಹಾಗಾದರೆ ನಾನು ಹೇಳುತ್ತೇನೆ ಮತ್ತು ಸತ್ಯವಾಗಿಯೂ ಹೇಳುತ್ತೇನೆ. ನಿಶ್ಚಯವಾಗಿಯೂ ಈ ನೋವಿನೊಂದಿಗೆ ದುಆ ಮಾಡಿದರೆ, ಆನಂದ ಕೂಡ ಲಭಿಸುವುದು. **ಇನ್ನಲ್ ಹಸನಾತಿ ಯುದ್‌ಹಿಬ್‌ನಸ್ಸಯ್ಯಿಆತಿ.** ಖಂಡಿತವಾಗಿಯೂ ಸತ್ಕರ್ಮಗಳು ದುಷ್ಕರ್ಮಗಳನ್ನು ಹೋಗಲಾಡಿಸುವುವು ಅಥವಾ ನಮಾಝ್ ದುಷ್ಕರ್ಮಗಳಿಂದ ದೂರ ಸರಿಸುವುದು ಎಂದು ಪವಿತ್ರ ಖುರ್‌ಆನ್ ಹೇಳುತ್ತದೆ. ಆದ್ದರಿಂದ ಈ ಒಳಿತುಗಳನ್ನು ಮತ್ತು ಆನಂದವನ್ನು ಮನಸ್ಸಿನಲ್ಲಿಟ್ಟುಕೊಂಡು ದುಆ ಮಾಡಬೇಕು. ಸತ್ಯಸಂಧರಿಗೆ ಮತ್ತು ಸತ್ಕರ್ಮಿಗಳಿಗೆ ಲಭಿಸಿದಂತಹ ನಮಾಝನ್ನು ದಯಪಾಲಿಸು ಎಂದು ಹೇಳಿ ದುಆ ಮಾಡಿರಿ. ಪವಿತ್ರ ಖುರ್‌ಆನಿನಲ್ಲಿ ಇನ್ನೊಂದೆಡೆ ನಮಾಝ್ ಅಶ್ಲೀಲ ಕೃತ್ಯಗಳಿಂದಲೂ ಕೆಡುಕುಗಳಿಂದಲೂ ರಕ್ಷಿಸುತ್ತದೆ ಎಂದು ಸಹ ಅಲ್ಲಾಹನು ಹೇಳುತ್ತದೆ. ಆದರೆ ಕೆಲವರು ನಮಾಝ್ ಅನುಷ್ಠಿಸುತ್ತಿದ್ದರೂ ಕೆಟ್ಟ ಕೆಲಸಗಳನ್ನು ಮಾಡುತ್ತಿರುವುದಾಗಿ ನಾವು ಕಾಣುತ್ತಿದ್ದೇವೆ. ಇದಕ್ಕೆ ಕಾರಣವೇನೆಂದರೆ, ಅವರು ನಮಾಝ್ ನಿರ್ವಹಿಸುವುದು ನಮಾಝಿನ ವಾಸ್ತವಾಂಶ ಅರಿಯದೆಯೂ ಸತ್ಯರಹಿತವಾಗಿಯೂ ಆಗಿದೆ. ಅವರ ಮೇಲೆ ಯಾವುದೇ ಪ್ರಭಾವ ಉಂಟಾಗುವುದಿಲ್ಲ. ಅವರು ನಮಾಝನ್ನು ನಿರ್ವಹಿಸುತ್ತಾರೆ. ಆದರೆ ಅದರ ತಿರುಳನ್ನು ಅರಿತುಕೊಂಡೋ ಅಥವಾ ಸರಿಯಾಗಿಯೋ ಅಲ್ಲ. ಅವರು ಆಚಾರ ಮತ್ತು ಅಭ್ಯಾಸ ಪ್ರಕಾರ ಅಂಗವಿನ್ಯಾಸ ಮಾತ್ರ ಮಾಡುತ್ತಾರೆ. ಅವರ ಆತ್ಮ ಮೃತವಾಗಿದೆ. ಇಂತಹ ನಮಾಝ್‌ಗಳ ಹೆಸರನ್ನು ಅಲ್ಲಾಹನು ಹಸನಾತ್ ಎಂದೋ ಒಳಿತೋ ಎಂದೋ ಹೇಳಿಲ್ಲ. ಇಂತಹ ನಮಾಝ್‌ಗಳು ಸತ್ಕರ್ಮಗಳಲ್ಲಿ ಗಣಿಸಲ್ಪಡುವುದಿಲ್ಲ. ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನು ಇಲ್ಲಿ ಹಸನಾತ್ ಎಂಬ ಪದವನ್ನು ಪ್ರಯೋಗಿಸಿದ್ದಾನೆ. ಅಸ್ಸಲಾತ್ ಎಂದಲ್ಲ. ಅದರ ಅರ್ಥ ನಮಾಝ್ ಆಗಿದ್ದರು ಕೂಡ. ಅದೇಕೆಂದರೆ, ಇದರಿಂದ ನಮಾಝಿನ ಶ್ರೇಷ್ಠತೆ ಮತ್ತು ಸೌಂದರ್ಯ ಕಡೆಗೆ ಸೂಚನೆ ನೀಡಲಾಗಿದೆ. ಸತ್ಯದ ಆತ್ಮ ಹೊಂದಿ ನಮಾಝ್ ಮಾಡುವವರ ನಮಾಝ್ ಕೆಡುಕಿನಿಂದ ದೂರ ಸರಿಸುತ್ತದೆ. ಅನುಗ್ರಹದ ಪ್ರಭಾವ ಅದರಲ್ಲಿ ಇರುತ್ತದೆ.

ಅಂತಹ ನಮಾಝ್ ಖಂಡಿತವಾಗಿಯೂ ಕೆಡುಕುಗಳನ್ನು ದೂರ ಮಾಡುತ್ತದೆ. ನಮಾಝ್ ಎಂಬುದು ನಿಲ್ಲುವುದು ಮತ್ತು ಕುಳಿತುಕೊಳ್ಳುವುದರ ಹೆಸರಲ್ಲ. ನಮಾಝಿನ ತಿರುಳು ಮತ್ತು ಚೈತನ್ಯ ಅದರ ದುಆ ಆಗಿದೆ. ಅದೊಂದು ರಸಾನುಭೂತಿ ಮತ್ತು ಆನಂದವನ್ನು ತನ್ನೊಳಗೆ ಇರಿಸಿಕೊಂಡಿದೆ. (ಮಲ್‌ಫೂಝಾತ್, ಸಂಪುಟ–1, ಪುಟ–162–164, 1984 ಆವೃತ್ತಿ)

ಆದ್ದರಿಂದ ಈ ರಸಾನುಭೂತಿ ಮತ್ತು ಆನಂದವನ್ನು ಗಳಿಸಲಿಕ್ಕಾಗಿ ಮತ್ತು ಈ ಕಾಯಿಲೆಯಿಂದ ಹೊರಗೆ ಬರಲಿಕ್ಕಾಗಿಯೂ ದುಆ ಮಾಡುವುದು ಆವಶ್ಯಕ. ತನ್ನ ಲೌಕಿಕವಾದ ಅಭಿಲಾಷೆಗಳನ್ನು ಈಡೇರಿಸಲಿಕ್ಕಾಗಿ ಮಾತ್ರ ದುಆ ಇರಬಾರದು. ಬದಲಾಗಿ ಅದಕ್ಕಾಗಿಯೂ ದುಆ ಇರಬೇಕು. ಕಾಯಿಲೆಯಿಂದ ಮುಕ್ತಿ ಪಡೆಯಲು ಮನುಷ್ಯನು ಪ್ರತಿಯೊಂದು ಉಪಾಯವನ್ನು ಮಾಡುತ್ತಾನೆ. ಚಿಕಿತ್ಸೆಯೂ ಪ್ರಾರ್ಥನೆಯೂ ಮಾಡಿಕೊಳ್ಳುತ್ತಾನೆ. ಅದೇ ರೀತಿಯಲ್ಲಿ ಇದಕ್ಕಾಗಿಯೂ ಮಾಡಬೇಕಾಗಿದೆ.

ಅವರು(ಅ) ಹೇಳುತ್ತಾರೆ: ನಮಾಝನ್ನು ಹಝ್ರತ್ ಪೈಗಂಬರ್(ಸ) ಅನುಷ್ಠಿಸುತ್ತಿದ್ದ ರೀತಿಯಲ್ಲಿ ಅನುಷ್ಠಿಸಿರಿ. ಅದರೊಂದಿಗೆ ತನ್ನ ವೈಯಕ್ತಿಕ ಉದ್ದೇಶಗಳಿಗಾಗಿ ಮತ್ತು ಆವಶ್ಯಕತೆಗಳಿಗಾಗಿ ಸುನ್ನತಾದ ದುಆ ಮತ್ತು ಧಿಕ್ರಿನ ನಂತರ ಸ್ವಂತ ಭಾಷೆಯಲ್ಲಿ ಅಲ್ಲಾಹನೊಡನೆ ಬೇಡಿರಿ. ಇದರಲ್ಲಿ ತಪ್ಪಿಲ್ಲ. ಇದರಿಂದ ನಮಾಝ್ ಅಸಾಧುವಾಗುವುದಿಲ್ಲ. ಈಗಂತು ಜನರು ನಮಾಝನ್ನು ಕೆಡಿಸಿರುವರು. ನಮಾಝನ್ನು ಆತುರದಿಂದ ಕೋಳಿ ಕಾಳನ್ನು ಕುಕ್ಕುವ ರೀತಿಯಲ್ಲಿ ನಿರ್ವಹಿಸುತ್ತಾರೆ ಮತ್ತು ಹಿಂದೆ ಹೋಗಿ ದುಆ ಮಾಡಲು ಕುಳಿತುಕೊಳ್ಳುತ್ತಾರೆ. ವಿಶೇಷವಾಗಿ ಪಾಕಿಸ್ತಾನ ಮತ್ತು ಹಿಂದುಸ್ತಾನದಲ್ಲಿ ಇದರ ವಾಡಿಕೆಯಿದೆ. ನಮಾಝನ್ನು ಅವಸರಪಟ್ಟು ನಿರ್ವಹಿಸಿದ ನಂತರ ಕೈಯೆತ್ತಿ ದುಆ ಮಾಡಲು ಶುರುಮಾಡುತ್ತಾರೆ. ನಮಾಝಿನ ನೈಜ ತಿರುಳು ಮತ್ತು ಚೈತನ್ಯ ದುಆವೇ ಆಗಿದೆ. ನಮಾಝ್ ಮಾಡಿದ ನಂತರ ದುಆ ಮಾಡುವುದರಿಂದ ಯಥಾರ್ಥವಾದ ಉದ್ದೇಶ ಹೇಗೆ ಲಭಿಸುವುದು. ಉದಾಹರಣೆಗೆ ಒಬ್ಬನಿಗೆ ಅರಸನ ಆಸ್ಥಾನಕ್ಕೆ ಹೋಗಲು ಸಂದರ್ಭ ಸಿಕ್ಕರೆ, ಆತನ ಕೋರಿಕೆಗಳನ್ನು ಇರಿಸಲು ಆತನಿಗೆ ಅವಕಾಶ ಕೂಡ ಕೊಡಲಾಗಿದ್ದರೂ ಆಗ ಆತನು ಏನೂ ಕೋರಿಕೆ ಇರಿಸದೇ ಹೊರಗೆ ಬಂದು ತನ್ನ ಕೋರಿಕೆಯನ್ನು ಇರಿಸುವುದರಿಂದ ಪ್ರಯೋಜನವೇನು? ಅದೇ ರೀತಿಯಲ್ಲಿ ನಮಾಝಿನಲ್ಲಿ ನೋವಿನಿಂದ ಮತ್ತು ರೋದನದಿಂದ ದುಆಗಳನ್ನು ಮಾಡದವನ ಸ್ಥಿತಿಯೂ ಇದೇ ಆಗಿದೆ. ಆದ್ದರಿಂದ ನೀವು ಮಾಡಲು ಬಯಸುವ ದುಆವನ್ನು ನಮಾಝಿನಲ್ಲಿ ನಿರ್ವಹಿಸಿರಿ. ದುಆದ ಶಿಷ್ಟಾಚಾರಗಳು ಮತ್ತು ನಿಬಂಧನೆಗಳನ್ನು ಗಮನದಲ್ಲಿರಿಸಬೇಕು.
(ಮಲ್‌ಫೂಝಾತ್, ಸಂಪುಟ–3, ಪುಟ–258, 1984)

ಹಝ್ರತ್ ಪೈಗಂಬರ್(ಸ) ನಮಗೆ ನಮಾಝ್ ಮಾಡಲು ಹೇಗೆ ಕಲಿಸಿದರು ಎಂಬುದರ ಬಗ್ಗೆ ಒಂದು ವರದಿಯಿದೆ. ಒಬ್ಬ ವ್ಯಕ್ತಿ ಬಂದು ನಮಾಝ್ ನಿರ್ವಹಿಸಿದನು. ಅನಂತರ ಹಝ್ರತ್ ಪೈಗಂಬರ್(ಸ)ರ ಸನ್ನಿಧಿಗೆ ಬಂದು ಸಲಾಂ ಹೇಳಿದನು. ಹಝ್ರತ್ ಪೈಗಂಬರ್(ಸ) ಹೇಳಿದರು: ಹೋಗು, ನಮಾಝನ್ನು ಪುನಃ ನಿರ್ವಹಿಸು. ಹಝ್ರತ್ ಪೈಗಂಬರ್(ಸ) ಆತನ ನಮಾಝನ್ನು ನೋಡುತ್ತಿದ್ದರು. ಅವರು ಅಲ್ಲಿ ಜನಕೂಟದಲ್ಲಿ ಕುಳಿತುಕೊಂಡಿದ್ದರು. ಹೀಗೆ ಆತನೊಡನೆ ಮೂರು ಬಾರಿ ನಮಾಝ್ ನಿರ್ವಹಿಸಲು ಹೇಳಿದರು. ಕೊನೆಗೆ ಆತನು ಹೇಳಿದನು: ಯಾ ರಸೂಲಲ್ಲಾಹ್, ನನ್ನಿಂದ ಇದಕ್ಕಿಂತ ಉತ್ತಮವಾದ ನಮಾಝನ್ನು ನಿರ್ವಹಿಸಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ನೀವೇ ನನಗೆ ನಮಾಝಿನ ಸರಿಯಾದ ವಿಧಾನವನ್ನು ಕಲಿಸಿಕೊಡಿರಿ. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ನೀನು ನಮಾಝ್ ಮಾಡಲು ನಿಲ್ಲುವಾಗ ತಕ್ಬೀರ್ ಹೇಳು. ಅನಂತರ ಸೂರಃ ಫಾತಿಹದೊಂದಿಗೆ ಸಾಧ್ಯವಾದಷ್ಟು ಪವಿತ್ರ ಖುರ್‌ಆನಿನ ವಚನಗಳನ್ನು ಓದು. ಅನಂತರ ಪೂರ್ಣ

ಸಮಾಧಾನದಿಂದ ರುಕೂಅ್ ಮಾಡು. ಸ್ವಲ್ಪ ತಲೆಬಾಗಿಸಿ ಎದ್ದುನಿಲ್ಲುವುದಲ್ಲ. ಪೂರ್ಣ ಸಂತೃಪ್ತಿಯೊಂದಿಗೆ ರುಕೂಅ್ ಮಾಡಬೇಕು. ಅನಂತರ ನೇರವಾಗಿ ನಿಲ್ಲಬೇಕು. ಅನಂತರ ತೃಪ್ತಿಕರವಾಗಿ ಸಜದ ಮಾಡಬೇಕು. ಅನಂತರ ಸಜ್‌ದದಿಂದ ಎದ್ದು ಪೂರ್ಣವಾಗಿ ಕುಳಿತುಕೊಳ್ಳಬೇಕು. ಕೆಲವರು ಎರಡು ಸಜದದ ನಡುವೆ ಬೇಗನೇ ಸ್ವಲ್ಪ ತಲೆಯೆತ್ತಿಕೊಂಡ ನಂತರ ಪುನಃ ಸಜದ ಮಾಡುತ್ತಾರೆ. ಹಾಗಲ್ಲ, ಪೂರ್ಣವಾಗಿ ಕುಳಿತುಕೊಂಡ ನಂತರ ಪುನಃ ಸಜದ ಮಾಡಬೇಕು. ಹೀಗೆ ನಿಲ್ಲಿಸಿ ನಿಲ್ಲಿಸಿ ಪೂರ್ತಿ ನಮಾಝನ್ನು ಸುಂದರವಾಗಿ ಅನುಷ್ಠಿಸಬೇಕು. (ಸಹೀಹ್ ಬುಖಾರಿ, ಕಿತಾಬುಲ್ ಅಝಾನ್, ಹದೀಸ್-793)

ಉತ್ತಮವಾಗಿ ಹೇಗೆ ನಮಾಝ್ ಮಾಡುವುದು ಎಂದು ಕೆಲವು ಜನರು ಪ್ರಶ್ನಿಸುತ್ತಾರೆ. ಉತ್ತಮವಾಗಿ ನಮಾಝ್ ಮಾಡುವ ರೀತಿಯೇನೆಂದರೆ, ನಿಲ್ಲಿಸಿ ನಿಲ್ಲಿಸಿ ನಮಾಝಿನ ಪ್ರತಿಯೊಂದು ಚಲನಕ್ಕೆ ಮತ್ತು ಅಂಗವಿನ್ಯಾಸಕ್ಕೆ ಪೂರ್ತಿ ಸಮಯವನ್ನು ಕೊಟ್ಟು ಆರಾಮವಾಗಿ ಅನುಷ್ಠಿಸಬೇಕು.

ನಮಾಝಿನ ನೈಜತೆಯನ್ನು ಮನವರಿಕೆ ಮಾಡಿಕೊಂಡು ಅದನ್ನು ಅನುಷ್ಠಿಸುವ ಕಡೆಗೆ ಗಮನಹರಿಸಿದ ನಂತರ ಒಬ್ಬ ಸತ್ಯವಿಶ್ವಾಸಿಯು ಪವಿತ್ರ ಖುರ್‌ಆನಿನ ಕಡೆಗೆ ಗಮನ ನೀಡಬೇಕು. ಹೆಚ್ಚಾಗಿ ರಮಝಾನಿನಲ್ಲಿ ಇದರ ಕಡೆಗೆ ಗಮನವಿರುತ್ತದೆ. ಇದು ಕೂಡ ಒಂದು ರಮಝಾನನ್ನು ಮತ್ತೊಂದು ರಮಝಾನಿನೊಂದಿಗೆ ಜೋಡಿಸುವ ಒಂದು ಮಾರ್ಗವಾಗಿದೆ. ಪವಿತ್ರ ಖುರ್‌ಆನಿನ ವ್ಯಾಖ್ಯಾನದ ಕಡೆಗೂ ಗಮನಹರಿಸಬೇಕು.

ಪವಿತ್ರ ಖುರ್‌ಆನನ್ನು ಪಾರಾಯಣ ಮಾಡುವುದರ ಕುರಿತು ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ:

ನಮ್ಮ ಬಳಿ ಪವಿತ್ರ ಖುರ್‌ಆನ್ ಇಲ್ಲದಿದ್ದರೆ ಮತ್ತು ಸಂಶಯಾಸ್ಪದವಾದ ಹದೀಸ್‌ಗಳ ಸಮಾಹಾರವೇ ನಮಗೆ ಹೆಮ್ಮೆಪಡಲು ವಿಶ್ವಾಸಾರ್ಹದವಾಗಿ ಇರುತ್ತಿದ್ದರೆ, ನಮಗೆ ಇತರ ಸಮುದಾಯಗಳ ಮುಂದೆ ಮುಖ ತೋರಿಸಲು ಕೂಡ ಸಾಧ್ಯವಾಗುತ್ತಿರಲಿಲ್ಲ. ಖುರ್‌ಆನ್ ಎಂಬ ಪದದ ಬಗ್ಗೆ ನಾನು ಚಿಂತಿಸಿದಾಗ ನನಗೆ ತಿಳಿದ ಸಂಗತಿಯೇನೆಂದರೆ, ಈ ಅನುಗ್ರಹೀತ ಪದದಲ್ಲೇ ಪ್ರಚಂಡವಾದ ಭವಿಷ್ಯವಾಣಿಯಿದೆ. ಅದೇನೆಂದರೆ, ಪವಿತ್ರ ಖುರ್‌ಆನೇ ಓದಲು ಯೋಗ್ಯವಾದ ಗ್ರಂಥವಾಗಿದೆ ಮತ್ತು ಇತರ ಪುಸ್ತಕಗಳು ಕೂಡ ಇದರ ಜೊತೆಗೆ ಸರಿಸಾಟಿಯೆಂಬಂತೆ ತೋರಿಸಲಾಗುವ ಒಂದು ಕಾಲದಲ್ಲಿ ಪವಿತ್ರ ಖುರ್‌ಆನ್ ಓದಲು ಇನ್ನೂ ಯೋಗ್ಯವಾದ ಗ್ರಂಥವಾಗುವುದು. ಆ ಕಾಲದಲ್ಲಿ ಇಸ್ಲಾಮಿನ ಗೌರವವನ್ನು ಸಂರಕ್ಷಿಸಲು ಮತ್ತು ಸುಳ್ಳು ಮತ್ತು ಮಿಥ್ಯೆಗಳನ್ನು ಕೊನೆಗೊಳಿಸಲು ಈ ಗ್ರಂಥವೇ ಓದಲು ಯೋಗ್ಯವಾಗಿರುವುದು. ಇತರ ಗ್ರಂಥಗಳು ಪೂರ್ಣವಾಗಿಯೂ ಉಪೇಕ್ಷಿಸುವಂತದ್ದಾಗುವುದು. ಫುರ್ಖಾನ್ ಎಂಬುದರ ಅರ್ಥವೂ ಇದೇ ಆಗಿದೆ. ಸತ್ಯ ಮತ್ತು ಮಿಥ್ಯದ ನಡುವೆ ಈ ಗ್ರಂಥ ವ್ಯತ್ಯಾಸ ತೋರಿಸುವುದಾಗಿ ಇರುವುದು. ಯಾವುದೇ ಹದೀಸ್ ಮತ್ತು ಯಾವುದೇ ಇತರ ಗ್ರಂಥಗಳು ಈ ಸ್ಥಾನವನ್ನು ಹೊಂದಿರದು. ಆದ್ದರಿಂದ ಈಗ ಇತರ ಎಲ್ಲ ಪುಸ್ತಕಗಳನ್ನು ಬಿಟ್ಟುಬಿಡಿರಿ. ದಿನರಾತ್ರಿ ಪವಿತ್ರ ಖುರ್‌ಆನನ್ನೇ ಓದಿರಿ.

ಪವಿತ್ರ ಕುರ್‌ಆನ್ ಕಡೆಗೆ ಗಮನಹರಿಸದೇ ಇತರ ಪುಸ್ತಕಗಳ ಓದುವಿಕೆಯಲ್ಲಿ ದಿನರಾತ್ರಿ ಕಳೆಯುವವನು ದೊಡ್ಡ ಅವಿಶ್ವಾಸಿಯಾಗಿರುವನು. ಇದು ಬಹಳ ದುಃಖದ ವಿಷಯವಾಗಿದೆ. ಹದೀಸಿನ ಚರ್ಚೆ ಮತ್ತು ದರ್ಸ್‌ಗಳು ನಡೆಸಲಾಗುವ ರೀತಿಯಲ್ಲಿ ಪವಿತ್ರ ಖುರ್‌ಆನಿನ ಬಗ್ಗೆ ನಡೆಸಲಾಗುವುದಿಲ್ಲ.

ಈಗ ಪವಿತ್ರ ಖುರ್‌ಆನ್ ಎಂಬ ಆಯುಧವನ್ನು ಕೈಯಲ್ಲಿ ಹಿಡಿದುಕೊಳ್ಳುವುದರಿಂದಲೇ ನಿಮಗೆ ವಿಜಯ ಲಭಿಸುವುದು. ಆ ಪ್ರಕಾಶದ ಮುಂದೆ ಯಾವುದೇ ಅಂಧಕಾರ ಇರಲು ಸಾಧ್ಯವಲ್ಲ.

(ಮಲ್‌ಫೂಝಾತ್, ಸಂಪುಟ-2, ಪುಟ-122, 1984)

ಒಳಿತುಗಳನ್ನು ನೆಲೆನಿಲ್ಲಿಸುವುದರ ಬಗ್ಗೆ ಹಝ್ರತ್ ಮಸೀಹ್ ಮೌಊದ್(ಅ) ಹೀಗೆ ಉಪದೇಶಿಸುತ್ತಾರೆ: ದೀನಿಗೆ ಪ್ರತಿಯೊಂದು ಸ್ಥಿತಿಯಲ್ಲೂ ಲೌಕಿಕತೆಯ ಮೇಲೆ ಆದ್ಯತೆ ಮತ್ತು ಪ್ರಾಮುಖ್ಯತೆಯನ್ನು ನೀಡು. ನೋಡಿರಿ, ಎರಡು ವಿಧದ ಜನರು ಇರುತ್ತಾರೆ. ಒಂದು ಇಸ್ಲಾಮನ್ನು ಸ್ವೀಕಾರ ಮಾಡಿದ ನಂತರ ಲೌಕಿಕವಾದ ವ್ಯಾಪಾರಗಳಲ್ಲಿ ನಿರತರಾದವರು. ಶೈತಾನನು ಅವರ ತಲೆಗಳಲ್ಲಿ ಸವಾರನಾಗಿರುವನು. ನಾನು ಹೇಳುತ್ತಿರುವುದರ ಅರ್ಥ ವ್ಯಾಪಾರ ನಿಷಿದ್ಧವೆಂದಲ್ಲ. ಸಹಾಬಿಯರು ವ್ಯಾಪಾರಗಳನ್ನು ಮಾಡುತ್ತಿದ್ದರು. ಆದರೆ ಅವರು ಧರ್ಮಕ್ಕೆ ಆದ್ಯತೆ ನೀಡುತ್ತಿದ್ದರು. ಅವರು ಇಸ್ಲಾಂ ಸ್ವೀಕಾರ ಮಾಡಿದ ನಂತರ ಹೃದಯವನ್ನು ದೃಢವಿಶ್ವಾಸದಿಂದ ತುಂಬಿಸುವಂತಹ ಇಸ್ಲಾಮಿನ ಬಗ್ಗೆಗಿನ ಸತ್ಯವಾದ ಅರಿವನ್ನು ಅವರು ಗಳಿಸಿದರು. ಆದ್ದರಿಂದಲೇ ಅವರು ಯಾವುದೇ ಮೈದಾನದಲ್ಲಿ ಶೈತಾನನ ದಾಳಿಯಿಂದ ಹದಗೆಡಲಿಲ್ಲ. ಯಾವುದೇ ಸಂಗತಿಯು ಅವರನ್ನು ಸತ್ಯವನ್ನು ಹೇಳುವುದರಿಂದ ಮತ್ತು ಪ್ರಕಟಗೊಳಿಸುವುದರಿಂದ ತಡೆಯಾಗಲಿಲ್ಲ. ನಾನು ಹೇಳಿದ ಮಾತಿನ ಅರ್ಥ ಇಷ್ಟು ಮಾತ್ರವಾಗಿದೆ. ಅದೇನೆಂದರೆ, ಯಾರು ಸಂಪೂರ್ಣವಾಗಿಯೂ ಲೋಕದ ದಾಸ ಮತ್ತು ಗುಲಾಮರಾಗುತ್ತಾರೋ, ಯಾರು ಲೋಕದ ಪೂಜೆಯನ್ನು ಮಾಡುವಂಥವರು ಆಗುತ್ತಾರೋ ಅಂತಹ ಜನರ ಮೇಲೆ ಶೈತಾನನ ನಿಯಂತ್ರಣವಿರುತ್ತದೆ.

ಮತ್ತೊಂದು ವಿಧದ ಜನರು ಧರ್ಮದ ಅಭಿವೃದ್ಧಿಯ ಬಗ್ಗೆ ಚಿಂತಿತರಾಗಿರುತ್ತಾರೆ. ಅಂತಹ ಗುಂಪನ್ನು ಅಲ್ಲಾಹನ ಸೈನ್ಯ ಎಂದು ಕರೆಯಲಾಗುತ್ತದೆ. ಅವರು ಶೈತಾನ ಮತ್ತು ಅವನ ಸೈನ್ಯದ ಮೇಲೆ ವಿಜಯ ಸಾಧಿಸುತ್ತಾರೆ. ಸಂಪತ್ತು ವ್ಯಾಪಾರದಿಂದ ವರ್ಧಿಸುವ ಒಂದು ಸಂಗತಿಯಾಗಿದೆ. ಆದ್ದರಿಂದ ಅಲ್ಲಾಹನು ಧರ್ಮವನ್ನು ಅರಸುವುದು ಮತ್ತು ಧರ್ಮದ ಪ್ರಗತಿಯನ್ನು ಬಯಸುವುದನ್ನು ಕೂಡ ವ್ಯಾಪಾರವೆಂದು ಹೇಳಿರುವನು. ಧಾರ್ಮಿಕ ಜ್ಞಾನವನ್ನು ಗಳಿಸುವುದು ಕೂಡ ವ್ಯಾಪಾರವಾಗಿದೆ ಎಂದು ಅಲ್ಲಾಹನು ಹೇಳಿರುವನು. **ಹಲ್ ಅದುಲ್ಲುಕುಂ ತಿಜಾರತುನ್ ತುಂಜೀಕುಂ ಮಿನ್ ಅಧಾಬಿನ್ ಅಲೀಂ**. ಎಂದರೆ, ನಿಮ್ಮನ್ನು ವೇದನಾಜನಕ ಶಿಕ್ಷೆಯಿಂದ ಪಾರು ಮಾಡುವಂತಹ ವ್ಯಾಪಾರದ ಬಗ್ಗೆ ಹೇಳಿಕೊಡಲೇ. ನಾನು ಕೂಡ ಅಲ್ಲಾಹನ ಅದೇ ಪದಗಳನ್ನು ಉಪಯೋಗಿಸಿಕೊಂಡು ನಿಮ್ಮೊಡನೆ ಹೇಳುತ್ತೇನೆ. **ಹಲ್ ಅದುಲ್ಲುಕುಂ ತಿಜಾರತುನ್ ತುಂಜೀಕುಂ ಮಿನ್ ಅಧಾಬಿನ್ ಅಲೀಂ**. ಧರ್ಮದ ಪ್ರಗತಿ ಮತ್ತು ಆಸಕ್ತಿಯನ್ನು ಕಡಿಮೆಗೊಳಿಸುವುದರಿಂದ ಶೈತಾನನು ಅಂಥವರ ಮೇಲೆ ನಿಯಂತ್ರಣ ಪಡೆಯುವನು ಎಂಬ ಶಂಕೆ ನನಗಿದೆ. ಆದ್ದರಿಂದ ಎಂದಿಗೂ ಸುಸ್ತಾಗಬಾರದು. ಅರಿಯದ ಸಂಗತಿಯನ್ನು ಕೇಳಿ ತಿಳಿಯಬೇಕು. ಹೀಗಾದರೆ ಜ್ಞಾನದಲ್ಲಿ ಅಭಿವೃದ್ಧಿ ಉಂಟಾಗುವುದು. ಸವಾಲು ಕೇಳುವುದು ನಿಷಿದ್ಧವಲ್ಲ. ಮನವರಿಕೆಯಾಗದಿದ್ದರೆ ಕೇಳಬೇಕು. ಸವಾಲುಗಳು ಖಂಡಿತ ಏಳಬೇಕು. (ಮಲ್‌ಫೂಝಾತ್, ಸಂಪುಟ-3, ಪುಟ-193-194, 1984)

ಕರ್ಮಪರವಾದ ಪ್ರಗತಿಗಾಗಿಯೂ ಕೇಳಬೇಕು. ಇದು ಕರ್ಮಪರವಾದ ಅಭಿವೃದ್ಧಿಗಾಗಿ ಅವಶ್ಯ. ಆದ್ದರಿಂದ ಧರ್ಮಕ್ಕೆ ಲೌಕಿಕತೆಯ ಮೇಲೆ ಆದ್ಯತೆ ನೀಡಲು ವಿಶ್ವಾಸ ಆವಶ್ಯವಾದ ರೀತಿಯಲ್ಲೇ ಜ್ಞಾನಪರವಾದ ಮತ್ತು ಕರ್ಮಪರವಾದ ಅಭಿವೃದ್ಧಿ ಅವಶ್ಯ. ಅದಕ್ಕಾಗಿ ಪ್ರಯತ್ನ ಕೂಡ ಮಾಡಬೇಕಾಗಿದೆ.

ರಮಝಾನಿನ ಅನುಗ್ರಹವನ್ನು ಜಾರಿಯಲ್ಲಿರಿಸಲಿಕ್ಕಾಗಿ ಹಝ್ರತ್ ಮಸೀಹ್ ಮೌಊದ್(ಅ) ನಮಗೆ ಹೇಳಿಕೊಟ್ಟಿರುವ ವಿಧಾನವೇನೆಂದರೆ, ಪರಸ್ಪರ ಸಂಬಂಧದಲ್ಲಿ ಉನ್ನತವಾದ ಸ್ವಭಾವಗುಣಗಳೊಂದಿಗೆ ವರ್ತಿಸಲು ನಾವು ರಮಝಾನಿನಲ್ಲಿ ಪ್ರಯತ್ನಿಸಿದ್ದನ್ನು ಜಾರಿಯಲ್ಲಿರಿಸಬೇಕು. ಅನ್ಯೋನ್ಯ ಪ್ರೀತಿ ಮತ್ತು ಸಹೋದರತೆಯನ್ನು ವರ್ಧಿಸಬೇಕು ಮತ್ತು ಪರಸ್ಪರರ ಹಕ್ಕುಗಳನ್ನು ಈಡೇರಿಸಿಕೊಡಬೇಕು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ:

ಪರಸ್ಪರ ಸಹಾನುಭೂತಿ ತೋರಿಸುವ ತನಕ ನಮ್ಮ ಜಮಾಅತಿಗೆ ತಾಜಾತನ ಬರಲು ಸಾಧ್ಯವಲ್ಲ. ಬಲಶಾಲಿಯಾದವನು ದುರ್ಬಲನನ್ನು ಪ್ರೀತಿಸಲಿ. ಯಾರಲ್ಲಾದರೂ ತಪ್ಪು ಕಂಡರೆ ಅವನೊಡನೆ ಉತ್ತಮ ರೀತಿಯಲ್ಲಿ ವರ್ತಿಸಲಾಗುತ್ತಿಲ್ಲವೆಂದು ನಾನು ನೋಡುತ್ತೇನೆ. ಮಾತ್ರವಲ್ಲ ದ್ವೇಷ ಮತ್ತು ಅನಿಷ್ಟತೆಯಿಂದ ವರ್ತಿಸುತ್ತಾರೆ. ಸತ್ಯದಲ್ಲಿ ತಪ್ಪು ಮಾಡಿದವನಿಗಾಗಿ ದುಆ ಮಾಡಬೇಕು, ಅವರನ್ನು ಪ್ರೀತಿಸಬೇಕು, ಅವರನ್ನು ಸೌಮ್ಯವಾಗಿ ಮತ್ತು ಉತ್ತಮ ರೀತಿಯಲ್ಲಿ ಮನವರಿಕೆ ಮಾಡಿಸಬೇಕು. ಅದಲ್ಲದೇ ಹಾಗೆ ತೋರಿಸುವುದು, ಕ್ಷಮಿಸದಿರುವುದು ಮತ್ತು ಸಹಾನುಭೂತಿ ತೋರಿಸದೇ ಇರುವುದು ಸರಿಯಲ್ಲ. ಇದರಿಂದ ಕೆಡುತ್ತಾ ಕೆಟ್ಟದಾದ ಕೊನೆಯುಂಟಾಗುತ್ತದೆ. ಇದು ಅಲ್ಲಾಹನಿಗೆ ಸಮ್ಮತಿಯಾದ ಸಂಗತಿಯಲ್ಲ. ಕೆಲವರು ಕೆಲವರೊಡನೆ ಸಹಾನುಭೂತಿಯನ್ನು ತೋರಿಸಿ ಅವರ ತಪ್ಪುಗಳನ್ನು ಮರೆಮಾಚುವುದರಿಂದಲೇ ಜಮಾಅತ್ ಉಂಟಾಗುತ್ತದೆ. ಹಾಗಾದರೆ ಮಾತ್ರ ಒಂದಾಗಿ ಪರಸ್ಪರ ನೆರೆಕರೆಯವರಂತೆ ಆಗುವರು. ಸ್ವಂತ ಸಹೋದರಗಿಂತ ಅವರು ಮಿಗಿಲಾಗುವರು.

ಪರಸ್ಪರ ಸ್ನೇಹ ಸ್ವಂತ ಸಹೋದರನಿಗಿಂತ ಹೆಚ್ಚಿನ ರೀತಿಯದ್ದಾಗಿರಬೇಕು. ಅಂತಹ ಸಹಾನುಭೂತಿ ಇರಬೇಕು. ಒಬ್ಬ ವ್ಯಕ್ತಿಯ ಮಗನಿಂದ ಏನಾದರೂ ತಪ್ಪು ಉಂಟಾದರೆ, ಅದನ್ನು ಮರೆಮಾಚಲಾಗುತ್ತದೆ. ಅವನನ್ನು ಒಬ್ಬಂಟಿಯಾಗಿ ತಿಳಿಹೇಳಲಾಗುತ್ತದೆ. ಸಹೋದರ ತನ್ನ ಸಹೋದರನ ತಪ್ಪುಗಳನ್ನು ಮರೆಮಾಚುತ್ತಾನೆ. ಸಹೋದರನು ದೌರ್ಜನ್ಯ ಮಾಡಿರುವನು ಅಥವಾ ಪಾಪ ಮಾಡಿರುವನು ಎಂದು ಹೇಳಿ ಅದನ್ನು ಸುದ್ದಿ ಮಾಡಲು ಇಷ್ಟಪಡುವುದಿಲ್ಲ. ಹೀಗಿರುವಾಗ ಅಲ್ಲಾಹನು ಯಾರನ್ನು ಸಹೋದರನ್ನಾಗಿ ಮಾಡಿರುವನೋ ಅವರ ಹಕ್ಕುಗಳು ಇಷ್ಟು ಮಾತ್ರವೇ? ಲೌಕಿಕವಾದ ಸಹೋದರರು ಸಾಹೋದರ್ಯವನ್ನು ಬಿಡುವುದಿಲ್ಲವೆಂದಾದರೆ, ನಾವೇಕೆ ಅದನ್ನು ಬಿಡಬೇಕು. ಕೆಲವೊಮ್ಮೆ ಮನುಷ್ಯನು ಜಾನುವಾರು,

ಮಂಗ ಅಥವಾ ನಾಯಿಯಿಂದಲೂ ಪಾಠ ಕಲಿಯುತ್ತಾನೆ. ನಮ್ಮೊಳಗೆ ಭಿನ್ನತೆ ಇರುವುದು ಸರಿಯಲ್ಲ. ಸಹೋದರತೆಯ ಅನುಗ್ರಹದ ಬಗ್ಗೆ ಸಹಾಬಿಯರಿಗೂ ಅಲ್ಲಾಹನು ನೆನಪಿಸಿಕೊಟ್ಟಿದ್ದನು. ಹಝ್ರತ್ ಪೈಗಂಬರ್(ಸ)ರ ಮೂಲಕ ಅವರಿಗೆ ಲಭಿಸಿದ ಸಾಹೋದರ್ಯವು ಅವರು ಚಿನ್ನದ ಪರ್ವತವನ್ನು ಖರ್ಚು ಮಾಡಿದರೂ ಸಿಗುತ್ತಿರಲಿಲ್ಲ. ಅದೇ ರೀತಿಯಲ್ಲಿ ಅಲ್ಲಾಹನು ಈ ಜಮಾಅತನ್ನು ಸ್ಥಾಪಿಸಿರುವನು. ಇಲ್ಲೂ ಅದೇ ರೀತಿಯ ಸಾಹೋದರ್ಯವನ್ನು ಸ್ಥಾಪಿಸುವನು. **ಜಾಇಲುಲ್ಲದೀನತ್ತಬೂಕ ಫೌಕಲ್ಲದ್ದೀನ ಕಫರೂ ಇಲಾ ಯೌಮಿಲ್ ಖಿಯಾಮ** ಎಂದು ಅಲ್ಲಾಹನು ನನ್ನೊಡನೆ ವಾಗ್ದಾನ ಮಾಡಿರುವನು. ಸತ್ಯನಿಷೇಧಿಗಳ ಮೇಲೆ ನಿನ್ನನ್ನು ನಂಬಿದವರಿಗೆ ಖಿಯಾಮತ್ ದಿನದ ತನಕ ವಿಜಯ ನೀಡುವನು ಎಂದು. ನನಗೆ ಅಲ್ಲಾಹನ ಬಗ್ಗೆ ಬಹಳ ಪ್ರತೀಕ್ಷೆಯಿದೆ. ಅಂತಹ ಜಮಾಅತನ್ನು ಅವನು ಸ್ಥಾಪಿಸುವನು ಎಂದು ನನಗೆ ಖಂಡಿತವಾಗಿಯೂ ಗೊತ್ತಿದೆ. ಆದರೆ ಇದು ಪರೀಕ್ಷಣೆಯ ಮತ್ತು ದೌರ್ಬಲ್ಯದ ದಿನಗಳಾಗಿವೆ. ಪ್ರತಿಯೊಬ್ಬರಿಗೂ ಸುಧಾರಣೆ ಮಾಡಲು ಮತ್ತು ತಮ್ಮ ಸ್ಥಿತಿಗಳನ್ನು ಬದಲಾಯಿಸಲು ಅವಕಾಶ ಕೊಡಲಾಗಿದೆ. ನೋಡಿರಿ, ಪರಸ್ಪರ ದೂರುವುದು, ದುಃಖ ನೀಡುವುದು, ಕಠಿಣವಾಗಿ ಮಾತನಾಡುವುದು, ಬೇರೆಯವರ ಮನಸ್ಸಿಗೆ ನೋವು ಕೊಡುವುದು, ದುರ್ಬಲರನ್ನು ಹೀನರೆಂದು ಭಾವಿಸುವುದು ಮಹಾಪಾಪವಾಗಿದೆ.

(ಮಲ್‌ಫೂಝಾತ್, ಸಂಪುಟ-3, ಪುಟ-348-349, 1984)

ಮತ್ತೆ ಹೇಳಿದರು: ನಮ್ಮ ಜಮಾಅತಿನಲ್ಲಿ ನಮಗೆ ಬಲಶಾಲಿ ಪೈಲ್ವಾನನ ಆವಶ್ಯಕತೆಯಿಲ್ಲ. ಬದಲಾಗಿ ಸ್ವಭಾವಗಳನ್ನು ಬದಲಾವಣೆ ಮಾಡಲು ಪ್ರಯತ್ನಿಸುವ ಶಕ್ತಿಯನ್ನು ಹೊಂದಿರುವ ವ್ಯಕ್ತಿಯ ಆವಶ್ಯಕತೆಯಿದೆ. ಪರ್ವತವನ್ನು ಸ್ಥಾನಪಲ್ಲಟ ಮಾಡುವವನು ಬಲಶಾಲಿಯಲ್ಲ. ಯಾವನಿಗೆ ತನ್ನ ಸ್ವಭಾವವನ್ನು ಬದಲಾಯಿಸುವ ಸಾಮರ್ಥ್ಯವಿದೆಯೋ ಅವನೇ ಬಲಶಾಲಿ. ಆದ್ದರಿಂದ ಎಲ್ಲ ಶಕ್ತಿ ಮತ್ತು ಧೈರ್ಯವನ್ನು ಸ್ವಭಾವ ಪರಿವರ್ತನೆಗಾಗಿ ವಿನಿಯೋಗಿಸಿರಿ. ಏಕೆಂದರೆ, ಇದೇ ನೈಜವಾದ ಶಕ್ತಿ ಮತ್ತು ಧೈರ್ಯವಾಗಿದೆ.

(ಮಲ್‌ಫೂಝಾತ್, ಸಂಪುಟ-1, ಪುಟ-140, 1984)

ಅಹಂಕಾರ ಕೋಪದಿಂದ ಉಂಟಾಗುತ್ತದೆ. ಅದೇ ರೀತಿಯಲ್ಲಿ ಅಹಂಕಾರದಿಂದ ಕೋಪ ಬರುತ್ತದೆ. ಮನುಷ್ಯನು ತನ್ನನ್ನು ಇತರರಿಗಿಂತ ಶ್ರೇಷ್ಠನೆಂದು ಭಾವಿಸುವಾಗ ಕೋಪಬರುತ್ತದೆ. ನನ್ನ ಜಮಾಅತಿನವರು ಪರಸ್ಪರ ಇತರರನ್ನು ದೊಡ್ಡವರೆಂದೋ ಸಣ್ಣವರೆಂದೋ ತಿಳಿದುಕೊಳ್ಳುವುದನ್ನು ನಾನು ಬಯಸುವುದಿಲ್ಲ. ಯಾರು ಸಣ್ಣವನು ಯಾರು ದೊಡ್ಡವನು ಎಂದು ಅಲ್ಲಾಹನು ಬಲ್ಲನು. ಕೆಲವರು ದೊಡ್ಡವರನ್ನು ಭೇಟಿಯಾಗುವಾಗ ಬಹಳ ವಿನಯವಂತಿಕೆ ತೋರಿಸುತ್ತಾರೆ. ಆದರೆ ಬಡವರ ಮಾತುಗಳನ್ನು ವಿನಯದಿಂದ ಆಲಿಸುವವನು, ಅವರಿಗೆ ಸಂತೋಷ ಕೊಡುವವನು, ಅವರೊಂದಿಗೆ ಗೌರವದಿಂದ ವರ್ತಿಸುವವನು ಕೋಪದಿಂದ ಮಾತನಾಡಿ ಅವರಿಗೆ ದುಃಖ ನೀಡದವನೇ ದೊಡ್ಡವನು. ವಿಶೇಷವಾಗಿ ಹುದ್ದೇದಾರರು ಈ ಸಂಗತಿಯನ್ನು ನೆನಪಿನಲ್ಲಿಡಬೇಕು. ಅವರು ಪ್ರತಿಯೊಬ್ಬರೊಡನೆ ಬಹಳ ಆರಾಮವಾಗಿ ಮತ್ತು ಪ್ರೀತಿಯಿಂದ ಮಾತನಾಡಬೇಕು. ಅಲ್ಲಾಹನು ಹೇಳುತ್ತಾನೆ: **ವಲಾ ತನಾಬಜೂ ಬಿಲ್‌ಅಲ್‌ಖಾಬ್. ಬೀಸಲ್ ಇಸ್ಮುಲ್ ಘುಸೂಖು ಬಾದಲ್ ಈಮಾನ್. ವಮಲ್ಲಮ್ ಯತುಬ್ ಫಉಲಾಇಕ ಹುಮುಝ್ಝಾಲಿಮೂನ್**. ಎಂದರೆ, ನೀವು ಪರಸ್ಪರ ವಿಕೃತ ನಾಮದಿಂದ ಕರೆಯಬೇಡಿರಿ. ಸತ್ಯವಿಶ್ವಾಸ ಹೊಂದಿದ ಬಳಿಕ ಅಪಕೀರ್ತಿಗೆ ಈಡಾಗುವುದು ನಿಜವಾಗಿಯೂ ಕೆಟ್ಟದ್ದಾಗಿದೆ. ಯಾರು ಪಶ್ಚಾತ್ತಾಪಪಡುವುದಿಲ್ಲವೋ ಅವರೇ ಅಧರ್ಮಿಗಳು. ಒಬ್ಬ ವ್ಯಕ್ತಿ ಮತ್ತೊಬ್ಬನನ್ನು ಗೇಲಿ ಮಾಡುವುದಾದರೆ, ಅಂತಹದ್ದೇ ನ್ಯೂನತೆ ಗೇಲಿಮಾಡಿದವನಿಗೆ ಬರದೇ ಅವನು ಮರಣಹೊಂದಲಾರನು. ತನ್ನ ಸಹೋದರನನ್ನು ನೀಚನೆಂದು ಭಾವಿಸಬೇಡಿರಿ. ಒಂದೇ ಚಿಲುಮೆಯಿಂದ ನೀರು ಕುಡಿಯುತ್ತಿರುವಾಗ ಯಾರಿಗೆ ಹೆಚ್ಚಿನ ಪಾಲು ಲಭಿಸುವುದು ಎಂದು ಯಾರಿಗೆ ಗೊತ್ತು. ಯಾವುದೇ ಲೌಕಿಕವಾದ ತತ್ವದ ಮೇಲೆ ಯಾರೂ ಗೌರವಾನ್ವಿತನಾಗುವುದಿಲ್ಲ. ಮುತ್ತಖಿಯಾದವನೇ ಅಲ್ಲಾಹನ ದೃಷ್ಟಿಯಲ್ಲಿ ದೊಡ್ಡವನು. ಇನ್ನ ಅಕ್ರಮಕುಂ ಇಂದಲ್ಲಾಹಿ ಅತ್‌ಖಾಕುಮ್. ದೇವಭಯವಿರುವವನೇ ಅಲ್ಲಾಹನ ಸನ್ನಿಧಿಯಲ್ಲಿ ಆದರಣೀಯನು.

(ಮಲ್‌ಫೂಝಾತ್, ಸಂಪುಟ-1, ಪುಟ-36, 1984)

ಒಟ್ಟಿನಲ್ಲಿ ರಮಝಾನಿನಲ್ಲಿ ಉಂಟುಮಾಡಿದ ತಖ್ವ ಆವಶ್ಯಪಡುವುದೇನೆಂದರೆ, ಪರಸ್ಪರ ಸಂಬಂಧಗಳನ್ನು ಕೂಡ ಉತ್ತಮಗೊಳಿಸುತ್ತಾ ಹೋಗಬೇಕು ಮತ್ತು ಅನ್ಯೋನ್ಯ ಇರುವ ವ್ಯವಹಾರಗಳಲ್ಲೂ ಉತ್ತಮ ಸ್ವಭಾವ ಮತ್ತು ಶ್ರೇಷ್ಠತಮ ನಡತೆಯ ಮಾದರಿಯನ್ನು ತೋರಿಸಬೇಕು ಎಂದಾಗಿದೆ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನೀವು ಪರಸ್ಪರ ಐಕ್ಯದಿಂದ ಮತ್ತು ಒಗ್ಗಟ್ಟಿನಿಂದ ಇರಿ ಎಂದು ನಾನು ಅನೇಕ ಬಾರಿ ಹೇಳಿದ್ದೇನೆ. ನೀವು ಒಂದಾಗಿ ಇರಿ ಇಲ್ಲದಿದ್ದರೆ ನಿಮ್ಮ ಶಕ್ತಿಗುಂದುವುದು ಎಂದು ಅಲ್ಲಾಹನು ಮುಸ್ಲಿಮರನ್ನು ಉಪದೇಶಿಸಿರುವನು. ನಮಾಝಿನಲ್ಲಿ ಪರಸ್ಪರ ಸೇರಿಕೊಂಡು ನಿಲ್ಲಲು ಇರುವ ಆದೇಶವು ಪರಸ್ಪರ ಐಕ್ಯ ಉಂಟಾಗಲಿಕ್ಕಾಗಿದೆ. ಮಿಂಚಿನ ಹಾಗೆ ಒಬ್ಬರ ಒಳಿತು ಮತ್ತೊಬ್ಬನ ಕಡೆಗೆ ಪಸರಿಸುವುದು. ಭಿನ್ನತೆಯಿದ್ದೂ ಒಗ್ಗಟ್ಟು ಇಲ್ಲದಿದ್ದರೆ, ದೌರ್ಭಾಗ್ಯವಂತರಾಗುವಿರಿ.

ಈಗಿನ ಕೋವಿಡ್ ಸ್ಥಿತಿಯ ಕಾರಣದಿಂದ ಅಂತರವಿರಿಸಲಾಗುತ್ತದೆ. ಇದು ಒಂದು ಆವಶ್ಯಕತೆಯ ಕಾರಣದಿಂದಾಗಿದೆ. ಇದು ಸ್ಥಿರವಾದ ಸಂಗತಿಯೆಂದು ಸಣ್ಣ ಮಕ್ಕಳು ಮತ್ತು ಇತರ ಕೆಲವರು ತಪ್ಪಾಗಿ ತಿಳಿದುಕೊಳ್ಳದಿರಲಿ. ಮೆಲ್ಲಮೆಲ್ಲನೇ ಈ ಪರಿಸ್ಥಿತಿಗಳು ಸರಿಯಾಗುತ್ತಿವೆ. ಅಂತರ ಕೂಡ ಕಡಿಮೆಯಾಗುತ್ತಿದೆ. ಸಾಮಾನ್ಯ ಸ್ಥಿತಿ ಕೂಡ ಇನ್‌ಶಾ ಅಲ್ಲಾಹ್ ಉಂಟಾಗುವುದು. ವಾಸ್ತವದಲ್ಲಿ ಮಸೀದಿಯಲ್ಲಿ ಪಂಕ್ತಿಯಲ್ಲಿ ಇರುವಾಗ ಪರಸ್ಪರ ಹೊಂದಿಕೊಂಡು ನಿಲ್ಲಬೇಕು. ಇದನ್ನು ಸದಾ ನೆನಪಿನಲ್ಲಿಡಬೇಕು. ಕಡಿಮೆ ಪಕ್ಷ ಜಮಾಅತಾದ ನಮಾಝ್ ಆದರೂ ನಡೆಯಲಿ ಎಂಬ ಕಾರಣಕ್ಕಾಗಿ ಆವಶ್ಯಾನುಸಾರ ಒಂದು ತಾತ್ಕಾಲಿಕ ಏರ್ಪಾಡು ಮಾಡಲಾಗಿದೆ. ಅದಕ್ಕಾಗಿ ಅಂತರವನ್ನು ನೀಡಲಾಗಿದೆ. ಸ್ಥಿತಿಗತಿಗಳು ಬೇಗನೇ ಸಾಮಾನ್ಯವಾಗುತ್ತಿದೆ. ಇನ್‌ಶಾ ಅಲ್ಲಾಹ್.

ಹೇಗಿದ್ದರೂ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಪರಸ್ಪರ ಪ್ರೀತಿಸಿರಿ ಮತ್ತು ಪರಸ್ಪರರಿಗಾಗಿ ಅವರು ಇಲ್ಲದಿರುವಾಗಲೂ ರಹಸ್ಯವಾಗಿ ದುಆ ಮಾಡಿರಿ. ಇದು ಬಹಳ ಹಿರಿಯ ಸತ್ಕರ್ಮವಾಗಿದೆ ಎಂದು ಹಝ್ರತ್ ಪೈಗಂಬರ್(ಸ) ಹೇಳಿರುವರು. ಇದು ಬಹಳ ಮುಖ್ಯವಾದ ಸಂಗತಿಯಾಗಿದೆ. ಬೇರೆಯವರು ದುಆ ಮಾಡಲು ಹೇಳಿದರೂ ಇಲ್ಲದಿದ್ದರೂ ಪರಸ್ಪರ ದುಆ ಮಾಡಬೇಕು.

ಸಾಮಾನ್ಯವಾಗಿ ಜಮಾಅತಿನ ಸದಸ್ಯರು ಪರಸ್ಪರರಿಗಾಗಿ ಅಥವಾ ಜಮಾಅತಿನ ಎಲ್ಲರಿಗಾಗಿ ದುಆ ಮಾಡಿದರೆ, ಇದು ಬಹಳ ದೊಡ್ಡ ಸತ್ಕರ್ಮವಾಗುವುದು. ಒಬ್ಬ ವ್ಯಕ್ತಿ ಮತ್ತೊಬ್ಬನು ಮುಂದೆ ಇರದ ಸಮಯದಲ್ಲಿ ಮತ್ತೊಬ್ಬನಿಗಾಗಿ ರಹಸ್ಯವಾಗಿ ದುಆ ಮಾಡುವಾಗ ನಿನಗೂ ಹಾಗೆಯೇ ಆಗಲಿ ಎಂದು ದೇವದೂತರು ಅವನಿಗಾಗಿ ದುಆ ಮಾಡುವರು ಎಂದು ಹಝ್ರತ್ ಪೈಗಂಬರ್(ಸ) ಹೇಳಿರುವರು. ಮನುಷ್ಯನ ದುಆ ಸ್ವೀಕಾರವಾಗದಿದ್ದರೆ, ದೇವದೂತರ ದುಆ ಅಂತು ಸ್ವೀಕಾರವಾಗುತ್ತದೆ. ಪರಸ್ಪರ ಭಿನ್ನತೆ ಹೊಂದಬೇಡಿರಿ. ನಾನು ಎರಡೇ ವಿಷಯಗಳನ್ನು ತಂದಿದ್ದೇನೆ. ಒಂದು ಏಕದೇವಾರಾಧನೆ ಮಾಡು, ಮತ್ತೊಂದು ಪರಸ್ಪರ ಪ್ರೀತಿ ಮತ್ತು ಸಹಾನುಭೂತಿಯಿಂದ ವರ್ತಿಸಿರಿ.

ಇತರರಿಗೆ ಪವಾಡ ಎಂದು ತೋರುವಂತಹ ಮಾದರಿಯನ್ನು ತೋರಿಸಿರಿ. ಸಹಾಬಿಯರಲ್ಲಿ ಉಂಟಾಗಿದ್ದ ಪುರಾವೆ ಇದೇ ಆಗಿತ್ತು. **ಕುನ್ತುಂ ಅಅ್‌ದಾಉ ಫಅಲ್ಲಫ ಖುಲೂಬುಕುಂ**. ನೀವು ಪರಸ್ಪರ ಶತ್ರುಗಳಾಗಿದ್ದೀರಿ. ಅಲ್ಲಾಹನು ನಿಮ್ಮ ಹೃದಯಗಳನ್ನು ಪರಸ್ಪರ ಜೋಡಿಸಿದನು. ನೆನಪಿಡಿರಿ, ತಾನು ಇಷ್ಟಪಡುವುದನ್ನೇ ತನ್ನ ಸಹೋದರನಿಗೆ ಇಷ್ಟಪಡದ ತನಕ ಒಬ್ಬ ವ್ಯಕ್ತಿ ನನ್ನ ಜಮಾಅತಿಗೆ ಸೇರಿದವನಲ್ಲ. ಆತನು ವಿಪತ್ತು ಮತ್ತು ಆಪತ್ತಿನಲ್ಲಿದ್ದಾನೆ. ಆತನ ಕೊನೆ ಒಳ್ಳೆಯದಾಗುವುದಿಲ್ಲ.

(ಮಲ್‌ಫೂಝಾತ್, ಸಂಪುಟ-2, ಪುಟ-48)

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಅಲ್ಲಾಹನನ್ನು ಪ್ರೀತಿಸುವುದರ ಅರ್ಥವೇನು? ಅದೇನೆಂದರೆ, ತನ್ನ ತಂದೆತಾಯಂದಿರು, ತನ್ನ ಮಕ್ಕಳು, ತನ್ನ ಸ್ವಂತ ಆತ್ಮ ಹೀಗೆ ಪ್ರತಿಯೊಂದು ವಸ್ತುಗಳಿಗಿಂತ ಅಲ್ಲಾಹನಿಗೆ ಆದ್ಯತೆ ಮತ್ತು ಪ್ರಾಮುಖ್ಯತೆ ನೀಡುವುದು. ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನು ನುಡಿಯುತ್ತಾನೆ **ಫಝ್‌ಕುರುಲ್ಲಾಹ ಕಝಿಕ್ರಿಕುಮ್ ಆಬಾಅಕುಮ್ ಔ ಅಶದ್ದ ಝಿಕ್ರನ್** (ಅಲ್‌ಬಖರ: 201) ಅಂದರೆ: ನೀವು ನಿಮ್ಮ ಪಿತರನ್ನು ಸ್ಮರಿಸುವ ರೀತಿಯಲ್ಲೇ ಅಲ್ಲಾಹನನ್ನು ಸ್ಮರಿಸಿರಿ ಅಥವಾ ಅದಕ್ಕಿಂತ ಮಿಗಿಲಾಗಿ ಹೆಚ್ಚಿನ ಪ್ರೀತಿಯಿಂದ ಸ್ಮರಿಸಿರಿ ಎಂದು ಪವಿತ್ರ ಖುರ್‌ಆನ್ ಹೇಳುತ್ತದೆ. ಅಲ್ಲಾಹನ ಪ್ರೇಮದಿಂದ ಪರಿಪೂರ್ಣವಾದ ಪಾಲು ಪಡೆಯುವುದು ಯಥಾರ್ಥವಾದ ಏಕದೇವ ವಿಶ್ವಾಸವನ್ನು ಸ್ಥಾಪಿಸಲು ಆವಶ್ಯಕ. ಕರ್ಮಪರವಾಗಿ ಪರಿಪೂರ್ಣವಾದ ಪಾಲು ಪಡೆಯದೇ ಆ ಪ್ರೀತಿ ಸಾಬೀತಾಗುವುದಿಲ್ಲ. ಆದ್ದರಿಂದ ಅಲ್ಲಾಹನ ಮಾರ್ಗದಲ್ಲಿ ತನ್ನ ಜೀವಿತವನ್ನು ಅರ್ಪಿಸಬೇಕು. ಇದೇ ಇಸ್ಲಾಂ ಆಗಿದೆ. ಇದೇ ಉದ್ದೇಶಸಿದ್ಧಿಗಾಗಿ ನನ್ನನ್ನು ಕಳುಹಿಸಲಾಗಿದೆ. ಆದ್ದರಿಂದ ಈ ಉದ್ದೇಶಕ್ಕಾಗಿ ಅಲ್ಲಾಹನು ಜಾರಿಗೊಳಿಸಿದ ಈ ಚಿಲುಮೆಯ ಸಮೀಪಕ್ಕೆ ಯಾರು ಬರುವುದಿಲ್ಲವೋ ಅವನು ನಿರ್ಭಾಗ್ಯನಾಗಿ ಇರುತ್ತಾನೆ. ಪುತ್ರನನ್ನು ತ್ಯಾಗಮಾಡಲು

ತಯಾರಾದರು ಎಂಬುದೇ ಹಝ್ರತ್ ಇಬ್ರಾಹೀಂ ಅಲೈಹಿಸ್ಸಲಾಮರ ಮಹತ್ತಾದ ನಿಷ್ಠೆ. ಅನೇಕ ಇಬ್ರಾಹೀಮರನ್ನು ಸೃಷ್ಟಿಸುವುದು ಇಸ್ಲಾಮಿನ ಉದ್ದೇಶವಾಗಿದೆ.

ಹಝ್ರತ್ ಇಬ್ರಾಹೀಮ್(ಅ) ನಿಷ್ಠಾವಂತರಾಗಿದ್ದರು ಎಂದು ಅವರ ಸದ್ಗುಣವಾಗಿ ಅಲ್ಲಾಹನು ಮತ್ತು ಪವಿತ್ರ ಖುರ್‌ಆನ್ ಹೇಳಿರುವನು. "ಆದ್ದರಿಂದ ನೀವುಲ್ಲಿ ಪ್ರತಿಂಯೊಬ್ಬರೂ ಇಬ್ರಾಹೀವ್ ಆಗಲು ಪ್ರಯತ್ನಿಸಬೇಕು. ನಾನು ನಿಮಗೆ ಸತ್ಯವಾಗಿ ಹೇಳುತ್ತೇನೆ, ನೀವು ಮಹಾತ್ಮರ ಅನುಯಾಯಿ ಆಗಬೇಡಿ, ಬದಲು ಮಹಾತ್ಮರಾಗಿರಿ ಮತ್ತು ಸಂತರ ಅನುಯಾಯಿ ಆಗಬೇಡಿ, ಬದಲಿಗೆ ನೀವು ಸಂತರಾಗಿರಿ, ನೀವು ಈ ಮಾರ್ಗಗಳಿಂದ ಬನ್ನಿರಿ." ಸಂತರಾಗಿರಿ ಎಂದರೆ ಅನ್ಯ ಸಂತರ ಹಾಗೆ ಅಹಂಕಾರದಲ್ಲಿ ಮುಳುಗುವುದಲ್ಲ ಬದಲಿಗೆ ನಿಷ್ಠೆಯನ್ನು ಬೆಳೆಸಿಕೊಳ್ಳಿ. ಅದರ ಅರ್ಥ ಇಷ್ಟೇ. ಪ್ರಸ್ತುತ ಕಾಲದ ಸಂತರಂತೆ ಲೌಕಿಕತೆಯ ಅಭಿವ್ಯಕ್ತಿ ಎಂದಲ್ಲ. ಅವರು ಹೇಳಿದರು: "ಖಂಡಿತವಾಗಿಯು, ಅವು ಬಹಳ ಕಷ್ಟಕರವಾದ ಮಾರ್ಗಗಳಾಗಿವೆ" ನೀವು ಆ ಮಾರ್ಗಗಳ ಮೂಲಕ ಬರಬೇಕು "ಆದರೆ ಅವುಗಳನ್ನು ಪ್ರವೇಶಿಸುವುದರಿಂದ ನಿಮಗೆ ಸೌಕರ್ಯ ಮತ್ತು ಸುಲಭವಾಗುತ್ತದೆ, ಆದರೆ ಈ ಬಾಗಿಲನ್ನು ತುಂಬಾ ಲಘುವಾಗಿ ಹಾದುಹೋಗುವುದು ಅವಶ್ಯಕ." ತಲೆಯ ಮೇಲೆ ದೊಡ್ಡ ಬಾಲೆ ಇದ್ದರೆ ಕಷ್ಟ. ನೀವು ತೇರ್ಗಡೆಯಾಗಬೇಕಾದರೆ, ಲೌಕಿಕತೆಯ ಈ ಬಾಲೆಗಳನ್ನು ತ್ಯಜಿಸಿರಿ ಮತ್ತು ಲೌಕಿಕತೆಯ ಮೇಲೆ ಧರ್ಮಕ್ಕೆ ಆದ್ಯತೆ ನೀಡಿರಿ. ನಮ್ಮ ಜಮಾಅತ್ತಿನವರು ಅಲ್ಲಾಹನನ್ನು ಮೆಚ್ಚಿಸಲು ಬಯಸಿದರೆ, ಅವರು ಅದನ್ನು ಎಸೆಯಬೇಕು. ನಿಮಲ್ಲಿ ನಿಷ್ಠೆ ಮತ್ತು ಪ್ರಾಮಾಣಿಕತೆ ಇಲ್ಲದಿದ್ದರೆ, ನೀವು ಸುಳ್ಳುಗಾರರಾಗಿರುತ್ತೀರಿ ಮತ್ತು ಸರ್ವಶಕ್ತನಾದ ಅಲ್ಲಾಹನ ದೃಷ್ಟಿಯಲ್ಲಿ ನೀವು ಸಮರ್ಥಿಸುವುದಿಲ್ಲ ಎಂದು ನೀವು ನೆನಪಿನಲ್ಲಿಡಬೇಕು. ಹೀಗಿರುವಾಗ ನಿಷ್ಠೆಯನ್ನು ತೊರೆದು ದ್ರೋಹದ ದಾರಿ ಹಿಡಿದವನು ಶತ್ರುವಿನ ಮುಂಚೆಯೆ ನಾಶವಾಗುತ್ತಾನೆ. ಅಲ್ಲಾಹನು ಮೋಸಕ್ಕೆ ಒಳಗಾಗುವವನಲ್ಲ. ಅವನನ್ನು ಯಾರಿಂದಲೂ ಮೋಸಗೊಳಿಸಲು ಸಾಧ್ಯವೂ ಅಲ್ಲ.

(ಮಲ್‌ಫೂಝಾತ್, ಸಂಘುಟ–3, ಪುಟ–188–190, 1984 ಆವೃತ್ತಿ)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರು ತಾಳ್ಮೆ ಮತ್ತು ದುಆವಿನಿಂದ ನಿಜವಾದ ಪ್ರಾಮಾಣಿಕತೆ ಬರುತ್ತದೆ ಎಂದು ವಿವರಿಸಿದರು.

ಆದ್ದರಿಂದ ನಿಜವಾದ ನಿಷ್ಠೆ ಮತ್ತು ಸತ್ಯಸಂಧತೆಯನ್ನು ನೀವು ನಿಮ್ಮೊಳಗೆ ಉಂಟುಮಾಡುವುದು ಅವಶ್ಯ. ಅದಕ್ಕಾಗಿ ಸ್ಥಿರಚಿತ್ತರಾಗಿ ಅಲ್ಲಾಹನ ಸನ್ನಿಧಿಯಲ್ಲಿ ಬಾಗಿರಿ ಮತ್ತು ಬರುವ ಪ್ರತಿಯೊಂದು ದಿನವನ್ನು ನಿಷ್ಠೆಯಿಂದ ಅಲ್ಲಾಹನೊಂದಿಗೆ ಸಂಬಂಧದಲ್ಲಿ ವರ್ಧಿಸುತ್ತಾ ಹೋಗಲು ಪ್ರಯತ್ನಿಸುವುದನ್ನಾಗಿ ಮಾಡಿರಿ.

ಇದು ನಮ್ಮ ಕ್ರಮವಾಗಿದೆ: ನಮಾಝಿನ ನಿರ್ವಹಣೆಯ ಕಡೆಗೆ ನಿರಂತರ ಗಮನ ಕೊಡುವುದು, ಅವುಗಳನ್ನು ಸುಂದರವಾಗಿ ನಿರ್ವಹಿಸುವ ಕಡೆ ಗಮನ ಹರಿಸುವುದು, ಪವಿತ್ರ ಖುರ್‌ಆನ್‌ನ ಪಠಣವನ್ನು ಅರ್ಥಮಾಡಿಕೊಳ್ಳುವುದು ಮತ್ತು ಅದರ ಆಜ್ಞೆಗಳನ್ನು ಪಾಲಿಸುವುದು, ಪರಸ್ಪರ ಗೌರವಿಸುವುದು ಮತ್ತು ತೌಹೀದ್ ಅನ್ನು ಸ್ಥಾಪಿಸುವುದು. ವಾಸ್ತವವಾಗಿ ನಿಜವಾದ ವಿಶ್ವಾಸಿಯ ಪ್ರತಿಯೊಂದು ಕ್ರಿಯೆ ಮತ್ತು ಕಾರ್ಯವು ತೌಹೀದ್ ಸ್ಥಾಪನೆಗಾಗಿರಬೇಕು ಮತ್ತು ಇದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಆಗಮನದ ಉದ್ದೇಶವಾಗಿತ್ತು ಮತ್ತು ಅವರು ಇದನ್ನು ಪದೇ ಪದೇ ಹೇಳಿದ್ದಾರೆ. ಆದ್ದರಿಂದ ಇದನ್ನು ಅರ್ಥಮಾಡಿಕೊಳ್ಳುವುದು ಅವಶ್ಯಕವಾಗಿದೆ, ಇಲ್ಲದಿದ್ದರೆ ಕೇವಲ ಬೈಅತ್ ಮಾಡಿಕೊಳ್ಳುವುದರಿಂದ ಯಾವುದೇ ಪ್ರಯೋಜನವಿಲ್ಲ. ಇದನ್ನು ಬಹಳ ಸ್ಪಷ್ಟವಾಗಿ ಹಲವು ಕಡೆ ಹೇಳಿದ್ದಾರೆ. ಉದಾಹರಣೆಗೆ, ಅವರು ಒಂದು ಸ್ಥಳದಲ್ಲಿ ಹೇಳಿದರು, "ಬೈಅತ್ ಹಾಗೂ ಈಮಾನ್‌ನ ದಾವೆ ಮಾಡುವವನು ತನ್ನಲ್ಲಿ ಪರಿಶೀಲಿಸಿಕೊಳ್ಳಬೇಕಾದ ವಿಷಯವೇನೆಂದರೆ ತಾನು ಕೇವಲ ಸಿಪ್ಪೆಯಾಗಿದ್ದೇನೋ ಅಥವಾ ತಿರುಳು ಆಗಿದ್ದೇನೊ? ಎಂದು. ತಿರುಳು ಹುಟ್ಟದ ಹೊರತು, ಈಮಾನ್, ಪ್ರೀತಿ, ವಿಧೇಯತೆ, ನಿಷ್ಠೆ, ನಂಬಿಕೆ, ಇಸ್ಲಾಂ ಧರ್ಮದ ಹಕ್ಕುದಾರ ನಿಜವಾದ ಹಕ್ಕುದಾರನಲ್ಲ. ಇದು ನಿಜವಾದ ವಿಷಯ ಎಂದು ನೆನಪಿಡಿ." ಪ್ರೀತಿ ಅಥವಾ ಈಮಾನ್‌ನ ಅಥವಾ ವಿಧೇಯತೆ ಅಥವಾ ನಿಷ್ಠೆಯ ಈ ಎಲ್ಲಾ ದಾವೆಗಳು ನಿಜವಾಗುವುದಿಲ್ಲ. ತಿರುಳನ್ನು ಹೊರತುಪಡಿಸಿ ಸರ್ವಶಕ್ತನಾದ ಅಲ್ಲಾಹನಿಗೆ ಸಿಪ್ಪೆಯು ನಿಷ್ಪ್ರಯೋಜಕವಾಗಿದೆ ಎಂಬುದು ಸತ್ಯ ಎಂಬುದನ್ನು ನೆನಪಿಡಿ. ಚೆನ್ನಾಗಿ ನೆನಪಿಡಿರಿ, ಮರಣ ಬರುವುದು ಯಾವಾಗ ಎಂದು ಗೊತ್ತಿಲ್ಲ. ಆದರೆ ಮೃತ್ಯು ಖಂಡಿತವಿದೆ ಎಂಬುದು ನಿಶ್ಚಿತವಾದ ಸಂಗತಿಯಾಗಿದೆ. ಆದ್ದರಿಂದ ಬಾಯಿಮಾತಿನಿಂದಲೇ ತೃಪ್ತರೂ ಸಂತುಷ್ಟರೂ ಆಗಬೇಡಿರಿ. ಅದು ಖಂಡಿತವಾಗಿಯೂ ಪ್ರಯೋಜನಕಾರಿಯಲ್ಲ. ಎಲ್ಲಿಯ ವರೆಗೂ ಮನುಷ್ಯನು ತನ್ನ ಮೇಲೆ ಅನೇಕ ಮೃತ್ಯುಗಳನ್ನು ಬರಿಸುವುದಿಲ್ಲವೋ ಹಾಗೂ ಅನೇಕ ಬದಲಾವಣೆಗಳು ಮತ್ತು ಪರಿವರ್ತನೆಗಳ ಮೂಲಕ ಸಾಗಿಕೊಂಡು ಹೊರಗೆ ಬರುವುದಿಲ್ಲವೋ ಅಲ್ಲಿಯ ವರೆಗೂ ಅವನು ಮನುಷ್ಯತ್ವದ ನೈಜ ಉದ್ದೇಶವನ್ನು ಗಳಿಸಲು ಸಾಧ್ಯವಲ್ಲ.

(ಮಲ್‌ಫೂಝಾತ್, ಸಂಪುಟ–2, ಪುಟ–167, ಆವೃತ್ತಿ 1984)

ಅವರು ಹೇಳಿದರು, "ಲೋಕದ ಸ್ಥಿತಿಯನ್ನು ನೋಡಿ, ನಮ್ಮ ಪ್ರವಾದಿ(ಸ)ರವರು ನನ್ನ ಜೀವನ ಮತ್ತು ಮರಣವು ಅಲ್ಲಾಹನಿಗೆ ಮಾತ್ರ ಎಂದು ತಮ್ಮ ಕಾರ್ಯಗಳಿಂದ ತೋರಿಸಿದರು. ಅಥವಾ ಈಗ ಜಗತ್ತಿನಲ್ಲಿ ಮುಸ್ಲಿಮರಿದ್ದಾರೆ. ಯಾರನ್ನಾದರೂ ಕೇಳಬೇಕು, "ನೀವು ಮುಸಲ್ಮಾನರೇ?" ಎಂದು ಅದಕ್ಕೆ ಅವರು ಅಲ್ಹಮ್ದುಲಿಲ್ಲಾಹ್ ಎಂದು ಹೇಳುತ್ತಾರೆ. ಯಾರ ಕಲಿಮ ಪಠಿಸುತ್ತಿದ್ದನು ಅವರ ಜೀವನ ತತ್ವವು ಅಲ್ಲಾಹನಿಗಾಗಿ ಇತ್ತು ಆದರೆ ಇವನು ಜಗತ್ತಿಗಾಗಿ ಬದುಕುತ್ತಾನೆ ಮತ್ತು ಜಗತ್ತಿಗಾಗಿ ಸಾಯುತ್ತಾನೆ." ಸಾಮಾನ್ಯ ಮುಸ್ಲಿಮ್ "ಸಾಯುವ ಸ್ಥಿತಿ ಪ್ರಾರಂಭವಾಗುವವರೆಗೆ." ಮರಣ ಬಂದಾಗ ಅಲ್ಲಾಹನನ್ನು ಸ್ಮರಿಸುತ್ತಾನೆ. ಪ್ರಪಂಚವೇ ಗಳಿಸುವುದು ಆತನ ಗುರಿಯಾಗಿರುತ್ತದೆ, ಮತ್ತೆ ಹೇಗೆ ತಾನು ಪ್ರವಾದಿ ಮುಹಮ್ಮದ್(ಸ)ರವರ ಅನುಯಾಯಿ ಎಂದು ಹೇಳಬಹುದು. ಇದು ಚಿಂತನೀಯವಾದೊಂದು ವಿಷಯವಾಗಿದೆ. ಇದನ್ನು ಮಾಮೂಲಿಯೆಂದು ಭಾವಿಸಬೇಡಿರಿ. ಮುಸ್ಲಿಮನಾಗುವುದು ಸುಲಭವಲ್ಲ. ಮಹೋನ್ನತರಾದ ಪ್ರವಾದಿ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮುದಾಯದವರು ಎಂದು ಹೇಳಿಸಿಕೊಂಡು ಸತ್ಯನಿಷೇಧಿಗಳಂತಹ ಜೀವನವನ್ನು ಸಾಗಿಸುವುದು ಎಷ್ಟು ನಾಚಿಕೆಯ ಮಾತಾಗಿದೆ. ಇದು ಕೇವಲ ಸಿಪ್ಪೆಯಾಗಿರುವುದು. ಒಂದು ಉದಾಹರಣೆ ನೀಡುತ್ತ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿದರು: ಒಬ್ಬ ಯಹೂದಿಯನ್ನು ಓರ್ವ ಮುಸ್ಲಿಮನು ನೀನು ಮುಸಲ್ಮಾನನಾಗು ಎಂದು ಹೇಳಿದನು ಅದಕ್ಕೆ ಆ ಯಹೂದಿ ಹೇಳಿದನು, "ನೀನು ಕೇವಲ ಹೆಸರಿನ ಮೇಲೆ ಸಂತೋಷಪಡಬೇಡ." ನಾನು ಮುಸ್ಲಿಮನು ಎಂದು ಸಂತೋಷಗೊಳ್ಳಬೇಡ. ಯಹೂದಿ ಹೇಳಿದನು "ನಾನು ನನ್ನ ಮಗನಿಗೆ ಖಾಲಿದ್ (ಶಾಶ್ವತವಾಗಿರುವವನು) ಎಂದು ಹೆಸರಿಸಿದ್ದೆ ಮತ್ತು ಇಂದು ಸಂಜೆಯ ಮೊದಲು ಅವನನ್ನು ಸಮಾಧಿ ಮಾಡಿದ್ದೇನೆ." ಅವನು ಶಾಶ್ವತವಾಗಿ ಬದುಕಲಿಲ್ಲ. ಅವನಿಗೆ ದೀರ್ಘಾಯುಷ್ಯ ಇರಲಿಲ್ಲ.

"ಆದ್ದರಿಂದ ಸತ್ಯವನ್ನು ಪಡೆದುಕೊಳ್ಳಿ. ಕೇವಲ ಹೆಸರುಗಳಿಂದ ತೃಪ್ತರಾಗಬೇಡಿ. ಮಹೋನ್ನತರಾದ ಪ್ರವಾದಿ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮುದಾಯದವರು ಎಂದು ಹೇಳಿಸಿಕೊಂಡು ಸತ್ಯನಿಷೇಧಿಗಳಂತಹ ಜೀವನವನ್ನು ಸಾಗಿಸುವುದು ಎಷ್ಟು ನಾಚಿಕೆಯ ಮಾತಾಗಿದೆ. ಅಲ್ಲಾಹನ ಸಂದೇಶವಾಹಕರಾದ ಮುಹಮ್ಮದ್(ಸ) ಅವರ ಉದಾಹರಣೆಯನ್ನು ನಿಮ್ಮ ಜೀವನದಲ್ಲಿ ತೋರಿಸಿರಿ. ಅದೇ ಸ್ಥಿತಿಯನ್ನು ಸೃಷ್ಟಿಸಿರಿ ಮತ್ತು ಆ ಸ್ಥಿತಿ ಸೃಷ್ಟಿಯಾಗದಿದ್ದರೆ ನೀವು ತಾಗೂತ್‌ನ ಅನುಯಾಯಿಗಳಾಗುವಿರಿ." ನೀವು ಸೈತಾನನ ಅನುಯಾಯಿಗಳಾಗುತ್ತೀರಿ ಎಂಬ ಒಂದು ದೊಡ್ಡ ಎಚ್ಚರಿಕೆ ಇದರಲ್ಲಿದೆ. ನೀವು ಅದರ ಅನುಯಾಯಿಗಳಾಗುತ್ತೀರಿ. "ಒಟ್ಟಿನಲ್ಲಿ, ಅಲ್ಲಾಹನಿಗೆ ಪ್ರಿಯನಾಗುವುದು ಮನುಷ್ಯನ ಜೀವಿತದ ಉದ್ದೇಶಲಕ್ಷ್ಯವಾಗಿರಬೇಕು ಎಂಬ ಸಂಗತಿ ಚೆನ್ನಾಗಿ ಮನವರಿಕೆಯಾಗುತ್ತದೆ. ಏಕೆಂದರೆ ಅಲ್ಲಾಹನಿಗೆ ಪ್ರಿಯನಾಗುವ ತನಕ ಮತ್ತು ಅಲ್ಲಾಹನ ಪ್ರೀತಿ ಲಭಿಸುವ ತನಕ ಯಶಸ್ಸಿನ ಜೀವಿತವನ್ನು ಸಾಗಿಸಲು ಸಾಧ್ಯವಲ್ಲ. ಹಝ್ರತ್ ಪೈಗಂಬರ್(ಸ) ತನ್ನ ನಡವಳಿಕೆ ಕ್ರಮ ಮತ್ತು ಚರ್ಯೆಯ ಮೂಲಕ ಕಲಿಸಿದ ಇಸ್ಲಾಮನ್ನು ತಮ್ಮೊಳಗೆ ಉಂಟುಮಾಡುವ ತನಕ ಈ ಸಂಗತಿ ಉಂಟಾಗಲು ಸಾಧ್ಯವಲ್ಲ."

(ಮಾಲ್‌ಫೂಝಾತ್‌ತ್, ಸಂಪುಟ–2, ಪುಟ–187–188, 1984)

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನೆನಪಿಡಿರಿ, ಅಲ್ಲಾಹನು ಸ್ಥಾಪಿಸಲು ಬಯಸುವ ಜಮಾಅತ್ ಸತ್ಕರ್ಮಗಳಿಲ್ಲದೇ ಜೀವಂತವಾಗಿ ಇರದು. ಇದು ಎಷ್ಟು ಮಹೋನ್ನತವಾದ ಜಮಾಅತ್ ಆಗಿದೆ ಎಂದರೆ, ಇದರ ತಯಾರಿಕೆಯು ಹಝ್ರತ್ ಆದಂ(ಅ)ರ ಕಾಲದಿಂದಲೇ ಆರಂಭವಾಗಿದೆ. ಇದರ ಬಗ್ಗೆ ಮಾಹಿತಿ ನೀಡದ ಯಾವನೇ ಪ್ರವಾದಿ ಲೋಕದಲ್ಲಿ ಆಗಮಿಸಿಲ್ಲ. ಆದ್ದರಿಂದ ಇದಕ್ಕೆ ಬೆಲೆಕೊಡಿರಿ. ಅದಕ್ಕೆ ಬೆಲೆ ನೀಡುವುದು ಏನೆಂದರೆ, ಸತ್ಯವಂತ ಗುಂಪು ನೀವೇ ಆಗಿರುವಿರಿ ಎಂದು ಸಾಬೀತುಗೊಳಿಸುವುದಾಗಿದೆ. (ಮಲ್‌ಫೂಝಾತ್, ಸಂಪುಟ–3, ಪುಟ–370–371, 1984 ಆವೃತ್ತಿ)

ರಮಝಾನಿನಲ್ಲಿ ನಾವು ಗಳಿಸಿದ ತರಬೇತಿಯನ್ನು ವರ್ಷದ ಇತರ ಭಾಗಗಳಲ್ಲೂ ತಿಂಗಳುಗಳಲ್ಲೂ ಮುಂದುವರೆಸಬೇಕಾಗಿದೆ. ಹಝ್ರತ್ ಮಸೀಹ್ ಮೌಊದ್(ಅ)ರ ಮಾತುಗಳಲ್ಲಿ ನಾನು ನಿಮ್ಮ ಮುಂದೆ

ಪ್ರಸ್ತುತಪಡಿಸಿದ ಮಾರ್ಗಸೂಚಿಯ ಪ್ರಕಾರ ನಡೆಯಲು ಪರಿಪೂರ್ಣವಾಗಿ ಪ್ರಯತ್ನಿಸಬೇಕಾಗಿದೆ. ತಮ್ಮ ನಮಾಝುನ್ನು ಸಮಾಧಾನದಿಂದ ಸುಂದರವಾಗಿ ಅನುಷ್ಠಿಸಬೇಕಾಗುವುದು. ಪವಿತ್ರ ಖುರ್‌ಆನಿನ ಪ್ರಕಾರ ನಡೆಯಬೇಕಾಗುವುದು. ಪರಸ್ಪರರ ಹಕ್ಕುಗಳನ್ನು ಈಡೇರಿಸಬೇಕಾಗುವುದು. ಏಕದೇವ ವಿಶ್ವಾಸವನ್ನು ಸ್ಥಾಪಿಸಲು ಎಲ್ಲ ರೀತಿಯ ತ್ಯಾಗಗಳನ್ನು ಮಾಡಬೇಕಾಗುವುದು. ಆಗಲೇ ನಾವು ಬೈಅತ್ತಿನ ನಿಬಂಧನೆಗಳನ್ನು ಪಾಲಿಸಬೇಕಾದ ರೀತಿಯಲ್ಲಿ ಪಾಲಿಸುರಾಗುವೆವು. ಅಲ್ಲಾಹನು ನಮಗೆ ಅದರ ಸೌಭಾಗ್ಯ ನೀಡಲಿ.

ದುಆಗಳನ್ನು ಕೂಡ ಮಾಡಿರಿ. ಲೋಕಕ್ಕಾಗಿಯೂ ದುಆಗಳನ್ನು ಮಾಡಿರಿ. ಲೋಕದ ಸ್ಥಿತಿಗತಿಗಳು ಉತ್ತಮಗೊಳ್ಳಲಿ. ಪರಸ್ಪರ ಶತ್ರುತ್ವ ಹೆಚ್ಚಾಗುತ್ತಿದೆ. ದೇಶಗಳು ಪರಸ್ಪರ ದಾಳಿ ನಡೆಸುತ್ತಿವೆ. ಈ ರಾಷ್ಟ್ರಗಳ ನೇತಾರರಿಗೆ ಬುದ್ಧಿ ಬರಲಿ ಮತ್ತು ಈ ಕುಕೃತ್ಯಗಳಿಂದ ದೂರಸರಿಯಲಿ. ಲೋಕವು ನಾಶದ ಕಡೆಗೆ ಅತಿವೇಗವಾಗಿ ಹೋಗುತ್ತಿದೆ. ಈ ಜನರು ತಮ್ಮ ಸೃಷ್ಟಿಕರ್ತನಾದ ದೇವನನ್ನು ಗುರುತಿಸಲಿ. ಆಗಲೇ ಈ ವಿಪತ್ತಿನಿಂದ ರಕ್ಷಣೆ ಪಡೆಯಬಹುದಾಗಿದೆ.

ಅದೇ ರೀತಿಯಲ್ಲಿ ಸೆರೆಯಲ್ಲಿರುವ ಅಹ್ಮದಿಯರಿಗಾಗಿಯೂ ದುಆ ಮಾಡಿರಿ. ಪಾಕಿಸ್ತಾನದಲ್ಲಿ ಅಹ್ಮದಿಯರು ಕಠಿಣ ವಿರೋಧದ ಅವಸ್ಥೆಯನ್ನು ಅನುಭವಿಸುತ್ತಿದ್ದಾರೆ. ಅವರಿಗಾಗಿಯೂ ದುಆ ಮಾಡಿರಿ. ಲೋಕದ ಇತರ ಕೆಲವು ದೇಶಗಳಲ್ಲೂ ಅಹ್ಮದಿಯರು ವಿರೋಧದ ಸ್ಥಿತಿಯನ್ನು ಅನುಭವಿಸುತ್ತಿದ್ದಾರೆ. ಅವರಿಗಾಗಿಯೂ ದುಆ ಮಾಡಿರಿ. ಅಫ್ಘಾನಿಸ್ಥಾನದಲ್ಲೂ ಕೆಲವು ಅಹ್ಮದಿಯರು ಸೆರೆಯಲ್ಲಿರುವರು. ಅವರಿಗಾಗಿಯೂ ದುಆ ಮಾಡಿರಿ. ಅಲ್‌ಜೀರಿಯದ ಅಹ್ಮದೀ ಸೆರೆಯಾಳುಗಳಿಗಾಗಿಯೂ ದುಆ ಮಾಡಿರಿ. ಪಾಕಿಸ್ತಾನದಲ್ಲಿ ಕಾನೂನಿನ ಕಾರಣದಿಂದ ಅಹ್ಮದಿಯರ ಮೇಲೆ ದೌರ್ಜನ್ಯಗಳು ನಡೆಯುತ್ತಿವೆ. ಅದಲ್ಲದೇ ಮೌಲವಿಯರ ಮತ್ತು ಜನಸಾಮಾನ್ಯರ ಭಯದಿಂದ ನ್ಯಾಯಾಧೀಶರಿಗೆ ಸರಿಯಾದ ತೀರ್ಪು ನೀಡಲು ಆಗುತ್ತಿಲ್ಲ. ಅಲ್ಲಾಹನು ಸ್ಥಿತಿಗತಿಗಳನ್ನು ಸುಧಾರಿಸಲಿ. ಪಾಕಿಸ್ತಾನದಲ್ಲೂ ಅಹ್ಮದಿಯರಿಗೆ ಸ್ವತಂತ್ರವಾಗಿ ಜೀವಿಸಲು ಸಾಧ್ಯವಾಗಲಿ.

ನಮಾಝಿನ ನಂತರ ನಾನು ಒಂದು ಜನಾಝುವನ್ನು ಕೂಡ ನಿರ್ವಹಿಸುವೆನು. ಯು.ಕೆ.ಯ ಅಶ್ರಿರ್ಕತುಲ್ ಇಸ್ಲಾಮಿಯಯ ಚ್ಯಾರ್‌ಮ್ಯಾನ್ ಆಗಿದ್ದ ಸನ್ಮಾನ್ಯ ಅಬ್ದುಲ್ ಬಾಖಿ ಅಶ್ರಫ್ ಸಾಹಿಬ್‌ರದ್ದಾಗಿದೆ. ಫೈಸಲಾಬಾದಿನ ಡಾಕ್ಟರ್ ಅಬ್ದುಲ್ ಹಮೀದ್ ಸಾಹಿಬ್‌ರ ಮಗನಾಗಿದ್ದರು. ಎಪ್ರಿಲ್ 27ರಂದು 88ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.**

ಹಝ್ರತ್ ಮಸೀಹ್ ಮೌಊದ್(ಅ)ರ ಸಹಾಬಿಯಾದ ಹಝ್ರತ್ ಮಿಯಾ ಚಿರಾಗ್‌ದೀನ್ ಸಾಹಿಬ್(ರ)ರ ಮೊಮ್ಮಗನ ಮಗನಾಗಿದ್ದರು. ಹಝ್ರತ್ ಮುಹಮ್ಮದ್ ಹುಸೈನ್ ಸಾಹಿಬ್(ರ) ಮತ್ತು ಸ್ವಲ್ಪ ಕಾಲ ಹಝ್ರತ್ ಮುಸ್ಲಿಹ್ ಮೌಊದ್(ರ)ರ ಪ್ರೈವೇಟ್ ಸೆಕ್ರಟರಿ ಕೂಡ ಆಗಿದ್ದ ಮಿಯಾ ಮುಹಮ್ಮದ್ ಯೂಸುಫ್ ಸಾಹಿಬ್‌ರ ಕುಟುಂಬವರಾಗಿದ್ದರು. ಅಶ್ರಫ್ ಸಾಹಿಬ್ 1955ರಲ್ಲಿ ಇಂಗ್ಲಂಡಿಗೆ ಹೋದರು. ಅಲ್ಲಿ ಇಲೆಕ್ಟ್ರಿಕ್ ಇಂಜಿನಿಯರಿಂಗ್ ಮಾಡಿದರು. ತನ್ನ ಪತ್ನಿಯೊಂದಿಗೆ ಮಸ್ಜಿದ್ ಫಝ್ಲ್‌ಗೆ ಸೇರಿಕೊಂಡಿದ್ದ ಕೊಠಡಿಯಲ್ಲಿ ಇರುತ್ತಿದ್ದರು. 1963ರಲ್ಲಿ ಅವರಿಗೆ ಸೌದಿಯಲ್ಲಿ ನೌಕರಿ ಲಭಿಸಿತ್ತು. 1972ರ ತನಕ ಅಲ್ಲೇ ಇದ್ದರು. ಸೌದಿ ಅರಬ್‌ನಲ್ಲಿ ಇದ್ದ ಸಮಯದಲ್ಲಿ ಹಜ್ಜಿಗೆ ಮತ್ತು ಉಮ್ರಗೆ ಬರುವ ಅಹ್ಮದಿಯರ ಸೇವೆ ಸಲ್ಲಿಸಲು ಅವರಿಗೆ ಸೌಭಾಗ್ಯ ಲಭಿಸಿತ್ತು. ಹೀಗೆ ಅಲ್ಲಿಗೆ ಹೋದವರಲ್ಲಿ ಕೆಲವು ಸಹಾಬಿಯರು ಕೂಡ ಸೇರುತ್ತಾರೆ. ಸೌದಿ ಅರೇಬಿಯದಲ್ಲಿ ನೆಲೆಸಿದ್ದಾಗ ಅಹ್ಮದಿಯಾದ ಕಾರಣದಿಂದ ಅಲ್ಲಾಹನ ಮಾರ್ಗದಲ್ಲಿ ಜೈಲುವಾಸದಲ್ಲಿ ಇರಲು ಕೂಡ ಸೌಭಾಗ್ಯ ಲಭಿಸಿತು. ಅಹ್ಮದಿಯ್ಯತ್ ಬಿಟ್ಟರೆ ಬಿಡುಗಡೆಗೊಳಿಸಲಾಗುವುದು ಎಂದು ಸರ್ಕಾರ ಆಫರ್ ಮುಂದಿಟ್ಟಿತ್ತು. ಆದರೆ ಅವರು ಜೈಲುವಾಸವನ್ನು ಸಹಿಸಿದರು. ಆದರೆ ಅಹ್ಮದಿಯ್ಯತ್ ಬಿಡುವುದನ್ನು ನಿರಾಕರಿಸಿದರು. ಹೇಗಿದ್ದರೂ 1972ರಲ್ಲಿ ಅವರನ್ನು ದೇಶದಿಂದ ಹೊರಹಟ್ಟಲಾಯಿತು. ಅನಂತರ ಯು.ಕೆ.ಗೆ ಹೋದರು. ಇಲ್ಲಿ ಬಂದ ನಂತರ ಮರಣದ ತನಕ ಅವರಿಗೆ ಜಮಾಅತಿನ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಲು ಸೌಭಾಗ್ಯ ಲಭಿಸಿತು. ಹಝ್ರತ್ ಖಲೀಫತುಲ್ ಮಸೀಹ್ ರಾಬಿ(ರಹ್) ಹಿಜ್ರತ್ ಮಾಡಿದಾಗ ಅವರನ್ನು ಕರೆಕೊಂಡು ಬರಲು ಇವರು ಹಾಲೆಂಡಿಗೂ ಹೋಗಿದ್ದರು. ಅನಂತರ ಹಾಲೇಂಡಿನಿಂದ ಯು.ಕೆ. ತನಕ ಹುಝೂರಿನ ಜೊತೆಗೇನೇ ಬಂದಿದ್ದರು. ಯು.ಕೆ.ಯಲ್ಲಿ ಸೆಕ್ರಟರಿ ಜಾಇದಾದ್ ಆಗಿ ಸೇವೆ ಸಲ್ಲಿಲು ಅವರಿಗೆ ಸೌಭಾಗ್ಯ ಲಭಿಸಿತ್ತು. ಇಸ್ಲಾಮಾಬಾದಿನಲ್ಲಿ ಭೂಮಿಯನ್ನು ಖರೀದಿ ಮಾಡುವುದರಲ್ಲಿ ಅವರು ಹಿರಿದಾದ ಪಾತ್ರವಹಿಸಿದ್ದರು. ಯು.ಕೆ.ಯ ನಾಇಬ್ ಅಮೀರ್ ಆಗಿಯೂ ಸೇವೆ ಸಲ್ಲಿಸಲು ಸೌಭಾಗ್ಯ ಪಡೆದಿದ್ದರು. ಯು.ಕೆ.ಯ ಜಲ್ಸ ಸಾಲಾನ ಆಫೀಸರ್, ಆಫ್ರಿಕ ಟ್ರೇಡಿನ ಚೇರ್‌ಮೇನ್, ಅಶ್ರಿರ್ಕತುಲ್ ಇಸ್ಲಾಮಿಯದ ಚೇರ್‌ಮೇನ್ ಆಗಿ ದೀರ್ಘ ಕಾಲ ಸೇವೆ ಸಲ್ಲಿಸಲು ಸೌಭಾಗ್ಯ ಪಡೆದಿದ್ದರು. ದಿವಂಗತರು ಇಬ್ಬರು ಪುತ್ರರನ್ನು ಮತ್ತು ಇಬ್ಬರು ಪುತ್ರಿಯರನ್ನು ಅಗಲಿರುವರು. ಅವರ ಒಬ್ಬ ಮಗನಾದ ನಬೀಲ್ ಅಶ್ರಫ್ ಸಾಹಿಬ್‌ರು ಯು.ಕೆ.ಯಲ್ಲಿ ಉತ್ತಮವಾಗಿ ಜಮಾಅತಿನ ಸೇವೆ ಸಲ್ಲಿಸುತ್ತಿದ್ದಾರೆ.

ಅವರ ಬಗ್ಗೆ ಆಫೀಸಿನ ಮಾಜಿ ಉದ್ಯೋಗಿ ಮುಬಶ್ಶಿರ್ ಝಫರ್ ಹೇಳುತ್ತಾರೆ: ಸ್ವಯಂ ಸೇವಕರಾಗಿ ಸೇವೆಸಲ್ಲಿಸಲು ಅವರಿಗೆ ಸೌಭಾಗ್ಯ ಲಭಿಸುತ್ತಿತ್ತು. ಜಮಾಅತಿನ ಯಾವುದೇ ಅಲೌನ್ಸ್ ಪಡೆಯುತ್ತಿರಲಿಲ್ಲ. ಆದರೆ ಬಹಳ ಜವಾಬ್ದಾರಿಯುತವಾಗಿ ಕೆಲಸ ಮಾಡುತ್ತಿದ್ದರು. ಬಹಳ ಸಮಯನಿಷ್ಠೆಯನ್ನು ಹೊಂದಿದ್ದರು. ವಯಸ್ಸಾಗಿದ್ದರೂ ರೋಗದ ಯಾವುದೇ ಪರಿವೆ ಮಾಡದೇ ದಿನಾಲೂ ಆಫೀಸಿನಲ್ಲಿ 8–10 ಗಂಟೆಗಳು ಕುಳಿತುಕೊಳ್ಳುತ್ತಿದ್ದರು. ತನ್ನ ಕೆಲಸವನ್ನು ಸ್ವತಃ ಮಾಡುವ ಅಭ್ಯಾಸವನ್ನು ಹೊಂದಿದ್ದರು. ತನಗೆ ಬೇಕಾದ ಚಹಾವನ್ನು ಕೂಡ ಸ್ವತಃ ತಯಾರಿಸಲು ಪ್ರಯತ್ನಿಸುತ್ತಿದ್ದರು. ಯಾರಾದರೂ ಚಹಾ ಮಾಡಿಕೊಟ್ಟರೆ, ಅದರ ಕಪ್ಪನ್ನು ಯಾರಿಗೂ ತೊಳೆಯಲು ನೀಡುತ್ತಿರಲಿಲ್ಲ. ಕೆಲವೊಮ್ಮೆ ಜನರು ಮಧ್ಯಾಹ್ನ ಊಟದ ವೇಳೆ ಡೇರ್‌ಪಾರ್ಕಿನಲ್ಲಿ ಮೇಜಿನಲ್ಲಿ ಕೆಲವು ಪಾತ್ರೆಗಳನ್ನು ಬಿಟ್ಟುಹೋಗುತ್ತಿದ್ದರು. ಆಗ ಅವರು ಯಾರೊಡನೆಯೂ ಹೇಳದೇ ಸ್ವತಃ ಎತ್ತುತ್ತಿದ್ದರು ಮತ್ತು ಮೇಜನ್ನು ಶುಚಿಗೊಳಿಸುತ್ತಿದ್ದರು. ಕೆಲವೊಮ್ಮೆ ಆವಶ್ಯಬಂದರೆ, ಟಾಯ್ಲೇಟ್ ಶುಚಿಗೊಳಿಸುವವ ಬರದಿದ್ದರೆ, ಸ್ವತಃ ಟಾಯ್ಲೇಟ್ ಶುಚಿಗೊಳಿಸುತ್ತಿದ್ದರು. ಬಹಳ ವಿನಯದಿಂದ ಮತ್ತು ಬಹಳ ಪರಿಶ್ರಮದಿಂದ ಕೆಲಸಮಾಡುತ್ತಿದ್ದ ಆಫೀಸರ್ ಆಗಿದ್ದರು. ಅವರು ಉತ್ತಮ ಜ್ಞಾಪಕಶಕ್ತಿಯನ್ನು ಸಹ ಹೊಂದಿದ್ದರು. ಕೊನೆಯ ತನಕ ಜಮಾಅತಿನ ಹಣಗಳು ಮತ್ತು ಅವರ ಜವಾಬ್ದಾರಿಗಳನ್ನು ಬಹಳ ಉತ್ತಮ ರೀತಿಯಲ್ಲಿ ಈಡೇರಿಸುತ್ತಿದ್ದರು. ಜಮಾಅತಾದ ನಮಾಝಿನ ಸರಿಯಾದ ಪಾಲನೆ ಮಾಡುತ್ತಿದ್ದರು ಖಿಲಾಫತಿಗೆ ಬಹಳ ಗೌರವ ನೀಡುತ್ತಿದ್ದರು. ಖಿಲಾಫತಿನ ಕಡೆಯಿಂದ ಮಾರ್ಗನಿರ್ದೇಶನ ಬಂದರೆ, ಅದು ಅವರ ಸ್ವಂತ ಅಭಿಪ್ರಾಯಕ್ಕೆ ವಿರುದ್ಧವಾಗಿದ್ದರೂ ಬೇಗನೇ ತೆರೆದ ಮನಸ್ಸಿನಿಂದ ಸಂತೋಷದಿಂದ ಅದನ್ನು ಒಪ್ಪುತ್ತಿದ್ದರು ಮತ್ತು ತನ್ನ ಅಭಿಪ್ರಾಯವನ್ನು ಮರೆತುಬಿಡುತ್ತಿದ್ದರು. ವದೂದ್ ಮಲಿಕ್ ಸಾಹಿಬ್ ಹೇಳುತ್ತಾರೆ: ನಾನು ಅವರಿಗಿಂತ ಬಹಳ ಕಿರಿಯನಾಗಿರುವೆನು. ಆದರೂ ಅವರ ಬಳಿಗೆ ಹೋಗುವಾಗಲೆಲ್ಲ ಬಹಳ ವಾತ್ಸಲ್ಯದಿಂದ ಮಾರ್ಗದರ್ಶನ ಮಾಡುತ್ತಿದ್ದರು ಮತ್ತು ಬಹಳ ವಿನಯದಿಂದ ವರ್ತಿಸುತ್ತಿದ್ದರು. ನಾನು ಅವರಿಗಿಂತ ಸಣ್ಣವನಲ್ಲ ಬದಲಾಗಿ ಅವರದ್ದೇ ಪ್ರಾಯದವನು ಎಂಬಂತೆ ಗೌರವದಿಂದ ವರ್ತಿಸುತ್ತಿದ್ದರು.

ಅವರ ಬಗ್ಗೆ ಮುನೀರುದ್ದೀನ್ ಶಮ್ಸ್ ಸಾಹಿಬ್ ಕೂಡ ಬರೆದಿರುವರು: ಇಸ್ಲಾಮಾಬಾದಿನ ಮನೆಗಳ ಆವಶ್ಯಕತೆಗಳ ಬಗ್ಗೆ ಗೊತ್ತುಮಾಡುವ ಜವಾಬ್ದಾರಿಯನ್ನು ಹಝ್ರತ್ ಖಲೀಫತುಲ್ ಮಸೀಹ್(ರಹ್) ಅವರಿಗೆ ಒಪ್ಪಿಸಿದ್ದರು. ಅವರು ಅದನ್ನು ಬಹಳ ಉತ್ತಮವಾಗಿ ಮಾಡಿದ್ದರು. ಅದೇ ರೀತಿಯಲ್ಲಿ ಮರಣದ ವರೆಗೂ ಅಶ್ರಿರ್ಕತುಲ್ ಇಸ್ಲಾಮಿಯದ ಜವಾಬ್ದಾರಿಯನ್ನು ಕೂಡ ಬಹಳ ಉತ್ತಮವಾಗಿ ಮಾಡುತ್ತಿದ್ದರು. ಎಂ.ಟಿ.ಎ.ದೊಂದಿಗೆ ಕೂಡ ಈ ವಿಭಾಗಕ್ಕೆ ಸಂಪರ್ಕವಿತ್ತು. ಎಂ.ಟಿ.ಎ.ದ ಆರ್ಥಿಕ ವಿಷಯಗಳಲ್ಲಿ ಮತ್ತು ಕಾಂಟ್ರಾಕ್ಟ್ ಇತ್ಯಾದಿಗಳಲ್ಲಿ ಅವರು ಹೆಚ್ಚಿನ ಪಾತ್ರವನ್ನು ವಹಿಸಿದ್ದರು. ಅಲ್ಲಾಹನು ಅವರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಅವರ ಪದವಿಗಳನ್ನು ಉನ್ನತಗೊಳಿಸಲಿ. ಅವರ ಮಕ್ಕಳಿಗೂ ಸೇವೆ ಸಲ್ಲಿಸಲು ಸೌಭಾಗ್ಯ ನೀಡಲಿ. ನಿಷ್ಠೆ ಮತ್ತು ಪ್ರಾಮಾಣಿಕತೆಯಿಂದ ಜಮಾಅತ್ ಮತ್ತು ಖಿಲಾಫತಿನೊಂದಿಗೆ ಜೋಡಿಸಲಿ. ನಮಾಝಿನ ನಂತರ ಹೊರಗೆ ಹೋಗಿ ನಾನು ಅವರ ಜನಾಝು ಹಾಝಿರ್ ನಿರ್ವಹಿಸುವೆನು.

************

*(ಪುಟ ಸಂಖ್ಯೆ 01ರ ಉಳಿದ ಭಾಗ)*

**ಯಹ್‌ಕುಮೂನ್** ರ ವದಯಾಖ್ಯಾನ ಮಾಡುತ್ತ ಹೇಳಿದರು:

ಪಿತೃಪ್ರೇಮದ ನಡುವೆಯೂ ಹೆಣ್ಣೆಂಬ ಅವಮಾನವನ್ನು ಸಹಿಸಿಕೊಂಡು ಅಥವಾ ಅವಳ ಅಸಹಾಯಕತೆಯನ್ನು ಜೀವಂತ ಸಮಾಧಿ ಮಾಡಿ ಬದುಕಲು ಬಿಡುವ ಹಿಂಜರಿಕೆಯಲ್ಲಿ ಬೀಳುತ್ತಾನೆ.

ಈ ನಿಟ್ಟಿನಲ್ಲಿ, ಹುಡುಗಿಯರನ್ನು ಜೀವಂತವಾಗಿ ಹೂಳುವ ಪದ್ಧತಿ ಅರಬ್ಬರಲ್ಲಿ ಸಾಮಾನ್ಯವಾಗಿತ್ತು ಎಂದು ಜನರು ಸಾಮಾನ್ಯವಾಗಿ ತಪ್ಪಾಗಿ ಭಾವಿಸುತ್ತಾರೆ ಎಂದು ನೆನಪಿನಲ್ಲಿಡಬೇಕು, ಆದರೆ ಇದು ಹಾಗಲ್ಲ. ಹೀಗಾದರೆ ಅವರ ದೇಶದಲ್ಲಿ ಹೆಣ್ಣು ಮಕ್ಕಳ ಸಂಖ್ಯೆ ತೀರಾ ಕಡಿಮೆಯಾಗುತ್ತಿತ್ತು. ಸತ್ಯವೆಂದರೆ ಅರಬ್ ದೇಶದಲ್ಲಿ ಮಾತ್ರವಲ್ಲ ಪ್ರಪಂಚದಾದ್ಯಂತ ಹೆಣ್ಣುಮಕ್ಕಳ

ಜನನವನ್ನು ಕೆಟ್ಟದಾಗಿ ಪರಿಗಣಿಸಲಾಗುತ್ತಿತ್ತು, ಆದರೆ ಅವಳನ್ನು ಜೀವಂತವಾಗಿ ಹೂಳುವ ಪದ್ಧತಿಯನ್ನು ಪ್ರಾಯೋಗಿಕವಾಗಿ ಕೆಲವು ದೊಡ್ಡ ಮತ್ತು ಸೊಕ್ಕಿನ ಜನರು ಮಾತ್ರ ಅಭ್ಯಾಸ ಮಾಡುತ್ತಿದ್ದರು. ಹೆಣ್ಣು ಮಗುವಿನ ಜನನವನ್ನು ಕೆಟ್ಟದ್ದು ಎಂದು ಪರಿಗಣಿಸುವುದು ಒಂದು ವಿಷಯವಾಗಿದ್ದರೆ ಹೆಣ್ಣು ಮಗುವನ್ನು ಜೀವಂತವಾಗಿ ಹೂಳುವುದು ಇನ್ನೊಂದು ವಿಷಯವಾಗಿದೆ. ಇವತ್ತಿಗೂ ಜನರು ಸಾಮಾನ್ಯವಾಗಿ ಹೆಣ್ಣು ಮಗು ಹುಟ್ಟುವುದು ಕೆಟ್ಟದ್ದೆಂದು ಪರಿಗಣಿಸುತ್ತಾರೆ, ಆದರೆ ಅವರನ್ನು ಕೊಲ್ಲುವರು ಕೆಲವೇ ಜನರಾಗಿದ್ದಾರೆ. ಅರೇಬಿಯಾದಲ್ಲಿಯೂ, ಈ ಕೃತ್ಯವು ಮಕ್ಕಾದಲ್ಲಿ ಬಹಳ ವಿರಳವಾಗಿತ್ತು. ಸಾಮಾನ್ಯವಾಗಿ, ತಮ್ಮನ್ನು ತಾವು ದೊಡ್ಡವರು ಎಂದು ಪರಿಗಣಿಸುವ ಗೋತ್ರದ ಜನಾಂಗದವರಲ್ಲಿ ಈ ಅಭ್ಯಾಸವು ಸಾಮಾನ್ಯವಾಗಿತ್ತು ಮತ್ತು ಕೆಲವು ಮಹಾನ್ ವ್ಯಕ್ತಿಗಳಲ್ಲಿ ಸಾಮಾನ್ಯವಾಗಿತ್ತು. ಹೀಗಾಗಿ ಇಲ್ಲಿ ಸಾಮಾನ್ಯ ಪದ್ಧತಿಯ ಬಗ್ಗೆ ಹೇಳಲಿಲ್ಲ ಬದಲಿಗೆ ಒಂದು ಸಮೂದಾಯದ ಮಹನೀಯರ ಇಂತಹ ಕೃತ್ಯದ ಬಗ್ಗೆ ಹೇಳಲಾಗುತ್ತಿದೆ ಅದನ್ನು ಇಡೀ ಸಮುದಾಯವು ಮಾಡದಿದ್ದರು ಎಲ್ಲರೂ ಇದನ್ನು ಗೌರವದ ಕಾರ್ಯವೆಂದು ಪರಿಗಣಿಸಿದರು.

**ಅಲಾ ಸಾಅ ಮಾ ಯಹ್ಕುಮೂನ್** ನಲ್ಲಿ ತಿಳಿಸಿರುವುದೇನೆಂದರೆ ತಮ್ಮ ಹೆಣ್ಣುಮಕ್ಕಳನ್ನು ಕೆಟ್ಟವರೆಂದು ಪರಿಗಣಿಸುವವರ ಈ ಕೃತ್ಯವು ಬಹಳ ಕೆಟ್ಟದ್ದಾಗಿದೆ. ಹೆಣ್ಣು ಮಕ್ಕಳಿಲ್ಲದಿದ್ದರೆ ಅವರು ಹೇಗೆ ಹುಟ್ಟುತ್ತಾರೆ? ಮತ್ತು ಭವಿಷ್ಯದಲ್ಲಿ ಹೆಣ್ಣುಮಕ್ಕಳಿಲ್ಲದಿದ್ದರೆ ಅವರ ಪುತ್ರರ ಸಂತನವು ಹೇಗೆ ಮುಂದುವರಿಯುತ್ತದೆ?

ಪವಿತ್ರ ಖುರ್‌ಆನ್ ಮೊದಲಿನಿಂದಲೂ ಮಹಿಳೆಯರ ಘನತೆಯನ್ನು ಸ್ಥಾಪಿಸಿದೆ ಮತ್ತು ಅವರ ಹಕ್ಕುಗಳನ್ನು ಗುರುತಿಸಿದೆ, ಆದರೆ ಇದರ ಹೊರತಾಗಿಯೂ ಪ್ರವಾದಿ(ಸ) ಮಹಿಳೆಯರನ್ನು ತುಳಿತಕ್ಕೊಳಗಾಗಿಸಿದ್ದಾರೆ ಎಂದು ಹೇಳಲಾಗುತ್ತದೆ. ಅಂದಿನಿಂದಲೂ ಮಹಿಳಾ ಹಕ್ಕುಗಳನ್ನು ಸಂರಕ್ಷಿಸಲಾಗಿದೆ ಮತ್ತು ನೋಡಿಕೊಳ್ಳಲಾಗಿದೆ. ಇದು ಪವಿತ್ರ ಖುರ್‌ಆನ್ ಮಾತ್ರವಾಗಿದೆ.

**(ತಫ್ಸೀರ್ ಕಬೀರ್, ಸಂಪುಟ–4, ಪುಟ–185, ಖಾದಿಯಾನ್ 2010)**

*(ಪುಟ ಸಂಖ್ಯೆ 02ರ ಉಳಿದ ಭಾಗ)*

ಅಪ್ಪಟ ದುರಾದೃಷ್ಟಿಯಾಗಿದೆ. ಅವರುಗಳು ನನ್ನ ವಿನಾಶ ಬಯಸುತ್ತಾರೆ. ನಾನು ಆ ಯಥಾರ್ಥ ಮಾಲೀಕನು ನೆಟ್ಟ ಮರವಾಗಿದ್ದೇನೆ. ಅವನು ಸ್ವತಃ ತನ್ನ ಕೈಯಿಂದ ಅದನ್ನು ನೆಟ್ಟಿರುವನು. ಯಾವ ವ್ಯಕ್ತಿ ನನ್ನನ್ನು ಕಡಿಯಬಯಸುವನು ಅದರ ಪರಿಣಾಮ ಖಾರೂನ್ ಮತ್ತು ಯಹುದಾ ಇಸ್ಕರಿಯೋತ್ ಮತ್ತು ಅಬು ಜಹಲ್‌ಗಳು ಪಡೆದ ಫಲಗಳಿಂದ ಅವನು ಪಡೆಯಬಯಸುತ್ತಾರೆ. ಓ ಜನರೇ! ದಿಟವಾಗಿ ತಿಳಿದುಕೊಳ್ಳಿರಿ. ನನ್ನ ಜೊತೆಯಲ್ಲಿ ಕೊನೆಯವರೆಗೆ ನಿಷ್ಠೆ ತೋರಿದ ಕೈಯಿದೆ. ನಿಮ್ಮ ಸ್ತ್ರೀ, ಪುರುಷರು, ಯುವಕ ಮತ್ತು ವೃದ್ಧರು, ಮತ್ತು ನಿಮ್ಮ ಎಲ್ಲಾ ಹಿರಿಯರು ಸೇರಿ ನನ್ನ ವಿನಾಶಕ್ಕಾಗಿ ಪ್ರಾರ್ಥಿಸಿದರೂ ಎಲ್ಲಿಯವರೆಗೆಂದರೆ ಸಾಷ್ಟಾಂಗ ಪ್ರಣಾಮದಲ್ಲಿ ಪ್ರಾರ್ಥಿಸುತ್ತಾ ನಿಮ್ಮ ಮಾರ್ಗಗಳು ಬೆಂದು ಹೋದರೂ ಮತ್ತು ಕೈಗಳು ಸೋತು ಹೋದರೂ, ಆಗಲೂ ಅಲ್ಲಾಹನು ಖಂಡಿತವಾಗಿಯೂ ನಿಮ್ಮ ಪ್ರಾರ್ಥನೆ ಆಲಿಸುವುದಿಲ್ಲ, ಅವನು ತನ್ನ ಕಾರ್ಯ ಪೂರ್ಣಗೊಳಿಸುವವರೆಗೆ ನಿಲ್ಲುವುದಿಲ್ಲ. (ಅದೇ ಪುಟ 49).

**ದೇವನೊಡನೆ ಯುದ್ಧ ಮಾಡುವರೇ! ನನ್ನನ್ನು ವಿನಾಶಗೊಳಿಸುವುದು ನಿಮ್ಮ ಕೆಲಸವಲ್ಲ.**

ಹಝ್ರತ್ ಮಸೀಹ್ ಮೌಊದ್(ಅ) ನುಡಿದರು.

ಸುಳ್ಳು ಮತ್ತು ಮಿಥ್ಯ ಭರಿತ ಜೀವನದ ಮೇಲೆ ಶಾಪ ಬಯಸುವೆನು. ಅಂತೆಯೇ ಜನರಿಗೆ ಹೆದರಿ ದೇವನಿಂದ ದೂರ ಹೋಗುವವರ ಮೇಲೆ ಅವನೇ ತಕ್ಕ ಸಮಯದಲ್ಲಿ ತನ್ನ ಸೇವೆಯನ್ನು ನನಗೆ ದಯಪಾಲಿಸಿದ್ದಾನೆ. ಅದಕ್ಕಾಗಿಯೇ ನನ್ನನ್ನು ಸೃಷ್ಟಿಸಿರುವನು. ಅಂದ ಮೇಲೆ ನಾನು ಆಲಸ್ಯ ವಹಿಸಲು ಸಾಧ್ಯವಿಲ್ಲ. ಒಂದೆಡೆಯಿಂದ ಸೂರ್ಯ ಮತ್ತು ಭೂಮಿಯು ಸೇರಿ ನನ್ನನ್ನು ತುಳಿಯಬಸಿದರೂ ಸಾಧ್ಯವಿಲ್ಲ. ಮನುಷ್ಯನೇನು ಒಂದು ಕ್ರಿಮಿ ಮಾತ್ರ. ಮಾನವನೇನು ಒಂದು ವೀರ್ಯವಷ್ಟೇ. ಅಂದ ಮೇಲೆ ಏತಕ್ಕಾದರೂ ಆ ಹಯ್ಯು ಮತ್ತು ಖಯ್ಯೂಮ್ ದೇವನ ಆಜ್ಞೆಯನ್ನು ಒಂದು ಕ್ರಿಮಿ ಅಥವಾ ವೀರ್ಯಾಣು ತಳ್ಳಿ ಹಾಕಲು ಸಾಧ್ಯ? ಯಾವ ರೀತಿ ಅಲ್ಲಾಹನು ಪೂರ್ವ ಮಹಾತ್ಮರುಗಳ ಮತ್ತು ವಿರೋಧಿಗಳ ನಡುವೆ ಅಂತಿಮವಾಗಿ ತೀರ್ಪು ನೀಡಿದನೋ ಅದೇ ರೀತಿ ಈಗಲೂ ಸಹ ತೀರ್ಪು ನೀಡುವನು. ಅಲ್ಲಾಹನ ಮಹಾತ್ಮರುಗಳಿಗೆ ಆಗಮಿಸಲು ಒಂದು ಸಮಯ ನಿಯುಕ್ತಗೊಂಡಿರುತ್ತದೆ ಮತ್ತು ನಿರ್ಗಮಿಸಲು ಸಹ. ಹಾಗೆ ದಿಟವಾಗಿಯೂ ತಿಳಿದುಕೊಳ್ಳಿರಿ. ನಾನು ಅಕಾಲ ಸಮಯದಲ್ಲಿ ಬಂದವನಲ್ಲ, ಅಕಾಲ ಸಮಯದಲ್ಲಿ ಹೋಗುವವನೂ ಅಲ್ಲ, ವಿನಾಕಾರಣ ದೇವನೊಡನೆ ಯುದ್ಧ ಸಾರಬೇಡಿ! ನನ್ನನ್ನು ನಾಶಗೊಳಿಸುವುದು ನಿಮ್ಮ ಕೆಲಸವಲ್ಲ.

(ಅದೇ ಪುಟ 50)

**ವೈಭವಯುತ ಬಹುಮಾನದ ಪಂಥಾಹ್ವಾನ**

ಸಯ್ಯಿದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ನುಡಿಯುತ್ತಾರೆ.

ಇದೀಗ ಈ ಜಾಹೀರಾತು ನೀಡುವ ಉದ್ದೇಶ, ಯಾವ ರೀತಿ ಇವರ ದೃಷ್ಟಾಂತಗಳಲ್ಲಿ ಅಲ್ಲಾಹನು ವಿರೋಧಿಗಳ ಮೇಲೆ ನ್ಯಾಯಪೂರ್ತಿಕರಣ ಗೊಳಿಸಿರುವನು, ಅದೇ ರೀತಿ ನಾನು ಬಯಸುವೆನು. ಲೌ ತಖವ್ವಲು ವಚನದಂತೆಯೇ ನ್ಯಾಯ ಪೂರ್ತಿಕರಣ ಮಾಡಲಿ. ಆ ನೆಲೆಯಲ್ಲಿ ನಾನು ಈ ಜಾಹೀರಾತನ್ನು ಐನೂರು ರೂಪಾಯಿಗಳ ಬಹುಮಾನ ಜೊತೆಗೆ ಪ್ರಕಟಿಸಿರುತ್ತೇನೆ. ನಿಮಗೆ ಭರವಸೆ ಆಗಲಿಲ್ಲ ಎಂದರೆ ಈ ಮೊತ್ತ ಯಾವುದೇ ಸರಕಾರಿ ಬ್ಯಾಂಕಿನಲ್ಲಿ ಠೇವಣಿಯಾಗಿ ಇಡಬಹುದು. ಹಾಫಿಝ್ ಮುಹಮ್ಮದ್ ಸಾಹಿಬ್ ಮತ್ತು ಅವರ ಸಹಪಾಠಿಗಳು ಅವರ ಹೆಸರುಗಳು ನಾನು ಈ ಪತ್ರಿಕೆಯಲ್ಲಿ ಬರೆದಿರುತ್ತೇನೆ. ತಮ್ಮ ವಾದದಲ್ಲಿ ಸತ್ಯವಂತರಾಗಿದ್ದಲ್ಲಿ ಅಂದರೆ ಈ ಮಾತು ಸರಿ ಎಂದಾದರೆ, ಯಾವನೇ ಒಬ್ಬ ವ್ಯಕ್ತಿ ನಬಿ ಅಥವಾ ರಸೂಲ್ ಅಥವಾ ಅಲಾಹನಿಂದ ನಿಯುಕ್ತಿಗೊಂಡವನು ಎಂಬ ದಾವೆ ಸರಿ ಮತ್ತು ಅವನ ಮೇಲೆ ಆದ ಅಲ್ಲಾಹನ ದಿವ್ಯವಾಣಿಗಳು ಜನರ ಮುಂದೆ ಇರಿಸಿ ಅವನು ಮಿಥ್ಯವಾದಿ ಆದ ನಂತರವೂ 23 ವರ್ಷ ತನಕ ಅದು ನಬಿವರ್ಯರ ಹಝ್ರತ್ ರಸೂಲುಲ್ಲಾಹ್(ಸ) ರವರ ಕಾಲಕ್ಕೆ ಸಮಾನವಾಗಿರುತ್ತದೆ. ಜೀವಂತವಾಗಿದ್ದರೆ ನಾನು ಇಂತಹ ಉದಾಹರಣೆ ತೋರಿಸುವವರಿಗೆ, ಅದಕ್ಕೆ ಪೂರಕವಾಗಿ ನನಗೆ ಖುರ್‌ಆನ್‌ನ ಸಾಕ್ಷ್ಯಗಳ ಪ್ರಕಾರ ಪುರಾವೆಗಳನ್ನು ಒದಗಿಸಿದರೆ ಅವನಿಗೆ 500 ರೂಪಾಯಿಗಳು ನಗದು ಬಹುಮಾನ ನೀಡುವೆನು. ಈ ಪತ್ರಿಕೆ ಪ್ರಕಟಿಸಿದ ದಿನಾಂಕದಿಂದ 15 ದಿನಗಳ ಒಳಗೆ ಅವರಿಗೆ ಕಾಲಾವಕಾಶ ನೀಡಲಾಗುವುದು. ಅವರು ಲೋಕದಲ್ಲಿ ಉಂಟಾದ ಅಂತಹದೊಂದು ಉದಾಹರಣೆಯನ್ನು ಹುಡುಕಿ ಪ್ರಸ್ತುತಪಡಿಸಲಿ. (ಅದೇ ಪುಟ 50)

ಮುಂದಿನ ಸಂಚಿಕೆಯಲ್ಲಿ ನಾವು ಸಯ್ಯಿದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಮತ್ತೊಂದು ವೈಭವಯುತ ಬಹುಮಾನ ಪಂಥಾಹ್ವಾನವನ್ನು ಪ್ರಸ್ತುತಪಡಿಸುತ್ತೇವೆ. **(ಮನ್ಸೂರ್ ಅಹ್ಮದ್ ಮಸ್ರೂರ್)**

**ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ರಕ್ಷಿಸಿರಿ**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ನ ಕಾಲದ ಸ್ಮರಣೀಯ ಪತ್ರಿಕೆ. **"ಅಖ್ಬಾರ್ ಬದರ್"** 1952 ರಿಂದ ಸತತವಾಗಿ ಖಾದಿಯಾನ್ ದಾರುಲ್‌ಅಮಾನಿನಿಂದ ಪ್ರಕಟಗೊಳ್ಳುತ್ತಿದೆ ಮತ್ತು ಅಹ್ಮದೀಯರ ಆಧ್ಯಾತ್ಮಿಕ ಅವಶ್ಯಕತೆಗಳನ್ನು ಪೂರೈಸುತ್ತಿದೆ. ಇದರಲ್ಲಿ ಪವಿತ್ರ ಖುರ್‌ಆನಿನ ಆಯುತ್‌ಗಳು, ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರ ಹದೀಸ್‌ಗಳು, ಹಝ್ರತ್ ಮಸೀಹ್ ಮೌಊದ್(ಅ)ರ ಮಲ್‌ಫೂಝಾತ್ ಮತ್ತು ಬರವಣಿಗಳಲ್ಲದೆ ಹುಝೂರ್ ಅನ್ವರ್(ಅ)ರವರ ಹೊಸ ಖುತ್‌ಬ ಜುಮುಆ ಮತ್ತು ಉಪನ್ಯಾಸಗಳು, ಸಂದೇಶಗಳು, ಖುತ್‌ಬ ಜುಮುಆ ಪ್ರಶ್ನೋತ್ತರರ ರೂಪದಲ್ಲಿ ಮತ್ತು ಹುಝೂರ್ ಅನ್ವರ್‌ರವರ ಪ್ರವಾಸದ ವರದಿಗಳು, ಅದೇ ರೀತಿ ಆಧ್ಯಾತ್ಮಿಕ ಮತ್ತು ಲೌಕಿಕ ಜ್ಞಾನಗಳ ಸಂಪತ್‌ಭರಿತ ವರದಿಗಳು ಇರುತ್ತದೆ. ಅವುಗಳನ್ನು ಅಧ್ಯಯನ ಮಾಡುವುದು, ಅವುಗಳನ್ನು ಅನ್ಯರಿಗೆ ತಲುಪಿಸುವುದು ಮತ್ತು ಅದರಿಂದ ತಮ್ಮ ಮತ್ತು ತಮ್ಮ ಮಕ್ಕಳ, ಕುಟುಂಬದವರ ತರಬೇತಿ ಮಾಡುವುದು ನಮ್ಮ ಕರ್ತವ್ಯವಾಗಿದೆ. ಈ ಎಲ್ಲಾ ಉದ್ದೇಶಗಳನ್ನು ಪಡೆಯುವುದಕ್ಕೆ ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ಕಾಪಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಆಧ್ಯಾತ್ಮಿಕ ಜ್ಞಾನ ಮತ್ತು ತರಬೇತಿಯನ್ನೂ ಒಳಗೊಂಡಿರುವ ಈ ಪವಿತ್ರವಾದ ಪತ್ರಿಕೆಯ ಅವಶ್ಯಕತೆ ಏನೆಂದರೆ ಅದನ್ನು ಗೌರವಿಸಬೇಕು. ಆದ್ದರಿಂದ ಇದನ್ನು ರದ್ದಿಗೆ ಹಾಕುವುದು ಅದರ ಪಾವಿತ್ರ್ಯತೆಯನ್ನು ಚದುರಿಸುವ ಸಮಾನವಾಗಿದೆ. ಅದನ್ನು ರಕ್ಷಿಸಲು ಕಷ್ಟವಾಗುತ್ತಿದ್ದರೆ ಅದನ್ನು ಎಚ್ಚರಿಕೆಯಿಂದ ನಾಶಮಾಡಿರಿ. ಏಕೆಂದರೆ ಹೀಗೆ ಆ ಪವಿತ್ರ ಬರಹಗಳು ಅವಮಾನವಾಗಬಾರದು. ಅಹ್ಮದಿ ಸದಸ್ಯರೆಲ್ಲರೂ ಈ ಬಗ್ಗೆ ವಿಶೇಷ ಗಮನ ಹರಿಸುತ್ತೀರ ಮತ್ತು ಇದರಿಂದ ಉಪಯೋಗ ಗಳಿಸುವಿರೀ ಎಂದು ಆಶಿಸುತ್ತೇವೆ.

**(ಸಂಪಾದಕ)**

**ಪ್ರೀತಿ ಎಲ್ಲರಲ್ಲೂ, ದ್ವೇಶವಿಲ್ಲ ಯಾರಲ್ಲೂ**

**ಜಾಗತಿಕ ಅಹ್ಮದಿಯ ಮುಸ್ಲಿಮ್ ಜಮಾಅತ್ತಿನ ವಾರಪತ್ರಿಕೆ "ಬದರ್" ಇದೀಗ ಕನ್ನಡದಲ್ಲಿ ಪ್ರಕಟಗೊಳ್ಳುತ್ತಿದೆ.**

ಈ ಪತ್ರಿಕೆಯ ಹೆಸರು **"ಬದರ್"** ಎಂದಾಗಿದೆ. ಪೂರ್ಣ ಚಂದ್ರ ಎಂದರ್ಥ. ಇದು ಜಮಾಅತೆ ಅಹ್ಮದಿಯದ ಒಂದು ಧಾರ್ಮಿಕ ಪತ್ರಿಕೆ ಆಗಿದೆ ಅದರ ಮೂಲ ಉದ್ದೇಶ ಜಮಾಅತ್ತಿನ ಸದಸ್ಯರ ತರಬೇತಿ, ಶಿಕ್ಷಣ, ಒಳ್ಳೆ ನೈತಿಕತೆ ಕಲಿಸುವುದಾಗಿದೆ.

ನಮ್ಮ ಎರಡು ಉದ್ದೇಶಗಳಿವೆ. ಒಂದು ಅಲ್ಲಾಹನ ಹಕ್ಕನ್ನು ನಿಭಾಯಿಸುವುದು ಇನ್ನೊಂದು ದಾಸರ ಹಕ್ಕನ್ನು ನಿಭಾಯಿಸುವುದಾಗಿದೆ.

ಅಲ್ಲಾಹನ ಹಕ್ಕು ಏನಾಗಿದೆ ಎಂದರೆ ಅವನನ್ನು ಆರಾಧಿಸುವುದು ಅವನು ಎಲ್ಲಾ ಸ್ತುತಿ ಸರ್ವ ಲೋಕಗಳ ಪರಿಪಾಲಕನಾಗಿದ್ದಾನೆ ಮತ್ತು ಅವನ ಉಪಕಾರಗಳನ್ನು ನೆನಪಿಸಿಕೊಂಡು ಅವನಿಗೆ ವಿಧೇಯತೆ ತೋರಿಸುವುದಾಗಿದೆ.

ಇನ್ನೊಂದು ದಾಸರ ಹಕ್ಕನ್ನು ನಿಭಾಯಿಸುವುದಾಗಿದೆ. ದಾಸರ ಹಕ್ಕುಗಳೇನಂದರೆ ಅಗತ್ಯವುಳ್ಳವರನ್ನು ಸಹಾಯ ಮಾಡುವುದು, ಯಾರನ್ನು ದುಃಖ, ತೊಂದರೆ ಅಥವಾ ಸಂಕಷ್ಟ ಕೊಡಬಾರದು, ರಾಷ್ಟ್ರದಲ್ಲಿ ಕಿಡಿಗೇಡಿತನ ಹುಟ್ಟಿಸಬಾರದು, ಸ್ವದೇಶ ಪ್ರೇಮ ಈಮಾನಿನ ಒಂದು ಭಾಗವಾಗಿದೆ ಹಾಗೂ ಸ್ವದೇಶದ ಅಭಿವೃದ್ಧಿಗಾಗಿ ಶ್ರಮವಹಿಸುವುದಾಗಿದೆ.

ಈ ಪತ್ರಿಕೆಯು 100 ವರ್ಷಕ್ಕಿಂತ ಹೆಚ್ಚು ಕಾಲಾವಧಿಯಿಂದ ಈ ಉದ್ದೇಶದ ಪ್ರಕಾರ ಜಮಾಅತ್ತಿನ ಸದಸ್ಯರ ಶೈಕ್ಷಣಿಕವಾಗಿ ತರಬೇತಿ ಮಾಡುತ್ತಾ ಬಂದಿದೆ. ಅದರ ಪ್ರತಿ ಫಲವಾಗಿ ನಮಗೆ ಅಲ್ಲಾಹನ ಅನುಗ್ರಹದಿಂದ ಶಾಂತಿಯುತ ಪಂಗಡ ಎಂದು ವಿಶ್ವದಾದ್ಯಂತ ಪರಿಗಣಿಸುತ್ತಾರೆ.

ಅಕ್ಟೋಬರ್ 1902ರಲ್ಲಿ ಜಾಗತಿಕ ಅಹ್ಮದಿಯ ಮಯಸ್ಲಿಮ್ ಜಮಾಅತ್ತಿನ ಸಂಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಖದಿಯಾನಿ(ಅಲೈಹಿಸ್ಸಲಾಮ್) ಅವರು ಈ ಪತರಿಕೆಯನ್ನು ಉರ್ದು ಭಾಷೆಯಲ್ಲಿ ಉದ್ಘಾಟಿಸಿದರು. ಇಂದು ಈ ಪತ್ರಿಕೆಯು ಭಾರತದ ಏಳು ಭಾಷೆಗಳಲ್ಲಿ ಭಾಷಾಂತರವಾಗಿ ಪ್ರಕಟಗೊಳ್ಳುತ್ತಿದೆ. ಉರ್ದುವನ್ನು ಬಿಟ್ಟು ಹಿಂದಿ, ತಮಿಳು, ತೆಲುಗು, ಬಾಂಗ್ಲ, ಒಡಿಯಾ, ಮಳಯಾಳಂ ಹಾಗೂ ಕನ್ನಡ. ಕಳೆದ 2.5 ವರ್ಷದಿಂದ ಕನ್ನಡದಲ್ಲಿಯು ಈ ಪತ್ರಿಕೆಯು ಪ್ರಕಟಗೊಳ್ಳುತ್ತಿರುವುದು ಬಹಳ ಸಂತೋಷದ ವಿಷಯವಾಗಿದೆ. ಈ ಪತ್ರಿಕೆಯು ಧಾರ್ಮಿಕ ಪತ್ರಿಕೆ ಆದ್ದರಿಂದ ರಾಜಕೀಯ ನಿಟ್ಟಿನಲ್ಲಿ ಯಾವ ಸಂಬಂಧವೂ ಇಲ್ಲ.

ಈ ಪತ್ರಿಕೆಯಲ್ಲಿ ಜಾಗತಿಕ ಅಹ್ಮದಿಯ ಮುಸ್ಲಿಮ್ ಜಮಾಅತ್ತಿನ ಪಂಚಮ ಖಲೀಫ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್‌ರವರ ಶುಕ್ರವಾರದ ಪ್ರವಚನ (ಖುತ್‌ಬ ಜುಮುಅ) ವಿಶೇಷವಾಗಿರುತ್ತದೆ. ಆ ಖುತ್‌ಬದಲ್ಲಿ ಅವರು ಪವಿತ್ರ ಖುರ್‌ಆನ್ ಹಾಗೂ ಹದೀಸ್‌ಗಳ ಶಿಕ್ಷಣಗಳ ಪ್ರಕಾರ ತಮ್ಮ ಜಮಾಅತ್ತಿನ ಸದಸ್ಯರನ್ನು ಸಂಬೋಧಿಸುತ್ತಾರೆ. ನಿಮ್ಮ ಈ ಪ್ರವಚನವೂ ಎಂ.ಟಿ.ಎ ಎಂಬ ಚ್ಯಾನಲ್‌ನಲ್ಲಿ ಪ್ರತಿ ಶುಕ್ರವಾರ ನೇರವಾಗಿ ಪ್ರಸಾರವಾಗುತ್ತದೆ. ಅದನ್ನು ಇಡೀ ವಿಶ್ವದಾದ್ಯಂತ ಕೇಳ ಹಾಗೂ ನೋಡಬಹುದು. ತದನಂತರ ಈ ಖುತ್‌ಬ ಪತ್ರಿಕೆಯಲ್ಲಿ ಪಕಟಗೊಳ್ಳುತ್ತದೆ. ಖಲೀಫರ ಖುತ್‌ಬ ಈ ಪತ್ರಿಕೆಯ ಪ್ರಾಣವಾಗಿದೆ.

ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ವಾಗ್ದಾತ್ತ ಮಹೀಹರ 5ನೇ ಖಲೀಫರಾಗಿದ್ದಾರೆ ಅವರು ಲಂಡನ್‌ನಲ್ಲಿ ವಾಸವಾಗಿದ್ದಾರೆ. ಜಾಗತಿಕ ಅಹ್ಮದಿಯ ಮುಸ್ಲಿಮ್ ಜಮಾಅತ್ತಿನ ಇಮಾಮರಾಗಿದ್ದಾರೆ. ಅದಲ್ಲದೆ ಈ ಪತ್ರಿಕೆಯಲ್ಲಿ ಖಲೀಫರ ಪ್ರವಾಸಗಳ ವರದಿಗಳು ಪ್ರಕಟಗೊಳ್ಳುತ್ತದೆ ಅವೂ ಬಹಳ ಕುತೂಹಲಕಾರಿ ಆಗಿರುತ್ತದೆ. ಈ ವರದಿಗಳು ಜಮಾಅತ್ತಿನ ಸದಸ್ಯರ ಜ್ಞಾನ ಅಭಿವೃದ್ಧಿಯಲ್ಲಿ ವಿಶೇಶವಾಗಿ ಕಾರ್ಯ ನಿರ್ವಹಿಸುತ್ತದೆ. ಇದಲ್ಲದೆ ಜಮಾಅತ್ತಿನ ಕಾರ್ಯಗಳ ವರದಿಗಳು ಮತ್ತು ಆಧ್ಯಾತ್ಮಿಕ ಹಾಗೂ ಶೈಕ್ಷಣಿಕ ಅಭಿವೃದ್ಧಿಸುವಂತಹ ಜ್ಞಾನ ಭರಿತ ಲೇಖನಗಳು ಪ್ರಕಟಗೊಳ್ಳುತ್ತದೆ.

ಹೀಗಾಗಿ ಈ ಪತ್ರಿಕೆಯು ಮಹತ್ವಪೂರ್ಣವಾದ ಪತ್ರಿಕೆ ಆಗಿದೆ.

ಎಲ್ಲಾ ಓದುಗರಲ್ಲಿ ಈ ಪತ್ರಿಕೆಯನ್ನು ಕೊಂಡುಕೊಳ್ಳಬೇಕಾಗಿ ವಿನಂತಿಸಲಾಗುತ್ತಿದೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: +91 99153 79255, 9902678609, 9866358609 (ವ್ಯವಸ್ಥಾಪಕರು)

**ವಿಶೇಶ ಸೂಚನೆ**

**"ಬದರ್" ವಾರಪತ್ರಿಕೆಯ ಚಂದಾದರರಲ್ಲಿ ತಮ್ಮ ಬಾಕಿ ಇರುವ ವಾರ್ಷಿಕ ಶುಲ್ಕವನ್ನು ಶೀಘ್ರವೇ ಪಾವತಿಸಲು ವಿನಂತಿ. ಮೊಬೈಲ್ ಸಂಖ್ಯೆ: 9866358609 (ವ್ಯವಸ್ಥಾಪಕರು)**

**ವಿವಾಹ ಪ್ರಚಾರಪಡಿಸಲು ದಫ್ ಉಪಯೋಗಿಸಬಹುದು ಹೊರತು ಡೋಲು ಬಾರಿಸುತ್ತಾ ಕುಣಿಯುವುದು ನಿಷಿದ್ಧವಾಗಿದೆ**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಕೆಟ್ಟ ವಸ್ತುಗಳು ಹರಾಮ್ ಆಗಿದೆ ಮತ್ತು ಶುದ್ಧ ವಸ್ತುಗಳು ಹಲಾಲ್ ಆಗಿದೆ. ಅಲ್ಲಾಹನು ಯಾವುದೇ ಶುದ್ಧ ವಸ್ತುಗಳನ್ನು ನಿಷಿದ್ಧ (ಹರಾಮ್) ಗೊಳಿಸುವುದಿಲ್ಲ. ಬದಲು ಎಲ್ಲ ಶುದ್ಧ ವಸ್ತುಗಳು ಹಲಾಲ್ (ಧರ್ಮಬದ್ಧ) ಎನ್ನುತ್ತದೆ. ಆದರೆ ಶುದ್ಧ ವಸ್ತುಗಳೊಂದಿಗೆ ಅಶುದ್ಧ ವಸ್ತುಗಳನ್ನು ಬೆರಕೆ ಮಾಡಿದರೆ ಅದು ನಿಷಿದ್ಧವಾಗುತ್ತದೆ, ಈಗ ನೋಡಿ ವಿವಾಹವನ್ನು ಪ್ರಚಾರಪಡಿಸಲು ದಫ್ ಬಾರಿಸುವುದನ್ನು ಧರ್ಮಸಮ್ಮತವೆಂದಿದೆ. ಆದರೆ ಅದರಲ್ಲಿ ಡೋಲು ಬಾರಿಸುತ್ತಾ ಕುಣಿಯುವುದು ಇತ್ಯಾದಿ ಸೇರಿಸುವುದನ್ನು ನಿಷಿದ್ಧಗೊಳಿಸಲಾಗಿದೆ. ಆದರೆ ನಬಿ ಕರೀಂ ಸಲ್ಲಲ್ಲಾಹು ಅಲೈಹಿವಸಲ್ಲಮರ ರೀತಿಯನ್ನು ಅನುಸರಿಸಿದರೆ ಯಾವುದೂ ನಿಷಿದ್ಧವಲ್ಲ.

**(ಮಲ್‌ಫೂಝಾತ್, ಸಂಪುಟ–5, ಪುಟ–354, ಮುದ್ರಣ ಖಾದಿಯಾನ್ 2003)**

**ವಿವಾಹ ಸಂದರ್ಭದಲ್ಲಿ ನಿಷ್ಪ್ರಯೋಜಕ ಸಂಗೀತ, ಕುಣಿತ ಹಾಗೂ ಹಾಡುಗಳನ್ನು ಹಾಡಲು ಅನುಮತಿ ಇಲ್ಲ.**

ಹಝ್ರತ್ ಖಲೀಫತುಲ್ ಮಸೀಹ್ ಅಲ್ ಖಾಮಿಸ್ (ಅತಬಿಅ) ಹೇಳುತ್ತಾರೆ: "ಸಂತೋಷದ ಸಂದರ್ಭಗಳಲ್ಲಿ ಅಲ್ಲಾಹನ ಅನುಗ್ರಹಗಳನ್ನು ಬೇಡುವ ವಿವಾಹವನ್ನು ಅಲ್ಲಾಹನು ಎಲ್ಲಾ ರೀತಿಯಿಂದ ಯಶಸ್ಸಿಗೊಳಿಸಲಿ. ಬರುವ ಪೀಳಿಗೆ ಇಸ್ಲಾಮ್ ಧರ್ಮದ ಸೇವಕರಾಗಿರಲಿ, ಅಲ್ಲಾಹನ ವಿಧೇಯ ದಾಸರಾಗಿರಲಿ ಎನ್ನುವ ಬದಲು ಅಜಾಗೃತಗೊಂಡು ಹಾಡುಗಳನ್ನು ಹಾಡುತ್ತ ಶಿರ್ಕ್ (ಬಹು ದೇವಾರಾಧನೆ) ಮಾಡುವವರಾಗಿರುತ್ತಾರೆ. ದೂರುಗಳು ಬರುತ್ತಿರುತ್ತವೆ ಆದುದರಿಂದ ಇಂತಹ ಮನೆಯವರಿಗೆ ನಾನು ಎಚ್ಚರಿಕೆ ನೀಡುತ್ತೇನೆ, ಈ ರೀತಿಯ ನಿಷ್ಪ್ರಯೋಜಕ ಹಾಗೂ ನಿರರ್ಥಕತೆಯಿಂದ ದೂರವಿರಬೇಕು, ಹೀಗೆಯೇ ಡ್ಯಾನ್ಸ್ ಕುಣಿತಗಳಿಂದ, ವಧುವಿನ ಮನೆಯಲ್ಲಿ ನಾನಾ ರೀತಿಯ ಶೃಂಗಾರಗಳು ಅಥವಾ ವಿವಾಹ ನಂತರ ವಧು ವಿವಾಹವಾಗಿ ವರನ ಮನೆಗೆ ಹೋದಾಗ ಅಲ್ಲಿ ಕೆಲವು ಸಂದರ್ಭಗಳಲ್ಲಿ ನಿಷ್ಪ್ರಯೋಜಕ ರೀತಿಯ ಸಂಗೀತ ಅಥವಾ ಹಾಡುಗಳಿಗೆ ಕುಣಿಯುತ್ತಾರೆ, ಇದಕ್ಕೆ ಯಾವ ಕಾರಣಕ್ಕೂ ಅನುಮತಿ ನೀಡಲಾಗುವುದಿಲ್ಲ."

**(ಖುತ್‌ಬಾತೆ ಮಸ್‌ರೂರ್, ಸಂಪುಟ–3, ಪುಟ–687)**

***127 ನೇ ಜಲ್ಸಾ ಸಾಲಾನ ಖಾದಿಯಾನ್***

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 127ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 23, 24 ಮತ್ತು 25ನೇ ಡಿಸೆಂಬರ್ 2022 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮಲ್ಲಾಹ್.**

**(ನಾಝಿರ್ ಇಸ್ಲಾಹ್–ವ–ಇರ್‌ಶಾದ್ ಖಾದಿಯಾನ್)**

**ಖಾದಿಯಾನ್ ದಾರುಲ್ ಅಮಾನ್‌ನಲ್ಲಿ ವಾರ್ಷಿಕ ಇಜ್ತೆಮಾ ನಡೆಯುವ ದಿನಾಂಕಗಳು**

ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಆಝೀಝ್‌ರವರು ಭಾರತದಲ್ಲಿ ಅಂಗ ಸಂಸ್ಥೆಗಳ (ಮಜ್ಲಿಸ್ ಅನ್ಸರುಲ್ಲಾ, ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ, ಲಜ್ನಾ ಇಮಾಇಲ್ಲಾ) ರಾಷ್ಟ್ರೀಯ ವಾರ್ಷಿಕ ಕೂಟಗಳನ್ನು (ಇಜ್ತೆಮಾ) 21, 22 ಮತ್ತು 23ನೇ ಅಕ್ಟೋಬರ್ 2022 ರಂದು (ಶುಕ್ರವಾರ, ಶನಿವಾರ, ಭಾನುವಾರ) ಆಯೋಜಿಸಲು ಅನುಮತಿ ನೀಡಿದ್ದಾರೆ.

ಎಲ್ಲಾ ಉಪ ಸಂಸ್ಥೆಗಳ ಸದಸ್ಯರು ಖಾದಿಯಾನಿನಲ್ಲಿ ಈ ಆಧ್ಯಾತ್ಮಿಕ ಪರಿಸರದಲ್ಲಿ ಆಯೋಜಿಸಲಾಗುವಂತಹ ಇಜ್ತೆಮಾಗಳಲ್ಲಿ ಪಾಲ್ಗೊಳ್ಳಲು ಇಂದಿನಿಂದಲೆ ತಯಾರಿ ಪ್ರಾರಂಭಿಸಿರಿ. ಈ ಇಜ್ತೆಮಾಗಳು ತರಬೇತಿಯ ಮುಖ್ಯ ಮೂಲವಾಗಿದೆ.

**(ಸದರ್ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಭಾರತ)**

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613
Weekly **BADAR** Qadian
Distt: Gurdaspur (Pb.) INDIA Qadian - 143516
Postal Reg. No: 3000039689/2020-22 Vol No.03, Thursday, 02 June 2022, Issue No. 22

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.575/- (Per Issue: 10/- ) (WEIGHT: 20-50, grms / issue)

## ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)

(ಬದರ್ ಸಂಚಿಕೆ 21ರ ಉಳಿದ ಭಾಗ)

**ಹುಝೂರ್ ಅನ್ವರ್ ಅವರ ಭಾಷಣ ಆಲಿಸಿದ ಅತಿಥಿಗಳ ಅನಿಸಿಕೆಗಳು:**

* ಮಸ್ಜಿದ್ ಬೈತುಲ್ ಖಾದಿರ್ ಉದ್ಘಾಟನಾ ಸಮಾರಂಭದ ಸಂದರ್ಭದಲ್ಲಿ ಹುಝೂರೆ ಅನ್ವರ್ (ಅಬಿಅ) ಮಾಡಿದ ಭಾಷಣದಿಂದ ಅತಿಥಿಗಳು ತುಂಬಾ ಪ್ರಭಾವಿತರಾದರು ಮತ್ತು ಕೆಲ ಅತಿಥಿಗಳು ತಕ್ಷಣ ತಮ್ಮ ಭಾವನೆಗಳನ್ನು, ಅನಿಸಿಕೆಗಳನ್ನು ವ್ಯಕ್ತಪಡಿಸಿದರು.

* ಅತಿಥಿಯೊಬ್ಬರು ತನ್ನ ಭಾವನೆಗಳನ್ನು ವ್ಯಕ್ತಪಡಿಸುತ್ತಾ ಹೀಗೆ ಹೇಳಿದರು.

ಖಲೀಫತುಲ್ ಮಸೀಹ್ ಅವರಂತಹ ಮಹಾತ್ಮರು ಕ್ಷಮೆ ಕೇಳುವ ಮೂಲಕ ನಮ್ಮ ಹೃದಯವನ್ನು ಗೆದ್ದುಕೊಂಡಿದ್ದಾರೆ. ಅವರು ಕೇವಲ ಅಹ್ಮದಿಯರ ಖಲೀಫರಲ್ಲ. ಬದಲು ನಮ್ಮ ಖಲೀಫರು ಸಹ ಹೌದು. ನಮ್ಮೆಲ್ಲರ ಖಲೀಫರಾಗಿದ್ದಾರೆ.

ಅತಿಥಿಯೊಬ್ಬರು ಹೇಳಿದರು. ಖಲೀಫತುಲ್ ಮಸೀಹ್ ಅವರು ಬಾಕಿ ಎಲ್ಲಾ ಭಾಷಣಗಾರರ ಮಾತುಗಳನ್ನು ಆಯ್ದುಕೊಂಡು ಇಸ್ಲಾಮಿ ಶಿಕ್ಷಣವನ್ನು ವಿವರಿಸುವ ಮೂಲಕ ಅವರ ಮಾತುಗಳ ಮೇಲೆ ಒಂದು ಕಿರೀಟ ಹೆಚ್ಚಿದಂತಾಗಿದೆ.

* ನೆರೆಮನೆಯಲ್ಲಿ ವಾಸಿಸುತ್ತಿರುವ ರಸ್ತೆಯ ಬೇರೆ ಬದಿಯಲ್ಲಿ ಇರುವ ಮಹಿಳೆಯೊಬ್ಬರು ಹೇಳುತ್ತಾರೆ ಮಸೀದಿ ನಿರ್ಮಾಣಕ್ಕಿಂತ ಮೊದಲು ನಾನು ಜಮಾಅತನ್ನು ಗುರುತಿಸಿರಲಿಲ್ಲ. ಇದು ನನ್ನ ಮೊದಲ ಅವಕಾಶವಾಗಿದೆ. ನನಗೆ ಇಂದು ಇಸ್ಲಾಮಿನ ಒಂದು ಹೊಸ ಮುಖದ ದರ್ಶನವಾದಂತಾಗಿದೆ. ಇದಕ್ಕಿಂತ ಮೊದಲು ನನಗೆ ಇದರ ಅರಿವು ಇರಲಿಲ್ಲ. ಏಕೆಂದರೆ ನಾನು ನಿಮ್ಮನ್ನು ಗುರುತಿಸಿರಲಿಲ್ಲ. ಅವರು ಹೇಳಿದರು ನಿಮ್ಮ ಖಲೀಫರನ್ನು ನೋಡಿ ಅವರು ನಮ್ಮವರಂತೆಯೇ ಕಂಡರು. ಅವರು ತುಂಬಾ ಮನೋಹರ ವ್ಯಕ್ತಿತ್ವ ಉಳ್ಳವರಾಗಿದ್ದಾರೆ. ಅವರೊಳಗೆ ಮಾನವತೆಯ ಕಳಕಳಿ ಇದೆ. ಅವರು ಅಪರಿಚಿತರಂತೆ ಮಾತನಾಡುತ್ತಿರಲಿಲ್ಲ. ಬದಲು ನಮ್ಮಲ್ಲಿಯೇ ಒಬ್ಬರಾಗಿರುವಂತೆ ಕಂಡರು.

* ಈ ಸಮಾರಂಭದಲ್ಲಿ ಭಾಗವಹಿದ್ದ ಇನ್ನೊಬ್ಬ ವೃದ್ಧ ವ್ಯಕ್ತಿ ಹೇಳಿದರು. ನಮಗೆ ಒಂದಿಷ್ಟು ಕಾಯಬೇಕಾಯಿತು. ಆದರೆ ನಿಮ್ಮ ಖಲೀಫರು ಕೃತಜ್ಞತೆ ಸಲ್ಲಿಸಿದ ರೀತಿ ಮತ್ತು ಕ್ಷಮೆ ಯಾಚಿಸಿದ ರೀತಿ ಬಹಳ ಮನ ಮೆಚ್ಚುವಂತಾಯಿತು. ನಾವು ಕಾದುದನ್ನು ಮರೆತುಬಿಟ್ಟೆವು.

* ಮತ್ತು ಹೇಳಿದರು. ಪೋಪರು ಈ ರೀತಿ ಸಮಾರಂಭದಲ್ಲಿ ತಡವಾಗಿ ಬರುತ್ತಿದ್ದರೆ ಎಂದೂ ಕ್ಷಮೆ ಕೇಳುತ್ತಿರಲಿಲ್ಲ. ಬಹುಶಃ ಅವರಿಗೆ ಕ್ಷಮೆ ಯಾಚಿಸುವ ಅಗತ್ಯವೇ ಅನಿಸುತ್ತಿರಲಿಲ್ಲ. ಆದರೆ ಇನ್ನೊಂದೆಡೆ ಹುಝೂರ್ ರವರು ಓರ್ವ ಪವಿತ್ರ ವ್ಯಕ್ತಿಯಾಗಿದ್ದಾರೆ. ಅವರು ಕ್ಷಮೆಯಾಚಿಸಿದ್ದು ನಿಜವಾಗಿಯೂ ಅವರ ಘನತೆಗೆ ಹಿಡಿದ ಕನ್ನಡಿಯಾಗಿದೆ. ಹುಝೂರ್ ಕ್ಷಮೆಯಾಚಿಸುವ ಪದಗಳನ್ನು ಹೇಳುತ್ತಲೇ ನಮ್ಮೆಲ್ಲರ ಮುಖಗಳು ಅರಳಿದವು.

* ಈ ಸಮಾರಂಭದಲ್ಲಿ ಭಾಗವಹಿಸಿದ್ದ ಒಬ್ಬ ರೇಡಿಯೋ ಪ್ರತಿನಿಧಿ ಹೇಳುತ್ತಾರೆ. ನಿಮ್ಮ ಖಲೀಫರು ಆಗಮಿಸುತ್ತಿದ್ದಂತೆಯೇ ನನ್ನ ಶರೀರ ಕಂಪಿಸಿತು. ಹುಝೂರ್ ರವರಿಂದ ಒಂದು ಅದ್ಭುತವಾದ ಪ್ರಕಾಶ ಉಕ್ಕಿ ಬರುತ್ತಿತ್ತು. ಅವರಿಂದ ಒಂದು ವಿಶೇಷ ರೀತಿಯ ಪ್ರಕಾಶ ಬರುವುದನ್ನು ನಾನು ಕಂಡಿದ್ದೇನೆ.

* ಈ ಸಮಾರಂಭದಲ್ಲಿ ಉಪಸ್ಥಿತರಿದ್ದ ಓರ್ವ ಜರ್ಮನ್ ಮಹಿಳೆ ತನ್ನ ಭಾವನೆಗಳನ್ನು ವ್ಯಕ್ತಪಡಿಸುತ್ತ ಹೀಗೆ ಹೇಳಿದರು. ಹುಝೂರ್ ಅವರು ತನ್ನ ಭಾಷಣದಲ್ಲಿ ಆಫ್ರಿಕಾದ ಬಗ್ಗೆ ಹೇಳಿರುವಂತಹ ಮಾತುಗಳು ಅಕ್ಷರಶ: ಸತ್ಯವಾಗಿವೆ. ಹುಝೂರ್ ರವರು ಆಫ್ರಿಕಾದಲ್ಲಿರುವ ಬವಣೆ ವಿವರಿಸುತ್ತಿರುವಾಗ ನನ್ನ ಮೈ ಜುಮ್ಮೆನ್ನಿತು. ಮತ್ತು ಅದೇ ಸಮಾರಂಭದಲ್ಲಿ ತನಗೆ ನೀರು ಪ್ರಸ್ತುತಪಡಿಸಿದಾಗ ಹುಝೂರೆ ಅನ್ವರ್ ಅವರ ಪದಗಳನ್ನು ಆಲಿಸಿ ಆಫ್ರಿಕಾದಲ್ಲಿರುವ ಬಡವರ ಸ್ಥಿತಿ ಕಲ್ಪಿಸಿಕೊಂಡಾಗ ನನಗೆ ನೀರು ಕುಡಿಯುವುದು ಕಷ್ಟವಾಗುತಿತ್ತು.

* ಓರ್ವ ಶಾಲೆಯ ಮುಖ್ಯೋಪಾಧ್ಯಾಯಿನಿ ಈ ಸಮಾರಂಭದಲ್ಲಿ ಅತಿಥಿಯಾಗಿ ಭಾಗವಹಿಸಿದ್ದರು. ಅವರು ಹೇಳಿದರು. ನಾನು ಪೋಪ್ ಅವರನ್ನು ಸಹ ಭೇಟಿಯಾಗಿದ್ದೇನೆ. ಆದರೆ ಇಂದಿನ ದಿನ ನನ್ನ ಜೀವನದಲ್ಲಿ ಒಂದು ಮಹತ್ತರ ದಿನವಾಗಿದೆ. ನಾನು ಖಲೀಫರನ್ನು ಕಂಡಿದ್ದೇನೆ. ಖಲೀಫರು ನನ್ನ ಹೃದಯವನ್ನು ಗೆದ್ದುಕೊಂಡಿದ್ದಾರೆ.

* ಹುಝೂರೆ ಅನ್ವರ್(ಅಬಿಅ) ಮಹಿಳೆಯರ ಮಾರ್ಕಿನಲ್ಲಿ ಹೋಗುತ್ತಿರುವಾಗ ಅವಳು ಸಹ ಹುಝೂರ್‌ರನ್ನು ಕಾಣಲು ಲಜ್ನಾ ಮಾರ್ಕಿಗೆ ಹೋಗಿದ್ದಳು. ಆ ಸಂದರ್ಭದಲ್ಲಿ ಇನ್ನೂ ಕೆಲ ಅಹ್ಮದಿಯೇತರ ಜರ್ಮನ್ ಮಹಿಳೆಯರು ಹುಝೂರೇ ಅನ್ವರ್ ಅವರನ್ನು ಕಾಣಲು ಧಾವಿಸಿ ಲಜ್ನಗಳ ಮಾರ್ಕಿನೆಡೆ ಹೋದರು. ಅವರಲ್ಲಿ ಕೆಲ ಮಹಿಳೆಯರ ಕಣ್ಣುಗಳಲ್ಲಿ ಸಂತಸ ಮತ್ತು ಆನಂದಭಾಷ್ಪ ಸುರಿಯುವುದನ್ನು ಕಾಣುವಂತಾಯಿತು.

* Vechta ನಗರದಲ್ಲಿ ಕಟ್ಟಡ ನಿರ್ಮಾಣಗಳಿಗಾಗಿ ಅನುಮತಿ ನೀಡುವ ವಿಭಾಗದ ಇನ್‌ಚಾರ್ಜ್, ಅವರು ನಮ್ಮ ಮಸೀದಿಯ ನಿರ್ಮಾಣ ಕಾರ್ಯಕ್ಕು ಅನುಮತಿ ನೀಡಿದ್ದರು. ಅವರೂ ಸಹ ಈ ಸಮಾರಂಭದಲ್ಲಿ ಭಾಗವಹಿಸಿದ್ದರು. ಅವರು ತಮ್ಮ ಅನಿಸಿಕೆಗಳನ್ನು ಹೀಗೆ ವ್ಯಕ್ತಪಡಿಸಿದರು. ನಿಮ್ಮ ಖಲಿಫರ ಭಾಷಣವು ತುಂಬಾ ಅದ್ಭುತವಾಗಿತ್ತು. ಶಾಂತಿಯ ಸಂದೇಶ ಮತ್ತು ವಿಶೇಷವಾಗಿ ದೇಶ ಸೇವೆ ಮತ್ತು ದೇಶ ಅಭಿವೃದ್ಧಿಯಲ್ಲಿ ಮುನ್ನಡೆಯಬೇಕೆಂಬ ಮತ್ತು ಯಾವ ವರ್ಣಭೇದವಿಲ್ಲದೆ ಮಾನವಿತೆಯ ಸೇವೆ ಮಾಡಬೇಕೆಂಬ ಮಾತುಗಳು ತುಂಬಾ ಶ್ರೇಷ್ಠವಾಗಿದ್ದವು. ಇದು ಕೇವಲ ನನ್ನ ಸಂತೋಷದ ವಿಷಯವಾಗಿರಲಿಲ್ಲ. ಬದಲು ಈ ಮಾತುಗಳು ನನಗೆ ಅಚ್ಚರಿಗೊಳಿಸಿದವು. ಓರ್ವ ವಿದೇಶದ ವ್ಯಕ್ತಿ ಇತರ ದೇಶಗಳ ಬಗ್ಗೆ ಇಂತಹ ಉದಾತ್ತ ಭಾವನೆ ಹೊಂದಿದವರಾಗಿದ್ದಾರೆ!

* Vechta ಜಮಾಅತಿನ ಅಧ್ಯಕ್ಷರು ಹೇಳುತ್ತಾರೆ. ನಮ್ಮ ಜಮಾಅತ್ ಮಿತ್ರರೊಬ್ಬರು ಈ ಸಮಾರಂಭದಲ್ಲಿ ಭಾಗವಹಿಸಿದ ಅತಿಥಿಗಳಿಗೆ ಒಂದು ದಿನ ಸಿಹಿ ಕೊಡಲು ಬಂದಾಗ ದಂಪತಿಯೊಬ್ಬರು ಹೇಳಿದರು. ನಾವು ಮನೆಗೆ ಮರಳಿ ಬಂದ ಮೇಲೆ ರಾತ್ರಿ ಎಷ್ಟೋ ಸಮಯದವರೆಗೆ ನಮ್ಮ ಮುಂದೆ ನಿಮ್ಮ ಖಲೀಫರ ಮುಖ ಪದೇ ಪದೇ ಬರುತಿತ್ತು.

* ಅದೇ ರೀತಿ ಮಸ್ಜಿದ್ ಬೈತುಲ್ ಖಾದಿರ್ ನಕ್ಷೆ ತಯಾರು ಮಾಡಿದ ವಿನ್ಯಾಸಗಾರರು ಹೇಳಿದರು. ನಿನ್ನೆ ಈ ಸಮಾರಂಭದಲ್ಲಿ ನಾನು ಎಷ್ಟೊಂದು ಮಗ್ನನಾಗಿ ಬಿಟ್ಟಿದ್ದೆನೆಂದರೆ ಸಮಯದ ಅರಿವೇ ಆಗಲಿಲ್ಲ. ನಾನು ಯಾವುದೋ ಅತ್ಯಂತ ಸ್ವಾರಸ್ಯಕರವಾದ ಚಿತ್ರ ನೋಡುವಂತೆ ಭಾಸವಾಗುತಿತ್ತು. ಹುಝೂರೆ ಅನ್ವರ್ ಅವರ ಭಾಷಣ ನನ್ನ ಮೇಲೆ ಗಾಢವಾದ ಪ್ರಭಾವ ಬೀರಿದೆ.

ಮತ್ತು ಅವರು ಹೇಳಿದರು. Vechta ನಗರದಲ್ಲಿ ಯಾರಾದರೂ ನಿಮಗೆ ತೊಂದರೆ ನೀಡಿದರೆ ಹೇಳಿ ಅವಶ್ಯವಾಗಿ ನಾನು ನಿಮಗೆ ಸಹಕರಿಸುವೆನು.

* ಅದೇ ರೀತಿ ತತ್ವಜ್ಞಾನದ ಶಿಕ್ಷಕರೊಬ್ಬರು ಈ ಸಮ್ಮೇಳನದಲ್ಲಿ ಕಲ್ಲುಗಳಿಗೆ ಹೋಲಿಸಿ ಉಪದೇಶ ಮಾಡಿದ್ದು, ನಿಮ್ಮ ಹೃದಯಗಳು ಕಲ್ಲಿನಂತಾಗಬಾರದು. ಬದಲು ನೀರು ಚಿಮ್ಮುವ ಹೃದಯಗಳಾಗಬೇಕು ಎಂಬ ಮಾತು ನನಗೆ ತುಂಬಾ ಹಿಡಿಸಿತು.

ನಮ್ಮ ಕೆಲ ಅಹ್ಮದಿ ವಿದ್ಯಾರ್ಥಿಗಳು ಅವರಲ್ಲಿ ಕಲಿಯುತ್ತಿದ್ದಾರೆ. ಅವರು ಹೇಳಿದರು. ಮರುದಿನ ತರಗತಿಯಲ್ಲಿ ಆ ಶಿಕ್ಷಕರು ಸುಮಾರು ಐದು ನಿಮಿಷದವರೆಗೆ ಎಲ್ಲ ವಿದ್ಯಾರ್ಥಿಗಳಿಗೆ ಈ ಸಮ್ಮೇಳನದ ಬಗ್ಗೆ ಹೇಳಿದರು ಮತ್ತು ಜಮಾಅತನ್ನು ಪ್ರಶಂಸಿಸಿದರು.

* ಸಮಾರಂಭದ ನಂತರ ಜಮಾಅತ್ ಬಾಂಧವರು ಹುಝೂರ್ ಅನ್ವರ್ (ಅಬಿಅ) ಅವರೊಂದಿಗೆ ಭಾವಚಿತ್ರ ತೆಗೆಯಿಸಿಕೊಳ್ಳುವ ಇಚ್ಛೆ ವ್ಯಕ್ತಪಡಿಸಿದರು. ಆ ಜರ್ಮನ್ ಬಾಂಧವರ ಮುಖಗಳಿಂದ ಪ್ರೀತಿ ಮತ್ತು ಶ್ರದ್ಧಾ ಭಾವನೆಗಳು ವ್ಯಕ್ತವಾಗುತ್ತಿದ್ದವು. 7, 8 ಜರ್ಮನ್ ಅತಿಥಿಗಳ ಈ ತಂಡದಲ್ಲಿ ಒಬ್ಬರು ಉಪಮೇಯರ್, ಒಬ್ಬ ಡಾಕ್ಟರ್ ಮತ್ತು ಇತರ ಉಚ್ಚ ಅಧಿಕಾರಿಗಳು ಶಾಮೀಲಾಗಿದ್ದರು.

(ಮುಂದುವರಿಯುವುದು)

ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:
**NATIONAL TOLL FREE : 1800–103–2131**
ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ
(ಶುಕ್ರವಾರ ರಜೆ)

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.